ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜುಲೈ, ೨೦೨೧ **ಸಂಪಾದಕ : ಡಿ. ಎಸ್. ನಾಗಭೂಷಣ** ಸಂಪುಟ: ೧೦ ಸಂಚಿಕೆ: ೬

ಚಂದಾ ರೂ. ೨೦೦/- (೨೦೨೧ರ ಏಪ್ರಿಲ್‌ನಿಂದ ೨೦೨೨ರ ಮಾರ್ಚ್‌ವರೆಗೆ) ಸಂಸ್ಥೆಗಳಿಗೆ ರೂ. ೩೦೦/- ಪುಟ: ೨೦ ಬೆಲೆ: ರೂ. ೨೫/-

ವಿಳಾಸ: ಎಚ್.ಐ.ಜಿ-೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪

ದೂ: ೦೮೧೮೨-೨೪೮೫೭೪ ಸಂಚಾರಿ: ೯೪೮೪೯ ೭೨೨೮೪ *ಈ ಮೇಲ್:* dsnagabhushana@gmail.com

ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ನಮ್ಮ ಕೇಂದ್ರ ಸರ್ಕಾರಕ್ಕೆ ತಡವಾಗಿಯಾದರೂ ವಿವೇಕ ಮೂಡಿ ಇಡೀ ದೇಶದ ಲಸಿಕೆ ಕಾರ್ಯಕ್ರಮವನ್ನು ತಾನೇ ವಹಿಸಿಕೊಂಡು ಸಂಭವಿಸಬಹುದಾಗಿದ್ದ ಇನ್ನಷ್ಟು ಅಪಾರ ಸಾವು ನೋವುಗಳಿಂದ ದೇಶವಾಸಿಗಳನ್ನು ಕಾಪಾಡಿದೆ. ಈ ಕಾರ್ಯಕ್ರಮದ ಜವಾಬ್ದಾರಿಯನ್ನು ರಾಜ್ಯಗಳಿಗೆ ಹಂಚಿದ್ದ ಅದರ ಈ ಮೊದಲ ನೀತಿ ಮೇಲ್ನೋಟಕ್ಕೇ ಅವ್ಯವಹಾರಿಕವಾಗಿದ್ದು ಸಹಜವಾಗಿಯೇ ಅದು ಪ್ರಾರಂಭವನ್ನೇ ಕಂಡಿರಲಿಲ್ಲ. ಕರೋನಾದ ಮೂರನೆಯ ಅಲೆಯ ರೂಪವಾದ ಡೆಲ್ಟ ಪ್ಲಸ್ ಈಗಾಗಲೇ ಮೂರು ರಾಜ್ಯಗಳಲ್ಲಿ ಪ್ರತ್ಯಕ್ಷವಾಗಿ ಮಧ್ಯಪ್ರದೇಶದಿಂದ ಅದರ ಮೊದಲ ಬಲಿಯೂ ವರದಿಯಾಗಿರುವ ಈ ಸಂದರ್ಭದಲ್ಲಿ ಲಸಿಕೆ ಕಾರ್ಯಕ್ರಮ ಚುರುಕುಗೊಂಡಿರುವುದು ಒಂದಿಷ್ಟು ನೆಮ್ಮದಿ ತರುವ ಸಂಗತಿಯೇ ಆಗಿದೆ.

ಆದರೆ ಈ ಲಸಿಕೆ, ರೂಪಾಂತರಗೊಂಡು ಒಂದರಮೇಲೊಂದು ಅಲೆಯಂತೆ ಬರುತ್ತಿರುವ ಈ ಸಾಂಕ್ರಾಮಿಕಕ್ಕೆ ಒಂದು ನಿಜವಾದ ನೆಮ್ಮದಿಯ ಪರಿಹಾರವೇ ಎಂಬ ಪ್ರಶ್ನೆ ಇದ್ದೇ ಇದೆ. ಹಾಗೆ ನೋಡಿದರೆ ಈ ಕರೋನಾ ಪ್ರಸಂಗದಲ್ಲಿ ವಿಜ್ಞಾನದ, ನಿರ್ದಿಷ್ಟವಾಗಿ ವೈದ್ಯ ವಿಜ್ಞಾನದ ವಿಶ್ವಾಸಾರ್ಹತೆಯ ಪ್ರಶ್ನೆ ಸಾರ್ವಜನಿಕಗೊಂಡಿದೆ. ನಾವು ಸಾರ್ವಜನಿಕ ಜೀವನದಲ್ಲಿ ನ್ಯಾಯ ನಿಷ್ಕರ್ಷೆಯೂ ಸೇರಿದಂತೆ ಹಲವು ಸಂಗತಿಗಳ ಚರ್ಚೆ-ಪರಿಶೀಲನೆಗಳಿಗಾಗಿ ಬಳಸುವ 'ವೈಜ್ಞಾನಿಕ' ಎಂಬ ಶಬ್ದ ಅಷ್ಟೇನೂ ಪವಿತ್ರವಾಗಿರದೆ ಅದೂ ಒಂದು ಕಲಬೆರಕೆಯ 'ರಚನೆ' ಎಂಬುದು ಗೊತ್ತಾಗತೊಡಗಿದೆ. ಮೊದಲಿಗೆ ಈ ಸಂಬಂಧ ನಾವು ಭೌತ-ರಸಾಯನ-ಜೀವ ವಿಜ್ಞಾನಗಳ ಸೂಕ್ಷ್ಮ ಸಂಯೋಜನೆಯಾದ ವೈದ್ಯವಿಜ್ಞಾನ ಕರೋನಾ ಎಂಬ ವೈರಾಣು ಕುಲ ಹುಟ್ಟು ಹಾಕಿರುವ ಸವಾಲಿನ ಎದುರು ಹೇಗೆ ತತ್ತರಿಸಿಹೋಗಿದೆ ಎಂಬುದನ್ನು ಗಮನಿಸಬೇಕು. ಈ ವೈರಾಣುವಿನ ರಚನೆಯನ್ನು ಅದರೆಲ್ಲ ರೂಪಾಂತರ ಸಾಧ್ಯತೆಗಳೊಂದಿಗೆ ಅರಿಯಲು, ತಾನೇ ಒಂದು ವಿಶೇಷ ಜ್ಞಾನ ಶಾಖೆಯಾಗಿ ಬೆಳೆದಿರುವ ಅತ್ಯಾಧುನಿಕ ವೈರಾಣು ವಿಜ್ಞಾನಕ್ಕೂ ಸಾಧ್ಯವಾಗದಾಗಿದೆ, ಈ ವೈರಾಣುವಿನ ಒಂದು ರೂಪವನ್ನು ನಾಶ ಮಾಡುವ ಪ್ರಯತ್ನ ನಡೆಯುತ್ತಿದ್ದಂತೆ ಅದು ಇನ್ನೊಂದು ಮತ್ತು ಇನ್ನಷ್ಟು ಮಾರಕವಾಗಿ ರೂಪಾಂತರಗೊಂಡು ಪ್ರತ್ಯಕ್ಷವಾಗುತ್ತಾ ಲಸಿಕೆಗಳ ಅಸ್ತ್ರ ಪ್ರಯೋಗಗಳನ್ನು ಸುಸ್ತು ಮಾಡುತ್ತಿದೆ.

ಈ ವೈರಾಣು ವೈದ್ಯ ವಿಜ್ಞಾನಕ್ಕೆ ಹೀಗೆ ದೊಡ್ಡ ಸವಾಲಾಗಿರಲು ಮುಖ್ಯ ಕಾರಣ ಇದರ ಮೂಲ ಯಾವುದು ಎಂಬುದು ಇನ್ನೂ ನಿಗೂಢವಾಗಿರುವುದೇ ಆಗಿದೆ ಎಂದು ಹೇಳಲಾಗುತ್ತಿದೆ. ಈ ನಿಗೂಢತೆಯ ಹಿಂದೆ ವೈದ್ಯ ವಿಜ್ಞಾನ ಮಾತ್ರವಲ್ಲ, ಇಡೀ ವಿಜ್ಞಾನ ಕ್ಷೇತ್ರವೇ ಒಂದು ಜ್ಞಾನಲೋಕಕ್ಕಿಂತ ಹೆಚ್ಚಾಗಿ ಲಾಭಕೋರ ಉದ್ಯಮ ಲೋಕವಾಗಿ ಮಾರ್ಪಾಡಾಗಿರುವ ದುರಂತ ಅಡಗಿದೆ ಎಂಬುದು ಸ್ಪಷ್ಟವಾಗುತ್ತಿದೆ. ಮಾರಕ ಸಾರ್ಸ್ ಜ್ವರಕ್ಕೆ ಕಾರಣವಾಗಿದ್ದ ವೈರಾಣು ಕರೋನಾ ಕುಲದ ವೈರಾಣುವೇ ಆಗಿದ್ದು, ಆ ವೈರಾಣುವಿನಂತೆಯೇ ಸದ್ಯದ ಕೋವಿಡ್ ವೈರಾಣುವೂ ತನ್ನ ಸೋಂಕಿನ ರೂಪದಲ್ಲಿ ಮೊದಲು ಕಂಡು ಬಂದದ್ದು ಚೀನಾದ ಅತ್ಯಂತ ಕೈಗಾರಿಕೀಕೃತ ನಗರವೆಂದು ಹೇಳಲಾಗುವ ವೂಹಾನ್‌ನಲ್ಲಿ. ಮೊದಲು ಈ ವೈರಾಣು ಈ ನಗರದ ಅತ್ಯಾಧುನಿಕ ಮಾಂಸದ ಮಾರುಕಟ್ಟೆಯಲ್ಲಿನ ಶೀತಲೀಕೃತ ಮಾಂಸದಲ್ಲಿದ್ದು ಅದನ್ನು ತಿಂದವರಿಂದ ಹರಡಿದ್ದು, ಅದು ನಾಶದ ಅಂಚಿನಲ್ಲಿರುವ ಬಾವಲಿ ಕುಲವೊಂದರಿಂದ ಆ ಮಾಂಸಕ್ಕೆ ರವಾನೆಯಾಗಿರುವ ಸಾಧ್ಯತೆಯನ್ನು ಊಹಿಸಲಾಗಿತ್ತು. ಆದರೆ ಈ ವುಹಾನ್ ನಗರ ಚೀನಾ ಸರ್ಕಾರದ ಜಗತ್ತಿನ ಅತ್ಯಂತ ಅತ್ಯಾಧುನಿಕ ವೈರಾಣು ಸಂಶೋಧನಾ ಕೇಂದ್ರ ಸ್ಥಳವೂ ಆಗಿರುವುದು, ಸದ್ಯದ ಮಾರಕ ವೈರಾಣು ಈ ಸಂಶೋಧನಾ ಸಂಸ್ಥೆಯ ಪ್ರಯೋಗಾಲಯದಿಂದ ಉದ್ದೇಶಪೂರ್ವಕವಾಗಲ್ಲದಿದ್ದರೂ ಆಕಸ್ಮಿಕವಾಗಿ ಹೊರಬಂದು ಹಾವಳಿ ರೂಪ ತಳೆದಿರುವ ಸಾಧ್ಯತೆಯನ್ನೂ ಈಗ ಜಗತ್ತಿನ ವಿವಿಧೆಡೆ ಗಂಭೀರವಾಗಿ ಪರಿಶೀಲಿಸಲಾಗುತ್ತಿದೆ. ಏಕೆಂದರೆ ಚೀನಾದ ಹಾಳುಬಿದ್ದ ಗಣಿಯೊಂದರಲ್ಲಿ ಕಂಡುಬಂದ ಬಾವಲಿಯ ಅವಶೇಷದಲ್ಲಿದ್ದು, ಅದರ ಸನಿಹ ಪ್ರದೇಶದ ಜನರಲ್ಲಿ ಮಾರಕ ರೋಗವಾಗಿ ಹರಡಿದ ವೈರಾಣು ಸದ್ಯದ ಕೋವಿಡ್ ವೈರಾಣುವನ್ನೇ ಬಹುಪಾಲು ಹೋಲುತ್ತಿದ್ದು ವುಹಾನ್‌ನ ಈ ಸಂಸ್ಥೆ ಅದರ ವಿವಿಧ ರೂಪಾಂತರಗಳ ಸೋಂಕಿನ ತೀವ್ರತೆಗಳ ಬಗ್ಗೆ ಅಧ್ಯಯನ ನಡೆಸಿದೆ. ಇದರ ಹಿಂದಿನ ಉದ್ದೇಶ ಭವಿಷ್ಯದಲ್ಲಿನ ಇವುಗಳ ಸಂಭವನೀಯ ಸೋಂಕುಗಳಿಗೆ ಔಷಧಗಳನ್ನು ರೂಪಿಸುವುದು. ಅಂದರೆ ಇದು ಔಷಧೋದ್ಯಮದ ಸಂಸ್ಥೆಯೂ ಹೌದು. ಇದನ್ನರಿತ ಅಮೆರಿಕಾ ಸರ್ಕಾರ ಈ 'ಸಂಶೋಧನೆ'ಗೆ ತನ್ನ ವೈದ್ಯ ವಿಜ್ಞಾನ ಆಗ ಸಂಸ್ಥೆಗಳ ಮೂಲಕ ಕೋಟ್ಯಾಂತರ ಡಾಲರುಗಳ ಹಣ ಮತ್ತು ಪರಿಣಿತರ ವಿನಿಮಯ ರೂಪದ ತನ್ನ ಸಹಯೋಗವನ್ನು ಒದಗಿಸಿದೆ. ಹಾಗಾಗಿಯೇ. ಈ ವೈರಾಣುವಿನ ಮೂಲ ರೂಪ ಪ್ರಕೃತಿಯದ್ದೇ ಆದರೂ, ಅದರ ವಿಭಿನ್ನ ರೂಪಗಳು ಪ್ರಯೋಗಾಲಯದ ಪರಿಣಾಮಗಳಿರಬಹುದು ಎಂದು ಹೇಳಲಾಗುತ್ತಿದೆ. ಈ ಬಗ್ಗೆ ತನಿಖೆ ನಡೆಸುವ ಎಲ್ಲ ಪ್ರಯತ್ನಗಳಿಗೂ ಚೀನಾ ಸರ್ಕಾರ ತನ್ನದೇ ಕಾರಣಗಳನ್ನು ಮುಂದೊಡ್ಡಿ ಅಡೆ ತಡೆಗಳನ್ನು ನಿರ್ಮಿಸುತ್ತಿದೆ. ಇದು ಈ ವೈರಾಣುವಿನ ಪ್ರಯೋಗಾಲಯದ ಮೂಲ ಕುರಿತ ಊಹೆಯನ್ನು ಬಲಪಡಿಸುತ್ತಿದೆ.

ಈ ಇಡೀ ಪ್ರಸಂಗದ ಅತ್ಯಂತ ದುರಂತಮಯ ಸಂಗತಿ ಎಂದರೆ ಅಮೆರಿಕಾದ ವಿಜ್ಞಾನಿಗಳೂ ಸೇರಿದಂತೆ ಅಂತಾರಾಷ್ಟ್ರೀಯ ವಿಜ್ಞಾನಿಗಳ ಸಮುದಾಯ ಈ ವಿಷಯದಲ್ಲಿ ಎರಡು ಗುಂಪುಗಳಾಗಿ ಪರಸ್ಪರ ಎದುರಾಗಿ ನಿಂತಿರುವುದು; ಪ್ರಚಾರ, ಲಾಬಿಗಳನ್ನು ರೂಪಿಸುತ್ತಿರುವುದು. ಇದು ಇಂದು ವೈದ್ಯವಿಜ್ಞಾನ ಮೂಲತಃ ಔಷಧ ಉದ್ಯಮವಾಗಿ ಮಾರ್ಪಾಡಾಗಿ ವಿಜ್ಞಾನಕ್ಕಿಂತ ಹೆಚ್ಚಾಗಿ ಬಂಡವಾಳಶಾಹಿ ಶಕ್ತಿಗಳಿಗೆ ನಿಷ್ಠವಾಗಿರುವುದು. ಇದರಿಂದಾಗಿ ಕರೋನಾ ಎಂಬ ಹೆಮ್ಮಾರಿಗೆ ಮೂಲ ಔಷಧ ಕಂಡುಹಿಡಿಯಲು ನೆರವಾಗಬಹುದಾದ ಈ ಹೆಮ್ಮಾರಿಯ ಮೂಲವನ್ನು ಶೋಧಿಸುವ ದಾರಿಗೆ ಜಾಗತಿಕ ಕಾರ್ಪೋರೇಟ್‌ಶಾಹಿ ಮಾಯಾಜಾಲಕ್ಕೆ ಸಿಲುಕಿರುವ ವಿಜ್ಞಾನಿಗಳೇ ಕಲ್ಲು ಹಾಕುತ್ತಿದ್ದಾರೆ. ವಿಶ್ವದ ಆರೋಗ್ಯದ ಮೇಲೆ ನಿಗಾ ಇಡಲು ರಚಿತವಾಗಿರುವ ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯಸ್ಥರೇ ಇದರಲ್ಲೊಂದು ಬಣದ ವಕ್ತಾರರಾಗಿದ್ದಾರೆಂದರೆ ಏನು ಹೇಳುವುದು?.

ಇದೆಲ್ಲದರಿಂದ ಸ್ಪಷ್ಟವಾಗುತ್ತಿರುವ ಒಂದು ಅಂಶವೇನೆಂದರೆ. ಈ ಕರೋನಾ ಮಾಂಸದ ಚೂರೊಂದರಿಂದ ನೇರವಾಗಿಯೇ ಬಂದಿರಲಿ ಅಥವಾ ಪ್ರಯೋಗಾಲಯದಿಂದ ಪರೋಕ್ಷವಾಗಿಯೇ ಬಂದಿರಲಿ ಅದು ಮೂಲತಃ ಹಣ ಆಧಾರಿತ ಸುಖದ ಸ್ಪರ್ಧೆಯ ವೇಗಕ್ಕೆ ತುತ್ತಾಗಿ ಮೈಮರೆತಿರುವ ಸಮಾಜವನ್ನು ರೂಪಿಸಿರುವ ಬಂಡವಾಳಶಾಹಿ ಕೈಗಾರಿಕಾ ನಾಗರೀಕತೆಯ ಸೃಷ್ಟಿ. ಈ ಸತ್ಯವನ್ನರಿಯುವವರೆಗೆ ಈ ಹೆಮ್ಮಾರಿಯ ಒಂದಲ್ಲ ಒಂದು ರೂಪದ ಅಲೆಗಳನ್ನು ನಮ್ಮನ್ನು ಅಪ್ಪಳಿಸುತ್ತಲೇ ಇರುತ್ತವೆ.

ಆದರೆ ಈ ಮಧ್ಯೆ ನಮ್ಮ ಮೋದಿ ಸರ್ಕಾರ ನಡೆಸಿರುವ ರಾಜಕೀಯದ ಪರಿ ನೋಡಿ. ಇತ್ತೀಚಿನ ಪ. ಬಂಗಾಳ, ಕೇರಳಗಳಲ್ಲಿ ಅನುಭವಿಸಿದ ಮುಖಭಂಗವನ್ನು ಮರೆಮಾಚಿಕೊಳ್ಳಲೆಂಬಂತೆ ಮೂಲತಃ ಬುಡಕಟ್ಟು ಮುಸ್ಲಿಮರ ಪುಟ್ಟ ನಾಡಾದ ಲಕ್ಷದ್ವೀಪಗಳಿಗೆ ತನ್ನ ಚೇಲಾ ಉಪ ರಾಜ್ಯಪಾಲರ ಮೂಲಕ 'ಅಭಿವೃದ್ಧಿ'ಯ ಹೆಸರಿನಲ್ಲಿ ಅಲ್ಲಿನ ಜನರ ಸಾಮಾಜಿಕ-ಸಾಂಸ್ಕೃತಿಕ ಅಸ್ಮಿತೆಗೆ ಭಂಗ ತಂದು ಅಲ್ಲಿ ಶಾಂತಿ ಕದಡಿದೆ. ಈ ವ್ಯಸನ ಸಂತೋಷದಿಂದ ತೃಪ್ತವಾಗದ ಸರ್ಕಾರ ರಾಷ್ಟ್ರದ ಮಾನವ ಹಕ್ಕುಗಳ ಆಯೋಗಕ್ಕೆ ಸರ್ವೋಚ್ಚ ನ್ಯಾಯಾಲಯದಲ್ಲಿನ ಸರ್ಕಾರಿ ನ್ಯಾಯಮೂರ್ತಿಗಳೆಂದೇ ಹೆಸರಾಗಿದ್ದ ನಿವೃತ್ತ ನ್ಯಾಯಾಧೀಶ ಅರುಣ್ ಮಿಶ್ರಾರನ್ನು ಹೊಸ ಅಧ್ಯಕ್ಷರನ್ನಾಗಿ ನೇಮಿಸಿ ಹುಬ್ಬು ಹಾರಿಸಿದೆ. ಈ ಜೋಡಿ ಸಂತೋಷದ ಸಂಭ್ರಮದಲ್ಲಿ ಅದು ಶ್ರೀರಾಮಜನ್ಮಭೂಮಿ ಟ್ರಸ್ಟ್ ನಡೆಸಿದೆಯೆಂದು ಹೇಳಲಾಗುತ್ತಿರುವ ಕೋಟ್ಯಾಂತರ ರೂಪಾಯಿಗಳ ಭೂ ಅವ್ಯವಹಾರದ ಬಗ್ಗೆ ಗಮನ ಹರಿಸಲಾಗದಾಗಿದೆ. ಇನ್ನು ನಮ್ಮ ಕರ್ನಾಟಕದಲ್ಲಿ ಒಂದೆಡೆ ಆಪರೇಷನ್ ಕಮಲದ ಸರ್ಕಾರ ತನ್ನ ಹುಟ್ಟಿನ ಪಾಪದ ಭಾರಕ್ಕೆ ತಾನೇ ಅಲ್ಲಾಡುತ್ತಾ ವಿರೋಧಿ ಕಾಂಗ್ರೆಸ್ ನಾಯಕರಲ್ಲಿ ಅಧಿಕಾರದ ವಾಸನೆ ಹತ್ತಿ ಅವರು ಲಜ್ಜೆಗೆಟ್ಟು ಕುಣಿದಾಡುತ್ತಿದ್ದರೆ, ಇನ್ನೊಂದೆಡೆ ಬೇರೆ ಜಾತಿಯಲ್ಲಿ ವಿವಾಹವಾಗಬಯಸಿದ ಮಗಳ ಕುತ್ತಿಗೆಯನ್ನು ಅಪ್ಪನೇ ತುಂಡರಿಸಿದ, ಅಂತರ್ಧರ್ಮೀಯ ವಿವಾಹವಾಗಬಯಸಿದ್ದ ಯುವ ಜೋಡಿಯೊಂದನ್ನು ಜನರೇ ಕಲ್ಲುಗಳಿಂದ ಜಜ್ಜಿ ಕೊಂದ ಘಟನೆಗಳು ನಡೆದಿದೆ. ಕೆಲ ವರ್ಷಗಳ ಹಿಂದಷ್ಟೇ ಇಂತಹ ವಿವಾಹಗಳಿಂದ ಸಂಭ್ರಮಪಡುತ್ತಿದ್ದ ಈ ರಾಜ್ಯಕ್ಕೆ ಈ ಬರ್ಬರತೆ ಎಲ್ಲಿಂದ ಬಂತು? ಯೋಚಿಸಬೇಕಿದೆ.

-ಸಂಪಾದಕ

ಅಗಲಿದ ಅಪರೂಪದ ಕವಿ ಚೇತನ ಸಿದ್ಧಲಿಂಗಯ್ಯ.



ಕವಿ ಸಿದ್ಧಲಿಂಗಯ್ಯ ಈಗ ನಮ್ಮೊಡನಿಲ್ಲ ಎಂದರೆ ನಂಬುವುದು ಕಷ್ಟ. ಅವರು ತಮ್ಮ ಕಾವ್ಯ, ಹೋರಾಟ, ಮಾತುಗಾರಿಕೆ ಮತ್ತು ಅಪ್ರತಿಮ ಹಾಸ್ಯದಿಂದ ನಮ್ಮನ್ನು ಈವರೆಗೆ ಎಷ್ಟು ದಟ್ಟವಾಗಿ ಸುತ್ತುವರೆದಿದ್ದರೆಂದರೆ ಅವರ ನೆನಪು ನಮ್ಮನ್ನು ಬಹುಕಾಲ ಕಾಡುತ್ತಲೇ ಇರುತ್ತದೆ.

ಒಂದೂವರೆ ತಿಂಗಳ ಹಿಂದೆ ಕರೋನಾ ಸೋಂಕಿಗೆ ಬಲಿಯಾಗಿ ಗುಣಮುಖರಾಗಿ ಆಸ್ಪತ್ರೆಯಿಂದ ಹೊರಬಂದಿದ್ದರೂ, ಅವರು ಕೆಲವೇ ದಿನಗಳಲ್ಲಿ ಕರೋನಾಗೆ ಸಂಬಂಧಿಸಿದಂತೆ ಬಹುವಾಗಿ ಹೇಳುವ ಚಿಕಿತ್ಸೋತ್ತರ ದುಷ್ಪರಿಣಾಮಗಳಿಗೆ ಒಳಗಾಗಿ ಅಸುನೀಗಿದ್ದಾರೆ. ಅಪಾರ ಜೀವನೋತ್ಸಾಹಿಯಾಗಿದ್ದ ಅವರಿಗೆ ಬದುಕುವ ಆಸೆ ಬಹಳವಿತ್ತು. ಹಾಗಾಗಿಯೇ ಅವರು ಬಹಳ ವರ್ಷಗಳಿಂದ ಮಧುಮೇಹ, ರಕ್ತದ ಒತ್ತಡ ಮತ್ತು ಹೃದಯ ಸಂಬಂಧಿ ಕಾಯಿಲೆಗಳ ವಿರುದ್ಧ ತಮ್ಮ ವ್ಯಕ್ತಿತ್ವಕ್ಕೆ ಒಗ್ಗದ ಆಹಾರ ಪಥ್ಯ, ಪ್ರಾಣಾಯಾಮ, ಯೋಗ, ಸಮನ್ವಯ ಚಿಂತನೆಗಳನ್ನು ತಮ್ಮ ಈ ಹಿಂದಿನ ಹಲವು ಸಹವರ್ತಿಗಳ ಕಟು ಟೀಕೆ-ದೂಷಣೆಗಳನ್ನು ಲೆಕ್ಕಿಸದೆ ಹಠದಂತೆ ಅಳವಡಿಸಿಕೊಂಡು ಬದುಕುತ್ತಿದ್ದರು. ಈ ಹೊಸ ಜೀವನ ಕ್ರಮ ಅವರು ಆವರೆಗೆ ಎತ್ತಿ ಹಿಡಿದಿದ್ದ ಜೀವನ ದೃಷ್ಟಿ ಮತ್ತು ತತ್ವಗಳಿಗೆ ವಿರುದ್ಧವಾಗಿ ತೋರುತ್ತಿದ್ದರೂ. ಬದುಕುವ ಆಸೆಯಿಂದ ತುಂಬಿಕೊಂಡ ಅವರ ಈ ವಿಚಿತ್ರ ಹಠದ ಹಿನ್ನೆಲೆಯಲ್ಲೇ ಅವರ ಈ ಹಠಾತ್ ಸಾವು ಹೆಚ್ಚು ವೇದನಾಮಯವೆನ್ನಿಸುವುದು. ಅವರ ನಿಧನಕ್ಕಾಗಿ 'ಹೊಸ ಮನುಷ್ಯ' ತನ್ನ ಓದುಗರೊಂದಿಗೆ ಶೋಕಿಸುತ್ತದೆ.

ಕರ್ನಾಟಕವೇನು ಇಡೀ ಭಾರತ ರಾಜಕೀಯ ಮತ್ತು ಸಾಮಾಜಿಕ-ಆರ್ಥಿಕ ಸಂಕಟಗಳ ಅಶಾಂತಿಯಲ್ಲಿ ಬೇಯುತ್ತಿದ್ದ ಕಳೆದ ಎಪ್ಪತ್ತರ ದಶಕದಲ್ಲಿ ಆ ಅಶಾಂತಿಯ ಅಗ್ನಿದಿವ್ಯದಲ್ಲಿ ಯುವ ಹೋರಾಟಗಾರ ಮತ್ತು ಕವಿಯಾಗಿ ಹೊರಹೊಮ್ಮಿದ ಸಿದ್ಧಲಿಂಗಯ್ಯ ಆನಂತರ ಕರ್ನಾಟಕದ ಸಾರ್ವಜನಿಕ ಜೀವನದಲ್ಲಿ ಹಿಂದಿರುಗಿ ನೋಡಿದ್ದೇ ಇಲ್ಲ. ಇದಕ್ಕೆ ಬಡತನದಲ್ಲಿ ಬೆಂದು ಮೂಡಿದ್ದ ಕೆಚ್ಚು, ಹುಟ್ಟು ಪ್ರತಿಭೆಗಳು ಎಷ್ಟು ಕಾರಣವೋ ಅಷ್ಟೇ ಅವರ ಹುಟ್ಟು ಜಾಣತನವೂ ಕಾರಣವಾಗಿತ್ತು. ಅವರು 'ಇಕ್ರಲಾ, ವದೀರ್ಲಾ, ನನ್ಮಕ್ಳ ಚರ್ಮ ಎಬ್ರಲಾ...' ಎಂಬಂತಹ ಆ ಕಾಲದ ಸಮಾಜ-ಕಾವ್ಯಗಳೆರಡನ್ನೂ ಬೆಚ್ಚಿಬೀಳಿಸುವಂತಹ ಪದ್ಯ ಬರೆದರೂ, ಆ ಆಕ್ರೋಶ ಅವರ ಜೀವದಿಂದ ಚಿಮ್ಮಿ ಬಂದಿದ್ದಲ್ಲ ಎನ್ನುವುದನ್ನು ಸೂಚಿಸುವಂತೆ ಅದರ ಜೊತೆಗಿನ ಬಹುತೇಕ ಕವನಗಳು ಇನ್ನೊಬ್ಬರ ಅಂತಃಕರಣವನ್ನು ತಟ್ಟಿ ಅವರನ್ನು ಆತ್ಮಾವಲೋಕನಕ್ಕೆ ದೂಡುವ ಆಳದ ದುಗುಡ-ಅಸಹಾಯಕತೆಗಳಿಂದ ಆರ್ದ್ರಗೊಂಡಂಥವು. 'ನನ್ನ ಜನಗಳು' ಎಂಬ ಅವರ ಪದ್ಯ ಇದಕ್ಕೊಂದು ಮಾದರಿ ಉದಾಹರಣೆ. ಹಾಗೆ ನೋಡಿದರೆ ಅವರ 'ಇಕ್ರಲಾ ವದೀರ್ಲಾ...' ಲಾಂಛನ ಪದ್ಯದ ಮುಂದುವರಿದ ಸಾಲುಗಳ ತುಂಬ ಇದೇ ಭಾವ ತುಂಬಿ ತುಳುಕಿದೆ. ಹಾಗೆಂದೇ ಅವರ ಈ (ಬಾಲ)ಆರ್ಭಟಕ್ಕೆ ಹೆದರಲಿಲ್ಲ ಅಥವಾ ದೂರಲಿಲ್ಲ; ಬದಲಿಗೆ ಅದೊಂದು ವಿಲೋಮ ಭಾವಗೀತೆಯೆಂಬಂತೆಯೇ ಮೆಚ್ಚಿದರು; ಸ್ವಾಗತಿಸಿದರು! ಸಿದ್ಧಲಿಂಗಯ್ಯ ಆಗ ಸಂದರ್ಭದ ಉತ್ಸಾಹದಲ್ಲಿ ಭಾಗವಹಿಸಿದ ಬೂಸಾ ಚಳುವಳಿ, ಕಮ್ಯೂನಿಸ್ಟ್ ಚಳುವಳಿ, ದಲಿತ ಚಳುವಳಿ ಮತ್ತು ಬಂಡಾಯ ಚಳುವಳಿಗಳ ಹುಟ್ಟು ಆವೇಶ ಮತ್ತು ಗದ್ದಲಗಳ ನಡುವೆ ಅವರ ದನಿಯ ಈ ಸೂಕ್ಷ್ಮ ತರಂಗಾಂತರಗಳನ್ನು ಗಮನಿಸದೆ ಅವರನ್ನು ಸಾರಾಸಗಟಾಗಿ ಸಾಂಪ್ರದಾಯಿಕ ನಮೂನೆಯ ಬೆಂಕಿ ಉಗುಳುವ 'ಕ್ರಾಂತಿ ಕವಿ' ಎಂದು ಗುರುತಿಸಲಾಯಿತು. ಕವಿ ಕೂಡ ಇದು ಹುಟ್ಟಿಸಿದ ಉನ್ಮಾದದಲ್ಲಿ ಅದನ್ನು ಒಪ್ಪಿಕೊಂಡರು. ಇವರು ಬರೆದಿರುವ ಗದ್ಯರಾಶಿಯನ್ನು ಸಾಹಿತ್ಯಕವಾಗಿ ಪರಿಶೀಲಿಸಿದರೆ ಈ ಮಾತು ಸೂರ್ಯಸ್ಪಷ್ಟವಾಗುವುದು. ನನ್ನ ಅಭಿಪ್ರಾಯದಲ್ಲಿ ಕ್ರಾಂತಿಕಾರಕತೆ ಮತ್ತು ಕಾವ್ಯಗಳೆರಡೂ ತಮ್ಮ ಉತ್ತುಂಗ ಮುಟ್ಟಿ ಹದವಾಗಿ ಬೆರೆತ ಅವರ ಏಕೈಕ ಪದ್ಯವೆಂದರೆ 'ಸಾವಿರಾರು ನದಿಗಳು'. ಸಿದ್ಧಲಿಂಗಯ್ಯನವರನ್ನು ಈ ಪದ್ಯ ಆಧುನಿಕ ಕನ್ನಡ ಕಾವ್ಯಲೋಕದಲ್ಲಿ ವಿಶಿಷ್ಟರನ್ನಾಗಿ ಉಳಿಸುವುದು.

ಸಿದ್ಧಲಿಂಗಯ್ಯ ನಾನು ಕಂಡಂತೆ ನಗರಕ್ಕೆ ಬಂದು ಬದುಕಲು ತಮ್ಮ ಜಾಣ್ಮನವನ್ನು ಕಿಲಾಡಿತನವನ್ನಾಗಿ ಪರಿವರ್ತಿಸಿಕೊಂಡ ಮೂಲತಃ ಹಳ್ಳಿ ಮನಸ್ಸಿನ ಲಾಲಿತ್ಯವುಳ್ಳ ಮನುಷ್ಯ. ಹೋರಾಟದ ಸಂಭ್ರಮ ಮತ್ತು ಜಯಕಾರಗಳ ನಡುವೆ ಈ ವ್ಯಕ್ತಿತ್ವದಲ್ಲಿ ಉಂಟಾದ ಈ ಬಿರುಕಿನ ಕಡೆ ಗಮನ ಹರಿಸಲಾಗದ ಸಿದ್ಧಲಿಂಗಯ್ಯ ನಂತರ ಅದಕ್ಕೆ ಬಲಿಯಾದರು. ಆನಂತರ ಅವರನ್ನು ಕಾಡಿದ ಮಾರಕ ಕಾಯಿಲೆಗಳ ಮೂಲವೂ ಇಲ್ಲೇ ಇತ್ತು ಎನ್ನಬಹುದು. ಇದಕ್ಕೆ ಅವರೆಷ್ಟು ಕಾರಣರೋ ಅವರನ್ನು ಮೆರೆಸಿದ ಅವರ ಚಳುವಳಿಕಾರ ಮತ್ತು ಸಾಹಿತ್ಯಿಕ ಗೆಳೆಯರೂ ಕಾರಣ. ಆದರೀಗ ಇವರೆಲ್ಲ ಅವರೊಬ್ಬರನ್ನೇ ವಿಶ್ವಾಸದ್ರೋಹಿಯೆಂದೂ, ಅವಕಾಶವಾದಿಯೆಂದೂ ಕರೆಯುತ್ತಿದ್ದರೆ ಅದಕ್ಕೆ ಈಗ ಇವರನ್ನೆಲ್ಲ ಸುಸ್ತು ಮಾಡಿ ಹೀಗೆ ಶಪಿಸಲು ಮಾತ್ರ ಶಕ್ತರನ್ನಾಗಿ ಉಳಿಸಿರುವ ಅವರ ಚಳುವಳಿಗಳ ಮತ್ತು ಸಾಹಿತ್ಯ ಮೀಮಾಂಸೆಗಳ ಮಿತಿಗಳು ಕಾರಣವೆನ್ನಬಹುದು.

ಅಂದ ಮಾತ್ರಕ್ಕೆ ಸಿದ್ಧಲಿಂಗಯ್ಯನವರ ಹೋರಾಟ, ಪದ್ಯ, ಗದ್ಯ, ಹಾಸ್ಯ ಎಲ್ಲವೂ ತಮ್ಮ ಮೂಲ ಮೌಲ್ಯಗಳನ್ನೇನೂ ಕಳೆದುಕೊಳ್ಳವು. ಅವು ನಮ್ಮ ಕಾಲದ ರೋಮಾಂಚಕ ಅವಧಿಯ ಚರಿತ್ರೆಯ ಜೀವಂತ ತುಣುಕುಗಳಾಗಿ ನಮ್ಮನ್ನು ಕಾಡುತ್ತಲೇ ಇರುತ್ತವೆ. ಅವುಗಳೊಳಗಿನ ಹಲವು ಅಪಶೃತಿಗಳ ಬಗ್ಗೆ ಎಚ್ಚರಿಸುತ್ತಲೂ.

-ಡಿ.ಎಸ್. ನಾಗಭೂಷಣ

ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಈ ತಿಂಗಳ ಸಂಚಿಕೆ ಬಹಳ ಪರಿಣಾಮಕಾರಿಯಾಗಿದೆ. ಯೋಚನೆಗೆ ಹಚ್ಚಿದೆ. ಹಿಂದಿನ ಸಂಚಿಕೆಯ ನಿಮ್ಮ ಸಂಪಾದಕೀಯ ಲೇಖನವೇ ಒಂದು ತಿಂಗಳು ಕಾಡಿತು. ಈಗ ಎಲ್ಲ ಲೇಖನಗಳು ಸೇರಿ ಮನಸ್ಸನ್ನು ಕೊರೆಯುತ್ತಿವೆ. ಜೀವನದ ಆಯ್ಕೆಗಳನ್ನು ನವೀಕರಿಸುವ ಹಂತದಲ್ಲಿರುವ ನಮಗೆ ಈ ಪ್ರಶ್ನೆಗಳು ಜೀವನ್ಮರಣದ ಪ್ರಶ್ನೆಗಳಷ್ಟು ಮುಖ್ಯವಾಗಿವೆ. ಹಿಂದಿನ ತಿಂಗಳಿನಿಂದಲೂ ಬರೆಯಲು ಯತ್ನಿಸುತ್ತಿದ್ದೇನೆ, ಆದರೆ ಹಲವಾರು ಸಾವು ಬರೆಯುವುದನ್ನು ನಿಧಾನಗೊಳಿಸಿದೆ.

-ಎಸ್. ಅರವಿಂದ, ಚೆನ್ನೈ

ವೈಚಾರಿಕ ಶ್ರೀಮಂತಿಕೆ 'ಹೊಸ ಮನುಷ್ಯ' ಸಂಚಿಕೆಗಳ ವೈಶಿಷ್ಟ್ಯ. ಜೂನ್ ೨೧ರ ಸಂಚಿಕೆ ಇದಕ್ಕೆ ಹೊರತಲ್ಲ. 'ಅಭಿವೃದ್ಧಿ ಇನ್ನು ಸಾಕು' ಕುರಿತ ಚರ್ಚೆ ಅಭಿವೃದ್ಧಿ ಪ್ರಕ್ರಿಯೆಯನ್ನು ಒರೆಗಲ್ಲಿಗೆ ಹಚ್ಚುವ ಒಂದು ಅವಶ್ಯಕ ಪ್ರಯತ್ನ. ಈ ವಿಷಯಕ್ಕೆ ಸಂಬಂಧಿಸಿದ ಬೇರೆ ಬೇರೆ ಆಯಾಮಗಳನ್ನು ಇಲ್ಲಿ ಕಾಣಬಹುದಾಗಿದೆ. ಅಭಿವೃದ್ಧಿ ಎಂಬ 'ಹುಚ್ಚು ಕುದುರೆಯ ಓಟಕ್ಕೆ' (ಸಂತೋಷ ಕೌಲಗಿ ಅವರ ಸಾಂಕೇತಿಕ ಮಾತು) ಕಡಿವಾಣ ಹಾಕಲು ಎಲ್ಲರೂ ಸಹಕರಿಸಬೇಕು; ಬರಿಯ ಮಾತಿನಲ್ಲಲ್ಲ, ಕೃತಿಯಲ್ಲಿ ಸಹ.

-ಹೆಚ್. ಎಸ್. ಈಶ್ವರ, ಬೆಂಗಳೂರು

ಅಭಿವೃದ್ಧಿ ಕುರಿತ ಚರ್ಚೆಯ ಲೇಖನದಲ್ಲಿ ರಾಜೇಂದ್ರ ಚೆನ್ನಿಯವರು ಬದಲಾವಣೆ ಏಕಾಂಗಿಯಾಗಿ ಮಾಡುವ ಕೆಲಸವಲ್ಲವೆಂದೂ, ಸಮುದಾಯದ ಮಟ್ಟದಲ್ಲಿ ನಡೆಯಬೇಕಾದ ಕೆಲಸವೆಂದೂ ತಿಳಿಸಿದ್ದಾರೆ, ಸರಿ. ಆದರೆ ಇಂದು ಸಮುದಾಯವೆಂಬುದು ಎಲ್ಲಿದೆ? ವ್ಯಕ್ತಿಯೇ ತನ್ನ ವೈಯಕ್ತಿಕ ನೆಲೆಯಲ್ಲಿನ ಬದಲಾವಣೆಗಳ ಮೂಲಕವೇ ಇಂದು ಸಮುದಾಯವನ್ನು ಕಟ್ಟಲು ಸಾಧ್ಯ ಎಂಬುದು ಅರಿವಾದರೆ ಅಸಾಧ್ಯವೂ ಸಾಧ್ಯವಾದೀತು. ಮುಖ್ಯವಾಗಿ ಬೇಕಾಗಿರುವುದು ಎದುರಿನ ಸತ್ಯ ಅರಿತು ಕ್ರೋಢೀಕರಿಸಿಕೊಳ್ಳಬೇಕಾದ ಸಂಕಲ್ಪ ಶಕ್ತಿ.

-ಎಂ. ಎಚ್. ನಾರಾಯಣ, ಚಿಕ್ಕಮಗಳೂರು

ತಾವು ಸಂಪಾದಕೀಯದಲ್ಲಿ ವ್ಯಕ್ತಪಡಿಸಿರುವಂತೆ 'ತಪ್ಪಾಗಿದೆ, ಸರಿಪಡಿಸಿಕೊಳ್ಳುವೆವು' ಅನ್ನುವ ಜಾಯಮಾನ ನಮ್ಮ ಪ್ರಧಾನಿಗಳದ್ದಲ್ಲ. ಹಾಗೆ ನೋಡಿದರೆ ಯಾವ ಪಕ್ಷದ ನೇತಾರರದ್ದೂ ಅಲ್ಲ. ಅವರು ಮಾಡಿದ್ದೆಲ್ಲ ಸರಿಯೆ. ಅವರು ಏನೋ ಮಾಡುತ್ತಲೇ ಇರುತ್ತಾರೆ, ಜನ ಅನುಭವಿಸುತ್ತಲೇ ಇರುತ್ತಾರೆ. ಕರೋನಾದಿಂದಾದ ಸಾವುನೋವುಗಳು ಮತ್ತು ತೈಲ ಬೆಲೆ ಸಂಕಟಗಳಿಂದಾಗಿ ಪ್ರಧಾನಿಯವರು ಜನಮನದಿಂದ ದೂರ ಸರಿಯುತ್ತಿದ್ದಾರೆ. ಅವರ ಭಾವಾವೇಶದ ಮಾತುಗಳು ಕೃತಕವೆನಿಸುತ್ತವೆ.


'ಇನ್ನು ಅಭಿವೃದ್ಧಿ ಸಾಕು' ಕುರಿತು ಲೇಖನಗಳು ಅನೇಕ ಸದಾಶಯಗಳನ್ನೇನೋ ಒಳಗೊಂಡಿವೆ. ಅಭಿವೃದ್ಧಿ ಅನ್ನುವುದು ವ್ಯಕ್ತಿಗತ ಸಾಪೇಕ್ಷ ಪದ. ಒಬ್ಬರಿಗೆ ಸಾಕೆನಿಸುವ ಅಭಿವೃದ್ಧಿ, ಇನ್ನೊಬ್ಬರಿಗೆ ಇನ್ನೊಂದಿಷ್ಟು ಬೇಕೆನಿಸಬಹುದು. ಮನುಷ್ಯನ ಸುಖಲೋಲುಪತೆ ಹೆಚ್ಚಿಸುವ ಅಭಿವೃದ್ಧಿ ಸಾಕು ಅನ್ನಲೇ ಬೇಕಾಗಿರುವುದು ನಿಜ. ಪರಿಸರದ ಧಾರಣ ಶಕ್ತಿಯ ಮೇಲೆ ಒತ್ತಡ ಕಡಿಮೆಯಾಗಬೇಕೆಂದರೆ ಅಭಿವೃದ್ಧಿಯ ಪರಿಭಾಷೆ ಬದಲಾಗಲೇಬೇಕು. ಅಭಿವೃದ್ಧಿಯ ಅತಿಶಯಗಳೇನೇ ಇರಲಿ, ಸರಳ ಸಭ್ಯ ಜೀವನ ವ್ಯಕ್ತಿಗತ ನೆಲೆಯಲ್ಲಿ ಪ್ರಜ್ಞಾಪೂರ್ವಕವಾಗಿ ಅರಿತು ಆಚರಿಸುವಂಥದ್ದು. ಸಂತೋಷ ಕೌಲಗಿಯವರಷ್ಟು ಸರಳವಾಗಿ ಬದುಕಲಾಗದಿದ್ದರೂ, ಕೇಶವ ಕೊರ್ಸೆಯವರು ಪ್ರಸ್ತಾಪಿಸಿರುವ ಸರಳ ಸೂತ್ರಗಳನ್ನು ಅಳವಡಿಸಿಕೊಂಡು ಬದುಕಲು ಏನೂ ತೊಂದರೆ ಇಲ್ಲ.

ಸರಳ, ಸಹಜ, ಸಭ್ಯ ಜೀವನ ವಿಧಾನ ಕುರಿತು ವಿದ್ಯಾರ್ಥಿ ದೆಸೆಯಿಂದಲೇ

(೧೧ನೇ ಪುಟಕ್ಕೆ

ಅಗಲಿದ ಇಬ್ಬರು ಮಹನೀಯರು

ನಮ್ಮೆಲ್ಲರ ಮನಗಳಲ್ಲಿ ಮರ ನೆಟ್ಟ ಸುಂದರಲಾಲ್ ಬಹುಗುಣ



"ಎಲ್ಲಿಯವರೆಗೂ ಈ ದೇಶದ ರಕ್ತ ಮಾಂಸ (ಮೇಲ್ಪದರದ ಮಣ್ಣು) ಸಮುದ್ರ ಸೇರುತ್ತಿದೆಯೋ ಅಲ್ಲಿಯವರೆಗೂ ನಿಮ್ಮ ಸನ್ಮಾನಗಳಿಗೆ ಅರ್ಥವಿಲ್ಲ" ಎಂದು ಅರಣ್ಯನಾಶದ ಬಗ್ಗೆ ತಿಳಿ ಹೇಳಿದ ಬಹುಗುಣರನ್ನು ಬಹುಕಾಲ, ಪ್ರಗತಿಯ ವೈರಿ, ಆಧುನಿಕತೆಯ ಶತ್ರು, ಅಭಿವೃದ್ಧಿಯ ವಿರೋಧಿ, ಪರಿಸರ ಭಯೋತ್ಪಾದಕ ಎಂದು ಈ ದೇಶ ನಿರಂತರವಾಗಿ ದೂಷಿಸಿತು. 'ಬಲಗೈಯಲ್ಲಿ ಪದ್ಮಶ್ರೀ ನೀಡುವ ಸರ್ಕಾರದ ಎಡಗೈಯಲ್ಲಿ ಕೊಡಲಿ ಇದೆ' ಎಂದು ಎಚ್ಚರಿಸಿದ್ದರು. ಇಡೀ ಜಗತ್ತಿನಲ್ಲಿ ಮರಗಳಿಗಾಗಿ ಮೂರು ಬಾರಿ ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡಿ, ತನ್ನನ್ನು ಸಾವಿನಂಚಿಗೆ ದೂಡಿಕೊಂಡ ಮತ್ತೊಬ್ಬನ ಉದಾಹರಣೆಯಿಲ್ಲ. 'ರಾಜಕಾರಣಿಗಳಿಗೆ ಧ್ವನಿವರ್ಧಕಗಳಿವೆ, ಆದರೆ ಮರಗಳ ಪರವಾಗಿ ಮಾತನಾಡುವವರು ಯಾರು? ಸಾಯುತ್ತಿರುವ ನದಿಗಳ ಪರವಾಗಿ ನಿಲ್ಲುವವರು ಯಾರು? ಪರ್ವತಗಳನ್ನು ರಕ್ಷಿಸುವವರು ಯಾರು? ಮರಗಳ ಆಕ್ರಂದನ, ನದಿಯ ಗೋಳು, ಜಾರಿ ಕುಸಿಯುತ್ತಿರುವ ಪರ್ವತಗಳ ಚೀತ್ಕಾರ ಕೇಳಿಸಿಕೊಳ್ಳುವ ಸಮಯ ಇದು' ಎಂದ ವೃಕ್ಷ ಸಂತನ ಮಾತಿಗೆ ಕಿವುಡಾಗಿ ಹೋದ ಈ ದೇಶ ಪಶ್ಚಾತ್ತಾಪ ಪಡುತ್ತಿದೆ, ಭೀಕರತೆ ಕಾದಿದೆ.

ಸ್ವಾತಂತ್ರ್ಯ ಚಳವಳಿಯಲ್ಲಿ ೧೩ನೇ ವಯಸ್ಸಿನಲ್ಲೇ ಕಾಲಿಟ್ಟ ಬಹುಗುಣರು, ಸ್ವಾತಂತ್ರ್ಯಾನಂತರ ಅದೇ ಹೋರಾಟವನ್ನು ಪರಿಸರ ಸಂರಕ್ಷಣೆಗೆ ಮತ್ತು ಹಿಮಾಲಯದ ಉಳಿವಿಗೆ ಮುಂದುವರೆಸಿದರು. ಒಬ್ಬ ಮೇಸ್ತ್ರಿಯೊಡನೆ, ತಾವೊಬ್ಬರೇ ಕೂಲಿಯಾಳಾಗಿ ಕಟ್ಟಿದ ಸಿಲ್‌ಯಾನ್ ಆಶ್ರಮ, ಅತಿ ಹೆಚ್ಚು ನೀರು ಬಳಸುವ ಅಕ್ಕಿ ನನ್ನ ಆಹಾರವಲ್ಲ ಎಂದು ಬದುಕಿದ್ದು, ಕಾಶ್ಮೀರದಿಂದ ನೇಪಾಳ-ಭೂತಾನಗಳ ಮೂಲಕ ಕೋಹಿಮಾ ವರೆಗೂ ೫೦೦೦ ಕಿ.ಮೀ.ಗಳ ಹಿಮಾಲಯ ಉಳಿಸಿ ಪಾದಯಾತ್ರೆ, ತೆಹರಿ ಯೋಜನೆಯ ವಿರುದ್ಧ ಮೊದಲು ೪೫, ಮತ್ತೊಮ್ಮೆ ೭೪ ದಿನಗಳ ಉಪವಾಸ ಸತ್ಯಾಗ್ರಹ, ಮದ್ಯಪಾನ, ಅಸ್ಪೃಶ್ಯತೆಯ ವಿರುದ್ಧ ಸಕ್ರಿಯವಾಗಿದ್ದರು. ಚಿಪ್ಕೊ ಚಳವಳಿ, ಪಶ್ಚಿಮ ಘಟ್ಟಗಳ ಸಂರಕ್ಷಣೆಯ 'ಅಪ್ಪಿಕೋ ಚಳವಳಿ' ಆಯಿತು. ಆಫ್ರಿಕಾದ ನೈರೋಬಿಯಲ್ಲಿ ಅರಣ್ಯ ಸಂರಕ್ಷಣೆಗಾಗಿ ಪಾದಯಾತ್ರೆ ಕೈಗೊಂಡರು. ಮೆಕ್ಸಿಕೊ ದೇಶದ ಪರಿಸರವಾದಿಗಳ ಸಭೆಯಲ್ಲಿ ಭಾಗವಹಿಸಿದಾಗ ಬೆನ್ನ ಮೇಲೆ ಉರುವಲು ಕಟ್ಟಿಗೆ ಹೊತ್ತುಕೊಂಡು ವೇದಿಕೆ ಏರಿದ್ದರು.


ಸ್ವಾತಂತ್ರ್ಯ ಘೋಷಣೆಯಾದಾಗ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಬಹುಗುಣರ ರಾಜಕೀಯ ಜೀವನ ಏರುಗತಿಯಲ್ಲಿತ್ತು. 'ರಾಜಕಾರಣ ತೊರೆದು ಸಂಪೂರ್ಣ ಸಮಾಜ ಸೇವೆಗೆ ತೊಡಗಿಸಿಕೊಂಡರೆ ನಮ್ಮ ವಿವಾಹ' ಎಂಬ ವಿಮಲಾರ ಷರತ್ತಿಗೆ ಒಪ್ಪಿಕೊಂಡು ಅವರನ್ನು ಬಾಳ ಸಂಗಾತಿಯಾಗಿ ಸ್ವೀಕರಿಸಿದರು. ಕೃಶ ದೇಹದ, ಮೃದು ಮಾತಿನ ಮಗುವಿನಂತಹ ನಗೆಯ ಈ ದಂಪತಿಗಳ ಹೋರಾಟದ ಸಾತ್ವಿಕ ಕೆಚ್ಚು ಅಚ್ಚರಿ ಹುಟ್ಟಿಸುವಂತಹದ್ದು. ತೆಹರಿ ಅಣೆಕಟ್ಟಿನ ನಿರ್ಮಾಣ ಸ್ಥಳದಲ್ಲಿ ತಗಡಿನ ಶೆಡ್‌ನಲ್ಲಿ ಆಮರಣಾಂತ ಉಪವಾಸ ಸತ್ಯಾಗ್ರಹದಲ್ಲಿದ್ದಾಗ ಸುತ್ತ ಡೈನಮೈಟ್‌ಗಳ ಸಿಡಿತ, ಉಸಿರಾಡಲೂ ಆಗದಷ್ಟು ಧೂಳು, ರಾಕ್ಷಸ ಗಾತ್ರದ ನಿರ್ಮಾಣ ಯಂತ್ರೋಪಕರಣಗಳ ಆರ್ಭಟ, ಗುತ್ತಿಗೆದಾರರ ಗೂಂಡಾಗಳು, ಅವರೊಡನೆ ಸ್ಥಳೀಯ ಪೊಲೀಸರ ಅಮಾನುಷ ವರ್ತನೆ. ಬಹುಗುಣರನ್ನು ಎಳೆದುಕೊಂಡು ಹೋಗಿ ಸೆರೆಮನೆಗೆ ತಳ್ಳಿದ್ದರು. ಡಾ. ವಂದನಾ ಶಿವ ಸೇರಿದಂತೆ ಪರಿಸರ ಪ್ರೇಮಿ ಹೋರಾಟಗಾರರ ದೊಡ್ಡ ಪಡೆಯನ್ನೇ ಕಟ್ಟಿದರು. ದೇಶ-ವಿದೇಶಗಳಲ್ಲಿನ ಹಲವರು ಇವರಿಂದ ಪ್ರೇರಣೆ ಪಡೆದು ಸರ್ಕಾರಗಳ ಹುಚ್ಚಾಟಗಳನ್ನು ಪ್ರಶ್ನಿಸಿ, ಕುಕೃತ್ಯಗಳಿಗೆ ತಡೆ ಒಡ್ಡುವಂತಾಗಿದೆ.

೧೯೮೭ರಲ್ಲಿ ಲಿವಿಂಗ್ ರೈಟ್‌ಹುಡ್ ಮತ್ತು ೨೦೦೯ರಲ್ಲಿ ಪದ್ಮವಿಭೂಷಣ ಪ್ರಶಸ್ತಿಗಳಿಂದ ಗೌರವಿಸಲಾಯಿತು. ಪ್ರಕೃತಿಯ ಆಶೀರ್ವಾದಗಳನ್ನು ಅಭಿವೃದ್ಧಿಯ ಹೆಸರಿನ ಶಾಪಗಳನ್ನಾಗಿಸಿದ ಈ ದೇಶದ ಪ್ರಭುತ್ವದ ಬಹುಪಾಲು ಜನತೆಯ ಬಗ್ಗೆ ನಿರಾಶರಾಗಿಯೇ ೯೪ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ.

ಪರ್ವತ ಹಾಗೂ ಅರಣ್ಯವಾಸಿಗಳ ಪಾರಂಪರಿಕ ಜ್ಞಾನ ಹಾಗೂ ನಿಸರ್ಗದೆಡೆಗಿನ ಸಾಮರಸ್ಯದ ಬದುಕನ್ನು ಧಿಕ್ಕರಿಸಿ, ಆಧುನಿಕರಾಗುವ ಆತ್ಮಹತ್ಯಾತ್ಮಕ ಪ್ರವೃತ್ತಿಯ ಬಗ್ಗೆ ಎಚ್ಚರಿಸುತ್ತಿದ್ದ ಗಾಂಧಿಯುಗದ ಜ್ಯೋತಿ ಆರಿದೆ. ಜನಸಮುದಾಯ ಕೇಂದ್ರಿತ ಅರಣ್ಯ ಹಾಗೂ ಪರಿಸರ ಸಂರಕ್ಷಣೆಯನ್ನು ಸಶಕ್ತಗೊಳಿಸುವುದೇ ಹಿಮಾಲಯದ ಮಹಾನ್ ಚೇತನಕ್ಕೆ ನಾವು ಸಲ್ಲಿಸಬಹುದಾದ ಗೌರವ.

-ಬಿ.ಎಸ್. ದಿವಾಕರ

ಹೋರಾಟಗಳ ಒಡನಾಡಿ ಎಚ್.ಎಸ್. ದೊರೆಸ್ವಾಮಿ



ಸುಮಾರು ಎರಡು ದಶಕಗಳ ಹಿಂದೆ ಶೃಂಗೇರಿಯಲ್ಲಿ ಒಂದು ಪ್ರತಿಭಟನಾ ಸಭೆ. ಕುದುರೆಮುಖ ರಾಷ್ಟ್ರೀಯ ಉದ್ಯಾನ ವಿರೋಧಿ ಹೋರಾಟ ಒಕ್ಕೂಟ ಆಯೋಜಿಸಿದ್ದ ಸಭೆ ಅದು. ಎಚ್.ಎಸ್. ದೊರೆಸ್ವಾಮಿ ಅವರೂ ಸೇರಿದಂತೆ ಹಲವರು ವೇದಿಕೆಯಲ್ಲಿದ್ದರು. ಕಲ್ಕುಳಿ ವಿಠಲ ಹೆಗಡೆ ಅವರ ಮುಂದಾಳತ್ವವಿತ್ತು. ಪ್ರತಿಭಟನಾ ಸಭೆ ನಡೆಯುತ್ತಿರುವಾಗ ಪೆಂಡಾಲ್ ಹೊರಭಾಗದಲ್ಲಿ ಗಲಾಟೆ ಶುರುವಾಗಿತ್ತು. ಕಾರ್ಯಕ್ರಮ ವಿರೋಧಿಸಲೆಂದೇ ಬಂದಿದ್ದ ಕೆಲವರು ಪುಸ್ತಕದ ಅಂಗಡಿಯಲ್ಲಿ ಕಿತಾಪತಿ ಮಾಡಿದ್ದರು. ಅದು ವಿಕೋಪಕ್ಕೆ ಹೋಗಿ ಏಟುಗಳು ಬಿದ್ದಿದ್ದವು.

ಈ ಕುರಿತು ಪೊಲೀಸರಿಗೆ ದೂರು ಕೊಡಲು ಆಯೋಜಕರು ನಿರ್ಧರಿಸಿದರು. ಎಲ್ಲರೂ ಪೊಲೀಸ್ ಠಾಣೆಗೆ ಹೊರಡಲು ನಿಂತರು. ಆದರೆ ದೊರೆಸ್ವಾಮಿ ಅವರು ಜೊತೆಗೆ ಬರಲು ಒಪ್ಪಲಿಲ್ಲ. ಕಿತಾಪತಿ ಮಾಡಲೆಂದು ಬಂದವರಿಗೆ ಏಟು ಬಿದ್ದಿದ್ದು ಅವರ ಅಸಮಾಧಾನಕ್ಕೆ ಕಾರಣವಾಗಿತ್ತು. ಕುದುರೆಮುಖ ರಾಷ್ಟ್ರೀಯ ಉದ್ಯಾನ ಯೋಜನೆಗೆ ನನ್ನ ವಿರೋಧ ಇದೆ. ಆದರೆ ಈ ಘಟನೆಯಲ್ಲಿ ಯಾರಿಗೂ ಹಿಂಸೆ ಆಗಬಾರದಿತ್ತು. ನಾನು ಬರುವುದಿಲ್ಲ ಎಂದು ಅವರು ಅಲ್ಲೇ ಕುಳಿತರು. ಯಾರ ಮನವೊಲಿಕೆಗೂ ಜಗ್ಗಲಿಲ್ಲ.

ಇದೊಂದೇ ಘಟನೆ ಸಾಕು. ತಾನು ನಂಬಿದ ಚಿಂತನೆಯ ವಿರೋಧಿಯೇ ಆಗಿದ್ದರೂ ಸಹ ಅವರಿಗೆ ಹಿಂಸೆ ಆಗುವುದನ್ನು ಒಪ್ಪುವುದಿಲ್ಲ ಎಂಬ ಎಚ್.ಎಸ್. ದೊರೆಸ್ವಾಮಿ ಅವರ ನಿಲುವು ಇಂದಿಗೂ ಹಲವರಿಗೆ ಪಾಠ.

೧೦೪ ವರ್ಷಗಳ ಕಾಲ ಎಲ್ಲವನ್ನೂ ಕಂಡುಂಡು ಜೀವಿಸಿದ ಎಚ್.ಎಸ್. ದೊರೆಸ್ವಾಮಿ ಅವರು ಕೊನೆಯುಸಿರೆಳೆದಾಗ ಲಕ್ಷಾಂತರ ಜನರು ಕಣ್ಣೀರಿಡುತ್ತಿರುವಾಗ ಒಂದಿಷ್ಟು ಜನರು ಸಂಭ್ರಮಿಸಿದ್ದು ಕಂಡು ಈ ಘಟನೆ ಹೇಳಲೇಬೇಕೆನಿಸಿತು.

ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ಎಚ್.ಎಸ್. ದೊರೆಸ್ವಾಮಿ ಅವರಿಗೆ ೨೯ ವರ್ಷ. ಸ್ವತಃ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದಲ್ಲಿ ಜನಿಸಿದ ದೊರೆಸ್ವಾಮಿ ಅವರು ಸಹ ಬ್ರಿಟಿಶ್ ಆಡಳಿತದ ವಿರುದ್ಧ ಹಲವು ಹೋರಾಟ ಮಾಡಿದರು. ಗಾಂಧೀಜಿ ಅವರಿಂದ ಪ್ರೇರಿತರಾಗಿದ್ದ ದೊರೆಸ್ವಾಮಿ ಅವರು ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ೧೪ ತಿಂಗಳು ಜೈಲುವಾಸವನ್ನೂ ಅನುಭವಿಸಿದರು.

ಆದರೆ ದೊರೆಸ್ವಾಮಿ ಅವರ ಇಡೀ ಜೀವನದಲ್ಲಿ ಸ್ವಾತಂತ್ರ್ಯ ಪೂರ್ವ ಹೋರಾಟಕ್ಕಿಂತ ಸ್ವಾತಂತ್ರ್ಯಾನಂತರದ ಸಾಮಾಜಿಕ ಚಳವಳಿಯೇ ಮಹತ್ವದ್ದು. ಸ್ವಾತಂತ್ರ್ಯ ದೊರಕಿದ ಸಂದರ್ಭದಲ್ಲೇ ಮೈಸೂರು ಅರಸೊತ್ತಿಗೆ ವಿರುದ್ಧ ದೊರೆಸ್ವಾಮಿ ಅವರು ತಮ್ಮ ಸಂಪಾದಕತ್ವದ ಪೌರವಾಣಿ ಪತ್ರಿಕೆ ಮೂಲಕ ತೋರಿದ ಪ್ರತಿರೋಧ, ತೀ.ತಾ. ಶರ್ಮ ಅವರ ಸರಣಿ ಲೇಖನಗಳು ಹಲವರ ಪ್ರತಿರೋಧಕ್ಕೆ ಕಾರಣವಾದರೂ ಜಗ್ಗಲಿಲ್ಲ. ಅವರಿಗೆ ಮೈಸೂರು ರಾಜ್ಯದ ಪ್ರವೇಶವನ್ನೇ ನಿರ್ಬಂಧಿಸಲಾಯಿತು. ೧೯೪೭ರ ಅಕ್ಟೋಬರ್ ೨೪ರಂದು ಕೆ.ಸಿ. ರೆಡ್ಡಿ ಅವರ ನೇತೃತ್ವದಲ್ಲಿ ಮೈಸೂರು ರಾಜ್ಯದಲ್ಲಿ ಜವಾಬ್ದಾರಿಯುತ ಸರ್ಕಾರ ಬಂದಾಗ ಅವರ ಹೋರಾಟಕ್ಕೆ ಫಲ ಸಿಕ್ಕಿತ್ತು. ಏಕೀಕರಣ ಹೋರಾಟದಲ್ಲಿ ದೊರೆಸ್ವಾಮಿ ಅವರದು ಮಹತ್ವದ ಪಾತ್ರವಾಗಿತ್ತು.

ತಪ್ಪು ಯಾರೇ ಮಾಡಲಿ, ಅದನ್ನು ಒಪ್ಪಲಾರೆ ಎಂಬ ಜಾಯಮಾನದ ಎಚ್.ಎಸ್. ದೊರೆಸ್ವಾಮಿ ಅವರು ತಮ್ಮ ಜೀವಮಾನವಿಡೀ ಅದನ್ನೇ ನಂಬಿ ಪಾಲಿಸಿದರು. ಕರ್ನಾಟಕದಲ್ಲಿ ನಡೆದ ಹಲವು ಚಳವಳಿಗಳಲ್ಲಿ ಆಹ್ವಾನಕ್ಕೂ ಸಹ ಕಾಯದೇ ಧುಮುಕಿದರು. ನೀಲಗಿರಿ ಬೆಳೆದು ಪರಿಸರ ನಾಶ ಮಾಡುತ್ತಿದ್ದ ಹರಿಹರ ಪಾಲಿಫೈಬರ್ಸ್ ಕಂಪನಿ ವಿರುದ್ಧ, ಜನರ ಜೀವನವನ್ನು ಸಂಕಷ್ಟಕ್ಕೆ ತಳ್ಳುತ್ತಿದ್ದ ನೈಸ್ ಕಾರಿಡಾರ್ ಯೋಜನೆ, ದಲಿತರಿಗೆ ದೇವಾಲಯ ಪ್ರವೇಶ ಹೋರಾಟ, ರೈತರು ಸಂಘಟಿಸುತ್ತಿದ್ದ ಹೋರಾಟ, ದಲಿತ ಸಂಘರ್ಷ ಸಮಿತಿಯ ಪ್ರತಿಭಟನೆ ಇತ್ಯಾದಿ ಹೋರಾಟಗಳ ಶಕ್ತಿಯಾಗಿದ್ದವರು ದೊರೆಸ್ವಾಮಿ.

ಸ್ವಾತಂತ್ರ್ಯ ಹೋರಾಟದಲ್ಲಿ ಜೈಲುವಾಸ ಅನುಭವಿಸಿದ್ದ ದೊರೆಸ್ವಾಮಿ ಅವರು ಸ್ವಾತಂತ್ರ್ಯಾನಂತರವೂ ಸಹ ಪ್ರತಿಭಟನೆಗಾಗಿ ಜೈಲು ಸೇರಿದರು. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಇಂದಿರಾಗಾಂಧಿ ಅವರ ವಿರುದ್ಧ ನಿಂತರು.

ಹೀಗೆ ಹಲವು ಹೋರಾಟಗಳ ಒಡನಾಡಿಯಾಗಿದ್ದ ಎಚ್.ಎಸ್. ದೊರೆಸ್ವಾಮಿ ಅವರು ಕರ್ನಾಟಕದ ಸಾಕ್ಷಿಪ್ರಜ್ಞೆ ಮಾತ್ರ ಅಲ್ಲ. ಶತಮಾನದ ಸಾಕ್ಷಿಪ್ರಜ್ಞೆಯೂ ಹೌದು..

-ಹೊನ್ನಾಳಿ ಚಂದ್ರು

ಭರವಸೆ ಕಳೆದುಕೊಂಡ ಮೋದಿ ಭಾರತ:೨೧ ನೆಯ ಶತಮಾನಕ್ಕೊಬ್ಬರು ಜೆ.ಪಿ ಬೇಕಿದೆ

-ಯೋಗೇಂದ್ರ ಯಾದವ್

"ಇಂದಿನ ಭಾರತದಲ್ಲಿ ಭರವಸೆ ಎಂಬುದು ದುರ್ಲಭವಾಗಿರುವ ವಸ್ತು. ಭರವಸೆಯ ನಷ್ಟವು ಮೋದಿ ಸರ್ಕಾರದ ಬಗ್ಗೆ ವಿಶ್ವಾಸನಷ್ಟದ ಸ್ಪಷ್ಟ ಸೂಚನೆ. ಆದರೆ ಇದು ವಿರೋಧ ಪಕ್ಷಗಳಿಗೆ ಮತ್ತು ಪ್ರಜಾತಾಂತ್ರಿಕ ವ್ಯವಸ್ಥೆಗೆ ಕೂಡ ಒಂದು ಸವಾಲು. ಭಾರತಕ್ಕೆ ಬಹಳ ತುರ್ತಾಗಿ ಭರವಸೆ ಬೇಕಾಗಿದೆ."



ಇದು ವರ್ಚಸ್ವಿ ಪ್ರಧಾನ ಮಂತ್ರಿಯೊಬ್ಬರ ಎಂಟನೆಯ ವರ್ಷ. ಕನಿಷ್ಠ ಬೆಳವಣಿಗೆ, ಅತಿ ಹೆಚ್ಚು ನಿರುದ್ಯೋಗ ಮತ್ತು ಉಲ್ಬಣವಾಗುತ್ತಿರುವ ಬೆಲೆಯೇರಿಕೆಗಳೊಂದಿಗೆ ಆರ್ಥಿಕತೆಯು ಅಸ್ತವ್ಯಸ್ತವಾಗಿ ಹೋಗಿದೆ. ಸಂಶಯಗಳು ಭ್ರಮನಿರಸನಕ್ಕೆ, ನಿರಾಸೆಯು ಸಿಟ್ಟಿಗೆ ದಾರಿಮಾಡಿಕೊಡುತ್ತಿದೆ. ಪ್ರಭಾವಶಾಲಿಯಾದ ರಾಜಕೀಯ ವ್ಯವಸ್ಥೆಯು ಜನರ ಪ್ರತಿಭಟನೆಗಳನ್ನು ನಿರ್ಲಕ್ಷ್ಯದಿಂದ ಕಾಣುತ್ತಿದೆ.

ನಾನು ನರೇಂದ್ರ ಮೋದಿಯ ಭಾರತವನ್ನು ಚಿತ್ರಿಸುತ್ತಿಲ್ಲ. ಈ ಛಿದ್ರವು ಹೆಚ್ಚೂ ಕಡಿಮೆ ಅರ್ಧ ಶತಮಾನಗಳಷ್ಟು ಹಳೆಯದು. ಅದು ಇಂದಿರಾ ಗಾಂಧಿಯವರ ಕಾಲದ ಭಾರತದಿಂದಲೂ ಮುಂದುವರಿದು ಬರುತ್ತಿದೆ.

೧೯೭೪ರ ಜೂನ್ ೫ ಬಿಹಾರದ ಚಳುವಳಿಯ ಇತಿಹಾಸಕ್ಕೆ ಒಂದು ತಿರುವು ತಂದ ದಿನ. ಅದು ಜಯಪ್ರಕಾಶ ನಾರಾಯಣ್ ಅಂದರೆ ಜೆಪಿಯವರು ಪಾಟ್ನಾದ ಒಂದು ಬೃಹತ್ ರ‍್ಯಾಲಿಯಲ್ಲಿ 'ಸಂಪೂರ್ಣ ಕ್ರಾಂತಿ'ಗೆ ಕರೆ ಕೊಟ್ಟ ದಿನ. ಸಂಪೂರ್ಣ ಕ್ರಾಂತಿ ಎಂಬುದು ಬಿಹಾರ ಚಳುವಳಿಯನ್ನು ಒಗ್ಗೂಡಿಸಿದ ಘೋಷಣೆಯಾಯಿತು. "ಸಂಪೂರ್ಣ ಕ್ರಾಂತಿ ಅಬ್ ನಾರಾ ಹೈ! ಭಾವಿ ಇತಿಹಾಸ್ ಹಮಾರಾ ಹೈ!!" ಎಂಬ ಪ್ರಖ್ಯಾತ ಘೋಷಣೆಗಳು ಇಂದಿರಾ ಗಾಂಧಿಯವರ ವಿರುದ್ಧದ ಸವಾಲಾಗಿ ಅನುರಣಿಸಿದವು. ಅದು ತುರ್ತು ಪರಿಸ್ಥಿತಿಗೆ ಅಂತಿಮವಾಗಿ ೧೯೭೭ರ ಮತಪತ್ರ ಕ್ರಾಂತಿಗೆ ಕಾರಣವಾಯಿತು.

ಈ ಕಳೆದು ಹೋದ ಯುಗದ ಕಳೆದುಹೋದ ತಾತ್ವಿಕ ಪರಿಭಾಷೆ ಇಂದಿಗೂ ತುಸುವಾದರೂ ಪ್ರಸ್ತುತತೆಯನ್ನು ಹೊಂದಿದೆಯೇ? ಖಂಡಿತ ಹೊಂದಿದೆ ಎಂದು ನನಗನ್ನಿಸುತ್ತದೆ. ಆದ್ದರಿಂದಲೇ ಈ ವರ್ಷ ಜೂನ್ ೫ನ್ನು 'ಸಂಪೂರ್ಣ ಕ್ರಾಂತಿ ದಿವಸ್' ಎಂದು ಆಚರಿಸಲು ಸಂಯುಕ್ತ ಕಿಸಾನ್ ಮೋರ್ಚಾ ತೀರ್ಮಾನಿಸಿದ್ದಕ್ಕೆ ಒಂದು ಗಹನವಾದ ಐತಿಹಾಸಿಕ ಮಹತ್ವ ಇದೆ.

ಭಾರತಕ್ಕೆ ಭರವಸೆ ಬೇಕಿದೆ

ಚುನಾವಣಾಪೂರ್ವ ಸಮೀಕ್ಷಕನಾಗಿ ಸಾರ್ವಜನಿಕ ಅಭಿಪ್ರಾಯದ ಮನೋಭಾವಗಳ ಮತ್ತು ನಡವಳಿಕೆಗಳ ಅಧ್ಯಯನಕಾರನಾಗಿ ನನ್ನ ಪೂರ್ವವೃತ್ತಿ ಜೀವನದ ಸಮಯದಲ್ಲಿ ಎಂಥಹ ದಾರುಣ ಪರಿಸ್ಥಿತಿಯಲ್ಲೂ ಜನರ ಆಶಾಭಾವನೆ ನನ್ನನ್ನು ಸದಾ ಬೆರಗುಗೊಳಿಸುತ್ತಿತ್ತು. ಬದುಕಿನ ವಾಸ್ತವ ಸ್ಥಿತಿ ಎಷ್ಟೇ ಘೋರವಾಗಿದ್ದರೂ ಭವಿಷ್ಯದ ನಿರೀಕ್ಷೆಗಳ ಬಗೆಗಿನ ಪ್ರಶ್ನೆಗಳಿಗೆ ಅಲ್ಲಿಂದ ಅಪಾರವಾದ ಧನಾತ್ಮಕ ಉತ್ತರಗಳು ಬರುತ್ತಿದ್ದವು. ನನ್ನೊಳಗಿನ ವಿಶ್ಲೇಷಕನಿಗೆ ಇದು ಬಹಳ ಕುತೂಹಲಕಾರಿಯಾಗಿರುತ್ತಿತ್ತು. ನನ್ನೊಳಗಿನ ರಾಜಕೀಯ ಪ್ರಾಣಿಗೆ ಇದು ಹತಾಶೆ ಹುಟ್ಟಿಸುತ್ತಿತ್ತು. ಹಿಂದಿರುಗಿ ನೋಡಿದರೆ ಈ ಅಮಾಯಕ ಆಶಾವಾದವು ಎಲ್ಲ ಅಡೆತಡೆಗಳ ನಡುವೆ ಪ್ರಜಾಪ್ರಭುತ್ವವನ್ನು ಜೀವಂತವಾಗಿರಿಸಿದ್ದ ಜೀವವಾಯುವಾಗಿತ್ತೇನೋ ಎನಿಸುತ್ತದೆ.

ಆದರೆ ಇಂದು ಈ ಆಶಾವಾದವೇ ಅಪಾಯಕ್ಕೊಳಗಾಗಿದೆ. ಇತ್ತೀಚಿನ ಮೂರು ಉದಾಹರಣೆಗಳನ್ನು ನೋಡೋಣ. ಭಾರತದ ಆರ್ಥಿಕತೆಯ ವಿಶ್ಲೇಷಣಾ ಸಂಸ್ಥೆಯ ಮಹೇಶ್ ವ್ಯಾಸ್ ಅವರು, ಮುಂದಿನ ಒಂದು ವರ್ಷ ತಮ್ಮ ಆದಾಯದಲ್ಲಿ ಹೆಚ್ಚಳ ಕಾಣುವ ಕುಟುಂಬಗಳ ಪಾಲು, ೨೦೧೯ರಲ್ಲಿ ಆರ್ಥಿಕತೆಯು ಹದಗೆಡತೊಡಗಿದ್ದಾಗ ಇದ್ದ ಶೇ.೩೦%ಕ್ಕೆ ಹೋಲಿಸಿದರೆ, ಈ ವರ್ಷ ಏಪ್ರಿಲ್‌ನಲ್ಲಿ ಅದು ಕೇವಲ ೫% ಮಟ್ಟಕ್ಕೆ ಇಳಿದಿದೆ ಎಂದು ವರದಿ ಮಾಡುತ್ತಾರೆ. ಜನರ ಮನಃಸ್ಥಿತಿಗೆ ಅಷ್ಟೇನೂ ಸಂಬಂಧವಿರದ ಎಫ್.ಐ.ಸಿ.ಸಿ ಸಂಸ್ಥೆಯು ನಡೆಸಿದ ವಾಣಿಜ್ಯ ವಿಶ್ವಾಸ ಸಮೀಕ್ಷೆಯು(business confidence survey) ತನ್ನ ಸೂಚ್ಯಂಕದಲ್ಲಿ ದಿಢೀರ್ ಕುಸಿತವನ್ನು ವರದಿ ಮಾಡಿದೆ. ಸಿ ವೋಟರ್ ಎಂಬ ಸಂಸ್ಥೆಯು ನಡೆಸಿದ ಸಮೀಕ್ಷೆಯು, ನಿರಾಶೆಯ ಸ್ಥಿತಿಯಲ್ಲಿರುವ ೮೦% ಭಾರತೀಯರು ಯಾವುದೂ ಸರಿಯಾದ ದಾರಿಯಲ್ಲಿ ನಡೆಯುತ್ತಿಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ ಎಂದು ಮೋದಿಯವರ ಸರ್ಕಾರದ ಟೀಕಾಕಾರಲ್ಲದ ಯಶವಂತ ದೇಶ್‌ಮುಖ್ ಅವರು ಬರೆಯುತ್ತಾರೆ.

ಇಂದಿನ ಭಾರತದಲ್ಲಿ ಭರವಸೆ ಎಂಬುದು ದುರ್ಲಭವಾಗಿರುವ ವಸ್ತು. ಭರವಸೆಯ ನಷ್ಟವು ಮೋದಿ ಸರ್ಕಾರದ ಬಗ್ಗೆ ವಿಶ್ವಾಸನಷ್ಟದ ಸ್ಪಷ್ಟ ಸೂಚನೆ. ಆದರೆ ಇದು ವಿರೋಧ ಪಕ್ಷಗಳಿಗೆ ಮತ್ತು ಪ್ರಜಾತಾಂತ್ರಿಕ ವ್ಯವಸ್ಥೆಗೆ ಕೂಡ ಒಂದು ಸವಾಲು. ಭಾರತಕ್ಕೆ ಬಹಳ ತುರ್ತಾಗಿ ಭರವಸೆ ಬೇಕಾಗಿದೆ.

ಭರವಸೆಗೆ ಹೊಸ ಸಿದ್ಧಾಂತ ಬೇಕು

ಇದು ಧನಾತ್ಮಕ ರಾಜಕೀಯ ಸಂದೇಶವನ್ನು ಸೃಷ್ಟಿಸುವ ಸವಾಲಲ್ಲ. ಒಂದು ಚತುರ ರಾಜಕೀಯ ಘೋಷಣೆಯನ್ನು ಟಂಕಿಸುವ ಅಥವಾ ಒಂದು ಹೊಸ 'ಜುಮ್ಲಾ' ಸೃಷ್ಟಿಸುವ ವಿಚಾರವಲ್ಲ. ಭಾರತೀಯರು ಅದನ್ನು ಮೀರಿದ್ದಾರೆ. ಅವರು "ಅಚ್ಛೇ ದಿನ್" ಘೋಷಣೆಯಲ್ಲಿ ನಂಬಿಕೆ ಇರಿಸಿದ್ದರು, ಈಗ ವಾಸ್ತವವನ್ನು ನೋಡುತ್ತಿದ್ದಾರೆ. ಈಗಲೂ ನಂಬಬಹುದಾದ ಭರವಸೆಗಾಗಿ ಹಂಬಲಿಸುತ್ತಿದ್ದಾರೆ. ಆದರೆ ಅದು ನೆಲದ ವಾಸ್ತವದೊಂದಿಗೆ ನೇರ ಸಂಬಂಧವಿರುವಂಥದು, ದಾರಿತೋರಿಸುವಂಥದು ಮತ್ತು ಜೊತೆಯಾಗಿ ಕರೆದೊಯ್ಯುವಂಥದೂ ಆಗಿರಬೇಕು.

ಸಿದ್ಧಾಂತಗಳು ಮಾಡುವುದು ಇದನ್ನೇ. ವರ್ತಮಾನವನ್ನು ಅರ್ಥ ಮಾಡಿಕೊಳ್ಳಲು ಅದರಲ್ಲಿ ಏನು ತಪ್ಪಾಗಿದೆ ಎಂಬುದನ್ನು ಪತ್ತೆ ಮಾಡಲು ಮತ್ತು ಬದಲಾವಣೆಯ ಬೀಜಗಳನ್ನು ಗುರುತಿಸಲು ಬೇಕಾದ ಒಂದು ಚೌಕಟ್ಟನ್ನು ಸಿದ್ಧಾಂತವು ನೀಡುತ್ತದೆ. ಅದು ಒಂದು ಯುಟೋಪಿಯವನ್ನು, ನಾವು ತಲುಪಲು ಬಯಸುವ ಭವಿಷ್ಯದ ಕಾಲ್ಪನಿಕ ಗುರಿಯನ್ನು ನಮಗೆ ನೀಡುತ್ತದೆ. ಮತ್ತು ಅದು ಬದಲಾವಣೆಯ ಮಧ್ಯವರ್ತಿಗಳ ಮತ್ತು ಅವರ ಯುಕ್ತಿಗಳ ಮೂಲಕ ವರ್ತಮಾನದಿಂದ ಕಾಲ್ಪನಿಕ ಭವಿಷ್ಯಕ್ಕೆ ದಾರಿಯನ್ನು ಗುರುತಿಸುತ್ತದೆ. ೨೧ನೆಯ ಶತಮಾನದಲ್ಲಿ ತಮ್ಮ ಸಿದ್ಧಾಂತಗಳನ್ನು ಮುನ್ನೆಲೆಗೆ ತಂದ ರಾಜಕೀಯ ವ್ಯವಸ್ಥೆಗಳು ಕುಸಿದ ನಂತರ ಈ ಪದಗಳನ್ನು ಬಳಸುವುದು ಸಮ್ಮತವಾದುದಲ್ಲ. ಆದರೆ ನಮ್ಮನ್ನು ನಾವೇ ವಂಚಿಸಿಕೊಳ್ಳುವುದು ಬೇಡ: ತಮ್ಮನ್ನು ಸಿದ್ಧಾಂತವಿಲ್ಲದವರು ಎಂದು ಕರೆದುಕೊಳ್ಳುವವರೂ ಕೂಡ ಒಂದು ಸಿದ್ಧಾಂತದ ಪೂರೈಕೆದಾರರು ಅಂದರೆ, ಯಥಾಸ್ಥಿತಿವಾದದ ಪೂರೈಕೆದಾರರು ಆಗಿರುತ್ತಾರೆ, ನಮಗೆ ಅದರ ಅಗತ್ಯವಿಲ್ಲ, ಭಾರತಕ್ಕೆ ನಂಬಿಕೆಯನ್ನು ಸ್ಥಾಪಿಸುವ ಚೌಕಟ್ಟನ್ನು ನೀಡುವಂತಹ ಮುಂದಿನದನ್ನು ನೋಡುವ ಸಿದ್ಧಾಂತದ ಅಗತ್ಯವಿದೆ.


ಈಗ ಇರುವ ಯಾವುದೇ ಸಿದ್ಧಾಂತದ ಮೂಲಕ ಇದನ್ನು ಸಾಧಿಸುವುದು ಸಾಧ್ಯವಿಲ್ಲ. ನಾವು ೧೯ನೆಯ ಶತಮಾನದ ಸಿದ್ಧಾಂತಗಳ ಹೆಣಗಳ ಜೊತೆ ೨೧ ನೆಯ ಶತಮಾನದಲ್ಲಿ ಬಹಳ ದೀರ್ಘ ಕಾಲ ಜೀವಿಸಿದ್ದೇವೆ. ಆ ಸಿದ್ಧಾಂತಗಳು ೨೦ನೆಯ ಶತಮಾನದ ದ್ವಿತೀಯಾರ್ಧದ ಹೊತ್ತಿಗೇ ಹಳತಾಗಿದ್ದವು. ೨೧ನೆಯ ಶತಮಾನದಲ್ಲಿ ಅವುಗಳಿಗೆ ಯಾವುದೇ ಅರ್ಥವಿಲ್ಲ. ಇದು ಬಲಪಂಥೀಯತೆಗೆ ಎಷ್ಟರಮಟ್ಟಿಗೆ ಅನ್ವಯವಾಗುವುದೋ ಅಷ್ಟರಮಟ್ಟಿಗೆ ಎಡಪಂಥಕ್ಕೂ ಅನ್ವಯವಾಗುತ್ತದೆ. ಗತಕಾಲದ ಈ ಸಿದ್ಧಾಂತಗಳು ಹೊಸ ವಾಸ್ತವಗಳ ಚೌಕಾಕಾರದ ಬೆಣೆಗಳನ್ನು ಪೂರ್ವನಿರ್ಮಿತ ವೃತ್ತಾಕಾರದ ಗುಳಿಗಳೊಳಗೆ ಹೊಂದಿಸುವ ಪ್ರಯತ್ನ ಮಾಡುತ್ತವೆ. ಅವು ಹೊಸ ವಿಚಾರಗಳನ್ನು, ಹೊಸ ಸಮಸ್ಯೆಗಳನ್ನು, ಹೊಸ ಶಕ್ತಿಗಳನ್ನು ಅಳವಡಿಸಿಕೊಳ್ಳಲು ನಿರಾಕರಿಸುತ್ತವೆ. ವಿಭಿನ್ನ ವಿಚಾರಗಳನ್ನು ಸಮಗ್ರಗೊಳಿಸಿಕೊಳ್ಳುವುದಕ್ಕೆ ಬದಲು ನಾವು ಗಾಂಧಿ ಸಮಾಜವಾದ ಅಥವಾ ಉದ್ದೀಪಿತ ಅಂಬೇಡ್ಕರ್‌ವಾದೀ-ಸ್ತ್ರೀವಾದ ಅಥವಾ ಅಪದ್ಧವೆನಿಸುವ ಎಡ-ಉದಾರವಾದ ಮುಂತಾದ ಅಸಂಬದ್ಧ ಮಿಶ್ರಣದ ತೇಪೆ ಸಿದ್ಧಾಂತಗಳ ಮೊರೆಹೋಗುತ್ತಿದ್ದೇವೆ. ಈ ಸಿದ್ಧಾಂತಗಳು ಅಥವಾ ಅವುಗಳ ಸಂಯೋಜನೆಗಳು ಭಾರತಕ್ಕೆ ಇಂದು ಬೇಕಾಗಿರುವ ಭರವಸೆಯನ್ನು ಸೃಷ್ಟಿಸುವುದಿಲ್ಲ.

ಸಂಪೂರ್ಣ ಕ್ರಾಂತಿ

ಜೆ.ಪಿ ಯವರ 'ಸಂಪೂರ್ಣ ಕ್ರಾಂತಿ'ಯ ಕರೆ ಮುಖ್ಯವಾಗುವುದು ಇಲ್ಲೇ. ೧೯೭೪ ರಲ್ಲಿ ಈ ಕರೆಯನ್ನು ನೀಡುವ ಹೊತ್ತಿಗೆ ಅವರು ತಮ್ಮ ಕಾಲದ ಅಷ್ಟೂ ಸಿದ್ಧಾಂತಗಳನ್ನು ಹಾದು ಬಂದಿದ್ದರು. ಬಾಲ್ಯದಲ್ಲಿ ಮುಗ್ಧ ರಾಷ್ಟ್ರೀಯವಾದಿಯಾಗಿ

(೧೧ನೇ ಪುಟಕ್ಕೆ

ಭಿನ್ನಮತ, ವಾಕ್‌ಸ್ವಾತಂತ್ರ್ಯಗಳ ದಮನ ತುರ್ತುಪರಿಸ್ಥಿತಿಯನ್ನು ನೆನಪಿಸುತ್ತದೆ: ನ್ಯಾ.ದೀಪಕ್ ಗುಪ್ತಾ



ಸಿಎಎ ಸಂಬಂಧದ ದೆಹಲಿ ಗಲಭೆಗಳ ಆರೋಪಿಗಳೆಂದು, ಜಾಮೀನಿಗೆ ಅವಕಾಶವೇ ಇಲ್ಲವೆಂದು ಹೇಳಲಾದ ಕಾನೂನುಬಾಹಿರ ಚಟುವಟುಕೆಗಳ ತಡೆ ಕಾಯ್ದೆ(ಯುಎಪಿಎ)ಯಡಿ ದೆಹಲಿ ಪೊಲೀಸರಿಂದ ಬಂಧಿಸಲ್ಪಟ್ಟು ವಿಚಾರಣೆ ಇಲ್ಲದೆ ಒಂದು ವರ್ಷದಿಂದ ಸೆರೆಮನೆಯಲ್ಲಿದ್ದ ಮೂವರು ವಿದ್ಯಾರ್ಥಿಗಳಿಗೆ ಜಾಮೀನು ನೀಡಿ ಅವರನ್ನು ಬಿಡುಗಡೆ ಮಾಡಿ ದೆಹಲಿಯ ಶ್ರೇಷ್ಠ ನ್ಯಾಯಾಲಯ ನೀಡಿರುವ ತೀರ್ಪು ಇಂದಿನ ಸಂದರ್ಭದಲ್ಲಿ ಒಂದು ಐತಿಹಾಸಿಕ ತೀರ್ಪು ಎಂದು ಹೇಳಲಾಗಿದೆ. ಈ ತೀರ್ಪಿಗೆ ತಡೆಯಾಜ್ಞೆ ನೀಡಲು ನಿರಾಕರಿಸಿರುವ ದೇಶದ ಸರ್ವೋಚ್ಚ ನ್ಯಾಯಾಲಯ ಇದರ ಪೂರ್ಣ ವಿಚಾರಣೆಯನ್ನು ನಡೆಸಬೇಕಾಗಿದ್ದರೂ ನ್ಯಾಯಾಂಗದ ಅಂಗಳದಲ್ಲಿ ಈ ಬಗ್ಗೆ ಕುತೂಹಲಕಾರಿ ಚರ್ಚೆ ನಡೆದಿದೆ. ಈ ಹಿನ್ನೆಲೆಯಲ್ಲಿ ದ ಪ್ರಿಂಟ್ ವಾರ್ತಾ ವೇದಿಕೆಯ ಜ್ಯೋತಿ ಮಲ್ಹೋತ್ರಾ, ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿ ದೀಪಕ್ ಗುಪ್ತಾ ಅವರನ್ನು ಮಾತನಾಡಿಸಿದ್ದಾರೆ. ಈ ಮಾತುಕತೆಯ ಸಂಕ್ಷಿಪ್ತ ರೂಪ ಇಲ್ಲಿದೆ-ಸಂ

ಕಾನೂನುಬಾಹಿರ ಕೃತ್ಯ ತಡೆ ಕಾಯ್ದೆ(UAPA)ಯ ಅಡಿಯಲ್ಲಿ ಬಂಧಿತರಾಗಿದ್ದ, ದೇವಾಂಗನಾ ಕಾಲಿತಾ, ನತಾಶಾ ನರ್ವಾಲ್ ಮತ್ತು ಆಸಿಫ್ ಇಕ್ಬಾಲ್ ತನ್ಹಾ ಎಂಬ ಮೂವರು ವಿದ್ಯಾರ್ಥಿ ಹೋರಾಟಗಾರರಿಗೆ ಜಾಮೀನು ನೀಡಿ ದೆಹಲಿಯ ಉಚ್ಚನ್ಯಾಯಾಲಯವು ನೀಡಿರುವ ತೀರ್ಪಿನ ಬಗ್ಗೆ ನಿಮ್ಮ ಪ್ರತಿಕ್ರಿಯೆ.....

ತುಂಬ ಆಸಕ್ತಿದಾಯಕವಾದ ಈ ತೀರ್ಪನ್ನು ವಿವರವಾಗಿ ಓದಿದ್ದೇನೆ. ಇದು ಇಂದಿನ ಸಂದರ್ಭದಲ್ಲಿ ನಿರ್ಣಾಯಕ ಸ್ವರೂಪದ್ದಾಗಿದ್ದು ಹೆಚ್ಚಿನ ಕಾನೂನು ಕೌಶಲ್ಯದಿಂದ ರಚಿಸಲಾಗಿರುವ ತೀರ್ಪು ಕೂಡಾ ಆಗಿದೆ. ಈ ಹಿಂದೆ ಎತ್ತಲಾಗಿದ್ದ ಪ್ರಶ್ನೆಗಳನ್ನೂ ಉತ್ತರಿಸಿದೆ. ಶಿಕ್ಷೆಯು ಹೆಚ್ಚೆಚ್ಚು ಕಠಿಣವಾದಂತೆ, ಕಾನೂನು ಹೆಚ್ಚೆಚ್ಚು ಬಿಗಿಯಾದಂತೆ, ಪ್ರಕರಣಗಳನ್ನು ನ್ಯಾಯಾಲಯವು ಇನ್ನೂ ಹೆಚ್ಚು ಎಚ್ಚರಿಕೆಯಿಂದ ಪರಿಶೀಲಿಸಬೇಕಾಗುತ್ತದೆ ಎಂದಿರುವುದು ಸರಿಯಾಗಿದೆ. ಪೊಲೀಸರು ಅಥವಾ ಯಾವುದೇ ಪರಿಶೀಲನಾ ಮಂಡಳಿ ಒಂದು ಪ್ರಕರಣವನ್ನು ಯುಎಪಿಎ ಅಡಿಯಲ್ಲಿ ದಾಖಲಿಸಲರ್ಹ ಎಂದ ಮಾತ್ರಕ್ಕೇ ಜಾಮೀನು ನಿರಾಕರಿಸಬೇಕೆಂದೇನಿಲ್ಲ ಎಂಬುದನ್ನು ಕೂಡಾ ಹೇಳಿದೆ. ಮೇಲ್ನೋಟಕ್ಕೇ ಸ್ಪಷ್ಟವಾಗುವ ಸಾಕ್ಷ್ಯಾಧಾರದ ಮೇಲೆ ಅಪರಾಧ ನಡೆದಿದೆಯೋ ಇಲ್ಲವೋ ಎಂಬುದನ್ನು ಈ ಪ್ರಕರಣದಲ್ಲಿ ಸರಿಯಾಗಿ ಪರಿಶೀಲಿಸಿಲ್ಲ ಎಂಬುದನ್ನೂ ದಾಖಲಿಸಿದೆ. ಇತ್ತೀಚಿನ ವರ್ಷಗಳಲ್ಲಿ ನಾವು ಕಂಡ ತೀರ್ಪುಗಳ ಹಿನ್ನೆಲೆಯಲ್ಲಿ, ಈ ತೀರ್ಪು ಒಂದು ರೀತಿ ಹೊಸಗಾಳಿ ಬೀಸಿದಂತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಬಂಧನಗಳ ನಡುವೆ ಇರಬೇಕಾದ ಒಂದು ಸಮತೋಲನದ ಬಗ್ಗೆ ಮಾತನಾಡಿರುವುದು ಬಹಳ ಮುಖ್ಯ ಅಂಶ.

ನ್ಯಾಯಮೂರ್ತಿಗಳಾದ ಜ.ಸಿದ್ಧಾರ್ಥ್ ಮೃದುಲ್ ಮತ್ತು .ಅನೂಪ್ ಜೆ ಭಂಭಾನಿ ಅವರು ಈ ತೀರ್ಪಿನಲ್ಲಿ ಬರೆದಿರುವ ಕೆಲ ಸಾಲುಗಳನ್ನು ಓದುತ್ತೇನೆ: 'ಭಿನ್ನಮತವನ್ನು ದಮನಿಸುವ ಕಾತರದಲ್ಲಿ ಪ್ರಭುತ್ವವು, ಪ್ರತಿಭಟನೆಯ ಹಕ್ಕು ಮತ್ತು ಭಯೋತ್ಪಾದನಾ ಚಟುವಟಿಕೆಯ ನಡುವಣ ಗೆರೆಯನ್ನು ಮಸುಕಾಗಿಸಿದೆ. ಈ ಮನಸ್ಥಿತಿಯನ್ನೇ ಸ್ಥಾಯಿಗೊಳಿಸಿದರೆ ಪ್ರಜಾಪ್ರಭುತ್ವಕ್ಕದು ದುರ್ದಿನವೇ ಸರಿ'. ಈ ಬಗ್ಗೆ ಏನು ಹೇಳುವಿರಿ?

ಇದು ಬಹಳ ಸತ್ಯವಾದ ಮಾತು. ಏನು ಹೇಳಬೇಕೋ ಅದನ್ನು ಬಹಳ ಸೂಕ್ಷ್ಮವಾಗಿ ಸ್ಪಷ್ಟವಾಗಿ ಹೇಳಿದ್ದಾರೆ. ಜನರು ಪ್ರತಿಭಟಿಸುತ್ತಾರೆ. ಪ್ರಜಾಪ್ರಭುತ್ವದ ಜೀವಾಳವೇ ಅದು. ಎಲ್ಲರಿಗೂ ಸರ್ಕಾರವನ್ನು ಟೀಕಿಸುವ ಹಕ್ಕು ಇದೆ. ಸರ್ಕಾರದ ನೀತಿಗಳನ್ನು ಟೀಕಿಸಿದ ಮಾತ್ರಕ್ಕೆ ಯಾರೂ ದೇಶದ್ರೋಹಿಗಳಾಗುವುದಿಲ್ಲ. ಈ ಪ್ರಕರಣದಲ್ಲಿ ಆರೋಪಪಟ್ಟಿಯೇ 19.000 ಪುಟಗಳಷ್ಟಿದೆ! ಇದರ ಜೊತೆಗೆ 740 ಸಾಕ್ಷಿಗಳ ಪಟ್ಟಿ ಇದೆ. ಅಂದರೆ, ಇನ್ನು ಕನಿಷ್ಠ ಹತ್ತು ಹದಿನೈದು ವರ್ಷ ತೀರ್ಪು ಬರುವುದಿಲ್ಲ ಎಂಬುದು ಸ್ಪಷ್ಟವಾಯಿತು... ತೀರ್ಪು ಬರುವವರೆಗೆ ಇವರುಗಳನ್ನು ಸೆರೆಮನೆಯಲ್ಲಿರಿಸುವುದು ಎಷ್ಟು ಸರಿ? ತ್ವರಿತಗತಿಯಲ್ಲಿ ವಿಚಾರಣೆ ನಡೆದು ತೀರ್ಪು ಪಡೆದುಕೊಳ್ಳುವುದು ವಿಚಾರಣಾಧೀನ ಕೈದಿಗಿರುವ ಹಕ್ಕು. ಅದನ್ನು ಅವರಿಗೆ ಖಾತ್ರಿಪಡಿಸದಿದ್ದರೆ, ಅವರಿಗೆ ಜಾಮೀನಿನ ಮೇಲೆ ಬಿಡುಗಡೆ ಪಡೆಯುವ ಅರ್ಹತೆ ಇದೆ. ಇಂದು ನಮ್ಮ ದೇಶದಲ್ಲಿ ಜೈಲಿನಲ್ಲಿರುವ ಶೇ. 70–80 ರಷ್ಟು ಜನ ವಿಚಾರಣಾಧೀನ ಕೈದಿಗಳು. ಅವರೆಲ್ಲ ತಪ್ಪಿತಸ್ಥರಲ್ಲದಿರಬಹುದು. ಅವರಲ್ಲಿ ಹಲವರು ನಿರಪರಾಧಿಗಳು. ಅಂಥವರು ಮೂರ್‍ನಾಲ್ಕು ವರ್ಷಗಳ ನಂತರ ಬಿಡುಗಡೆಗೊಂಡರೆ, ಅವರು ಕಳೆದುಕೊಂಡ ಜೀವನವನ್ನು ಅವರಿಗೆ ಮತ್ತೆ ಯಾರು ತಂದುಕೊಡುವವರು? ಈ ವಿದ್ಯಾರ್ಥಿಗಳೂ ಕೂಡ ಐದಾರು ವರ್ಷಗಳ ನಂತರ ತಪ್ಪಿತಸ್ಥರಲ್ಲ ಎಂದು ಬಿಡುಗಡೆಯಾದರೆ, ಕಳೆದು ಹೋದ ಅವರ ಬದುಕನ್ನು ಹೇಗೆ ಮರಳಿಪಡೆಯುವರು? ತೀರ್ಪಿನಲ್ಲಿ 'ಒಂದು ವಿದ್ಯಾರ್ಥಿ ಸಮೂಹದ ಪ್ರತಿಭಟನೆಯನ್ನು ತಡೆದುಕೊಳ್ಳುವಷ್ಟು ಈ ದೇಶದ ಪ್ರಜಾಪ್ರಭುತ್ವದ ಭುಜಗಳು ಇನ್ನೂ ಬಲಶಾಲಿಯಾಗಿವೆ ಮತ್ತು ಯಾವಾಗಲೂ ಬಲಶಾಲಿಯಾಗಿ ಇರಬೇಕು' ಎಂದಿರುವ ಭಾಗ ನನಗೆ ತುಂಬಾ ಇಷ್ಟವಾಯಿತು.

ಪ್ರತಿಭಟನಾಕಾರರ ಮೇಲೆ ಯುಎಪಿಎಯಂತಹ ಗಂಭೀರ ಭಯೋತ್ಪಾದನೆಯ ಕಾಯಿದೆಯನ್ನು ಬಳಸುವ ಪ್ರಭುತ್ವದ ಪ್ರವೃತ್ತಿಯನ್ನು ಹೇಗೆ ಅರ್ಥೈಸುತ್ತೀರಿ?

ಯುಎಪಿಎ ಮಾತ್ರವಲ್ಲ, ರಾಜದ್ರೋಹ, ೧೫೩ಎ, ಮುಂತಾದ ಗಂಭೀರ ಆರೋಪಗಳನ್ನು ಕೂಡಾ ಸಿಕ್ಕಸಿಕ್ಕಲ್ಲೆಲ್ಲ ದಾಖಲಾಗಿಸುತ್ತಿದೆ. ಈ ಪ್ರವೃತ್ತಿಯು ಇಂದಿನ ಸರ್ಕಾರದ್ದು ಮಾತ್ರವಲ್ಲ. ಅಧಿಕಾರದಲ್ಲಿದ್ದ ಎಲ್ಲ ಪಕ್ಷಗಳೂ ಈ ಕಾಯ್ದೆಗಳನ್ನು ಪ್ರತೀಕಾರಕ್ಕಾಗಿ ದುರ್ಬಳಕೆ ಮಾಡಿಕೊಂಡಿವೆ. ಸದರಿ ಸರ್ಕಾರವು ಹೆಚ್ಚು ದುರ್ಬಳಕೆ ಮಾಡಿರಬಹುದಷ್ಟೇ. ಇಂದಿರಾ ಗಾಂಧಿಯವರ ಮತ್ತು 2008ರಲ್ಲಿ ಮನಮೋಹನಸಿಂಗ್‌ರ ಕಾಲದಲ್ಲಿಯೇ ಈ ಕಾಯ್ದೆಗಳಿಗೆ ಬಹಳಷ್ಟು ಕಠಿಣವಾದ ತಿದ್ದುಪಡಿಗಳನ್ನು ತಂದಿರುವುದು. ಅಧಿಕಾರದಲ್ಲಿರುವವರನ್ನು ನೋಡಿದಾಗ, 'ಅಧಿಕಾರವು ಭ್ರಷ್ಟರನ್ನಾಗಿಸುತ್ತದೆ ಮತ್ತು ಸಂಪೂರ್ಣ ಅಧಿಕಾರವು ಸಂಪೂರ್ಣವಾಗಿ ಭ್ರಷ್ಟರನ್ನಾಗಿಸುತ್ತದೆ' ಎನ್ನುವ ಮಾತು ನನಗೆ ನೆನಪಾಗುತ್ತದೆ. ಕಳೆದ ನಾಲ್ಕೈದು ವರ್ಷಗಳಲ್ಲಿ ಈ ಪ್ರವೃತ್ತಿ ಹೆಚ್ಚಾಗಿದೆ. ಅದು ಸಿಎಎ ವಿರೋಧಿ ಪ್ರತಿಭಟನೆಯಾಗಿರಬಹುದು, ರೈತರ ಪ್ರತಿಭಟನೆಯಾಗಿರಬಹುದು, ಅವರನ್ನು ದೇಶದ್ರೋಹಿ ಅನ್ನುವುದು ಬಹಳ ಬಹಳ ತಪ್ಪು. ಇದು ಬೆಂಕಿಯೊಂದಿಗೆ ಆಟ ಆಡಿದಂತೆ. ಸಾಮಾನ್ಯ ಜನರನ್ನು ದೇಶದ್ರೋಹಿಗಳೆಂದು ಕರೆದರೆ, ನೀವು ಅವರನ್ನು ನಿಜವಾಗಿಯೂ ದೇಶದ್ರೋಹಿಗಳಾಗುವ ಅಂಚಿನತ್ತ ತಳ್ಳುತ್ತಿದ್ದೀರಿ ಎಂದರ್ಥ.

ರಾಜದ್ರೋಹದ ಆರೋಪ ಹೊರಿಸುವುದರ ಕುರಿತು ಏನು ಹೇಳುವಿರಿ? ವ್ಯಂಗ್ಯಚಿತ್ರಕಾರರೊಬ್ಬರ ಮತ್ತು ಪತ್ರಕರ್ತರಾದ ವಿನೋದ್ ದುವಾ ಅವರ ಮೇಲಿನ ಪ್ರಕರಣಗಳ ಹಿನ್ನೆಲೆಯಲ್ಲಿ...

ರಾಜದ್ರೋಹವೆಂಬುದು ಕಾನೂನು ಪುಸ್ತಕಗಳಲ್ಲಿರಬಾರದು ಎನ್ನುವುದು ನನ್ನ ಸ್ಪಷ್ಟ ಅಭಿಪ್ರಾಯ. ಹಿಂಸೆಗೆ ಪ್ರಚೋದಿಸಿದರೆ ಮತ್ತು ಗಂಭೀರವಾಗಿ ಸಾರ್ವಜನಿಕ ಸುವ್ಯವಸ್ಥೆಗೆ ಭಂಗ ತರುವ ಪ್ರಕರಣಗಳಲ್ಲಿ ಮಾತ್ರ ಇದನ್ನು ಅನ್ವಯಿಸಬೇಕೇ ಹೊರತು ಸರ್ಕಾರವನ್ನು ಟೀಕಿಸಿದ ಮಾತ್ರಕ್ಕೇ ಅಲ್ಲ. ರಾಜದ್ರೋಹವೆಂಬುದು (ಐಪಿಸಿ ಸೆಕ್ಷನ್ ೧೨೪ಎ) ವಸಾಹತುಶಾಹಿ ಕಾಲದ ಕಾನೂನು. ಮಹಾತ್ಮಾ ಗಾಂಧಿ ಮತ್ತು ತಿಲಕರ ಮೇಲೆ ಈ ಆರೋಪಗಳನ್ನು ಹೊರಿಸಲಾಗಿತ್ತು. ಸ್ವಾತಂತ್ರ್ಯ ಬಂದ ನಂತರ ಮೊಟ್ಟಮೊದಲು ಈ ಕಾನೂನು ರದ್ದಾಗಬೇಕಿತ್ತು ಎಂಬುದು ನನ್ನ ಅಭಿಪ್ರಾಯ. ಹಾಗಾಗಲಿಲ್ಲ. ಅಧಿಕಾರದಲ್ಲಿರುವ ಸರಕಾರವನ್ನು ಟೀಕೆ ಮಾಡುವವರನ್ನು ಹೆದರಿಸುವ ಅವಕಾಶವನ್ನು ಯಾವ ಸರ್ಕಾರವೂ ಬಿಟ್ಟುಕೊಡುವುದಿಲ್ಲ. ೧೯೭೪-೭೫ರಲ್ಲಿ, ಇಂದಿರಾಗಾಂಧಿಯವರು ಪ್ರಧಾನಿಗಳಾಗಿದ್ದಾಗ, ಇದನ್ನು ಅನೌಪಚಾರಿಕ (ಕಾಗ್ನೈಸಬಲ್ ಅಫೆನ್ಸ್) ಆರೋಪವನ್ನಾಗಿ ಮಾಡಲಾಯಿತು. ಇದೇ ಬಹಳ ಕೆಟ್ಟದಾಯಿತು. ಆ ಮೊದಲು ರಾಜದ್ರೋಹದ ಪ್ರಕರಣವನ್ನು ಒಬ್ಬ ಪೊಲೀಸ್ ಅಧಿಕಾರಿಯ ದೂರಿನ ಮೇಲೆ ಮಾತ್ರ ದಾಖಲಿಸಲು ಸಾಧ್ಯವಿತ್ತು. ಈಗ ಯಾರು ಬೇಕಾದರೂ ಯಾರ ಮೇಲಾದರೂ ಪ್ರಕರಣ ದಾಖಲಿಸಬಹುದು. ಹೀಗಾಗಿಯೇ ಹಿಮಾಚಲದ ಒಂದು ಮೂಲೆಯಲ್ಲಿರುವ ಶ್ಯಾಮ್ ಎಂಬ ಒಬ್ಬರು ವಿನೋದ್ ದುವಾ ಮೇಲೆ ಪ್ರಕರಣ ದಾಖಲಿಸಿದ್ದು. ಅವರೇನೋ ಸರ್ವೋಚ್ಚ ನ್ಯಾಯಾಲಯದ ತನಕ ಹೋಗಬಲ್ಲವರಾಗಿದ್ದರು. ಆದರೆ ಬೇರೆ ಪತ್ರಕರ್ತರಿಗೆ ಉಚ್ಚನ್ಯಾಯಾಲಯಕ್ಕೆ ಹೋಗಲೂ ಸಾಧ್ಯವಾಗದೇ ಸ್ವಲ್ಪಕಾಲ ಬಂಧನದಲ್ಲೇ ಇರಬೇಕಾದ ಪರಿಸ್ಥಿತಿ ಎದುರಾದರೆ, ಏನೆನ್ನಿಸುತ್ತೆ? ಶಿಕ್ಷೆಯ ಭಯ ಅತ್ತ ಇರಲಿ, ಬಂಧನದ ಭಯವೇ ನಡುಕ ಹುಟ್ಟಿಸುವಂತಹದು. ನಾನು ಹೇಳುವುದೇನೆಂದರೆ, ಈ ಸೆಕ್ಷನ್ ಪೂರ್ಣ ರದ್ದಾಗದಿದ್ದರೂ ಕೊನೇಪಕ್ಷ ಅದು ಔಪಚಾರಿಕ(ನಾನ್-ಕಾಗ್ನೈಸಬಲ್)ವಾಗಿಸುವ ತಿದ್ದುಪಡಿ ಮಾಡಬೇಕು. ರಾಜದ್ರೋಹದ ಪ್ರಕರಣಗಳಲ್ಲಿ ಶೇ. ೩ರಷ್ಟು ಮಂದಿ ಮಾತ್ರ ಶಿಕ್ಷೆಗೊಳಗಾಗುತ್ತಾರೆ ಎಂದು ಕೇಳಿರುವೆ. ಅಂದರೆ ಉಳಿದ ಶೇ.೯೭ರಷ್ಟು ಆರೋಪಿಗಳು ಬಿಡುಗಡೆಯಾಗುತ್ತಿದ್ದಾರೆ ಎಂದಾಯಿತು. ಅಂದರೆ ಪ್ರಕರಣಗಳ ದಾಖಲೆಯ ಹಂತದಲ್ಲೇ ಏನೋ ಸಮಸ್ಯೆ ಇದೆ ಎಂದೇ ಅರ್ಥ. ಸರ್ಕಾರಕ್ಕೆ ಸರಿಯಾದ ಸಲಹೆ ನೀಡುವುದು ಒಬ್ಬ ಒಳ್ಳೆಯ ಸರ್ಕಾರೀ ವಕೀಲನ ಕರ್ತವ್ಯ. ರಾಜದ್ರೋಹದ ಪ್ರಕರಣಗಳಲ್ಲಿ ಶಿಕ್ಷೆಯಾಗುವ ಪ್ರಮಾಣ ಶೇಕಡಾ ೨೦ ಕ್ಕಿಂತ ಕಡಿಮೆ ಇದ್ದರೆ ಮತ್ತು ಶೇ. ೭೫–೮೦ರಷ್ಟು ನಿರಪರಾಧಿಗಳು ವಿಚಾರಣಾಧೀನ ಕೈದಿಗಳಾಗಿ ಜೈಲಿನಲ್ಲಿದ್ದರೆ, ಇದು ಅತ್ಯಂತ ವಿಷಾದನೀಯ ಪರಿಸ್ಥಿತಿ.

ತುರ್ತುಪರಿಸ್ಥಿತಿಯ ಹೊಸ್ತಿಲಲ್ಲಿ ಈ ತಿದ್ದುಪಡಿಯಾಗಿರುವುದು ಭಿನ್ನಾಭಿಪ್ರಾಯವನ್ನು,

(೧೧ನೇ ಪುಟಕ್ಕೆ

‘ಇನ್ನು ಈ ಅಭಿವೃದ್ಧಿ ಸಾಕು’: ಮುಂದುವರೆದ ಚರ್ಚೆ



ಕಳೆದ ಸಂಚಿಕೆಯಲ್ಲಿನ ಈ ವಿಷಯ ಕರಿತ ಚರ್ಚೆ ಕನಿಷ್ಠ ನಮ್ಮ ಪತ್ರಿಕೆಯ ಓದುಗ ಸಮೂಹದಲ್ಲಾದರೂ ಒಂದು ಸಣ್ಣ ಸಂಚಲನವನ್ನುಂಟು ಮಾಡಿದೆ. ಈ ಮುಂದಿರುವ ಪ್ರತಿಕ್ರಿಯೆಗಳು ಮತ್ತು ‘ನಿಮ್ಮ ಪತ್ರ’ ಅಂಕಣದಲ್ಲಿನ ಅಭಿಪ್ರಾಯಗಳು ಇದಕ್ಕೆ ಸಾಕ್ಷಿಯಂತಿವೆ. ಈ ಸಂಚಿಕೆ ಸಿದ್ಧಗೊಳ್ಳುತ್ತಿರುವ ಸಮಯದಲ್ಲೂ ಸಣ್ಣ ಪುಟ್ಟ ಪ್ರತಿಕ್ರಿಯೆಗಳೂ, ಪತ್ರಗಳೂ ಬರುತ್ತಿವೆ. ಅನೇಕರು ಈ ಚರ್ಚೆಯನ್ನು ತಮ್ಮ ಬ್ಲಾಗ್‌ಗಳಲ್ಲಿ ಮತ್ತು ಫೇಸ್‌ಬುಕ್‌ಗಳಲ್ಲೂ ಹಂಚಿಕೊಂಡು ಹೆಚ್ಚಿನ ಚರ್ಚೆಗೆ ದಾರಿ ಮಾಡಿಕೊಟ್ಟಿದ್ದಾರೆ.

ನಾವು ಈ ಚರ್ಚೆಯನ್ನು ಮುಂದಿಡಲು ಯೋಚಿಸಿದಾಗ ಇದನ್ನು ‘ಪ್ರಗತಿ ವಿರೋಧಿ’ ನಡೆಯೆಂದು ಸಾರಾಸಗಟಾಗಿ ತಿರಸ್ಕರಿಸಬಹುದೆಂಬ ನಮ್ಮ ಅನುಮಾನ ಸುಳ್ಳಾಗಿ ಈ ವಿಷಯ ಈಗಾಗಲೇ ಹಲವರ ಮನಸ್ಸನ್ನು ಕಾಡಿದ್ದು, ಕೆಲವರು ಈಗಾಗಲೇ ತಮ್ಮ ಮಿತಿಗಳಲ್ಲಿ ಅದನ್ನು ಜಾರಿಗೆ ತರುತ್ತಿರುವುದೂ ಈ ಚರ್ಚೆಯಿಂದ ಗೊತ್ತಾಗಿದೆ. ಈಗ ಅಗತ್ಯವಾಗಿರುವುದು ಈ ಕುರಿತು ಕನಿಷ್ಠ ಸಮಾನ ಮನಸ್ಕರ ನಡುವೆ ಸಮನ್ವಯದ ಮೂಲಕ ಇದನ್ನೊಂದು ವ್ಯವಸ್ಥಿತ ಮತ್ತು ವ್ಯಾಪಕ ಕಾರ್ಯಕ್ರಮವನ್ನಾಗಿ ಮಾಡುವುದು. ಅದೇನೇ ಇರಲಿ, ಕರೋನಾ ತಂದೊಡ್ಡಿರುವ ಮಹಾವಿಪತ್ತು ಜಗತ್ತಿನ ಹಲವೆಡೆ ಇಂತಹ ಆಲೋಚನೆಗೆ ಕಾರಣವಾಗಿದ್ದರೂ, ಸರ್ಕಾರದ ಮಟ್ಟದಲ್ಲಿ ಇಂತಹ ಆಲೋಚನೆಯ ಸುಳಿವೂ ಕಾಣದಿರುವುದು ದುರದೃಷ್ಟಕರವಾದರೂ ಆಶ್ಚರ್ಯದ ಸಂಗತಿಯೇನಲ್ಲ. ಏಕೆಂದರೆ, ಜಗತ್ತಿನ ಇಂದಿನ ಬಹುತೇಕ ಸರ್ಕಾರಗಳು ನಿಂತಿರುವುದೇ ಅಭಿವೃದ್ಧಿ ಎಂಬ ದಂಧೆಯನ್ನು ಅವಲಂಬಿಸಿಯೇ ಅಲ್ಲವೆ?

ಹಾಗಾಗಿ ಈ ಸಂಬಂಧ ವೈಯಕ್ತಿಕ ನೆಲೆಯಲ್ಲಿ ಎಷ್ಟೇ ಪ್ರಯತ್ನಗಳು ನಡೆದಿದ್ದರೂ ಸರ್ಕಾರಗಳಿಗೆ ಚುರುಕು ಮುಟ್ಟಿಸುವ ಮೂಲಕ ಮಾತ್ರ ಇದನ್ನು ಸಾಧಿಸಬಹುದು ಎಂದು ಭಾವಿಸಿ ನಾನು ಇತ್ತೀಚೆಗೆ ನಮ್ಮ ಮನೆಗೆ ಬಂದಿದ್ದ ಕೆಲ ಆಸಕ್ತ ರಾಜಕೀಯ ವ್ಯಕ್ತಿಗಳೊಂದಿಗೇ ಈ ಪ್ರಸ್ತಾಪ ಮಾಡಿದೆ. ನಮ್ಮ ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್. ಈಶ್ವರಪ್ಪನವರು ಶಿವಮೊಗ್ಗದವರಾದ್ದರಿಂದ ಕರ್ನಾಟಕ ಪಂಚಾಯಿತ್ ರಾಜ್ ಪರಿಷತ್ತಿನ ಸಭೆಯೊಂದು ಕೆಲ ದಿನಗಳ ಹಿಂದೆ ಈ ಊರಿನಲ್ಲಿ ಆಯೋಜಿತವಾಗಿದ್ದು ಇದರಲ್ಲಿ ಭಾಗವಹಿಸಲು ಈ ಪರಿಷತ್ತಿನ ಕಾರ್ಯಾಧ್ಯಕ್ಷರಾದ ಮಾಜಿ ಸಂಸದ ಸಿ. ನಾರಾಯಣಸ್ವಾಮಿ ಮತ್ತು ಪರಿಷತ್ತಿನ ಇತರ ಪದಾಧಿಕಾರಿಗಳಾದ ಡಿ.ಆರ್. ಪಾಟೀಲ್, ಪ್ರಮೋದ್ ಹೆಗಡೆ, ವಿ.ಎಂ. ಘೋರ್ಪಡೆ, ಏಕನಾಥ್, ಕಾಡಶೆಟ್ಟಿಹಳ್ಳಿ ಸತೀಶ್ ಬಂದಿದ್ದರು. ಇವರೆಲ್ಲ ಅಧಿಕಾರ ವಿಕೇಂದ್ರೀಕರಣಕ್ಕಾಗಿ, ಪಂಚಾತ್‌ರಾಜ್‌ಗಾಗಿ ಕೆಲಸ ಮಾಡುತ್ತಿರುವವರೇ. ಇವರನ್ನೆಲ್ಲ ಈ ಸಭೆಗೆ ಗಾಂಧಿ ಭವನದ ಪ್ರತಿನಿಧಿಯಾಗಿ ಬಂದಿದ್ದ ಗೆಳೆಯ ಜಿ.ಬಿ. ಶಿವರಾಜು ನನ್ನ ಮನೆಗೆ ಕರೆ ತಂದಿದ್ದರು. ಇವರೆಲ್ಲ ನನ್ನ ‘ಗಾಂಧಿ ಕಥನ’ ಓದಿದ್ದವರೇ ಆಗಿದ್ದು ನನ್ನನ್ನು ಕಾಣುವ ಆಸಕ್ತಿ ತೋರಿದರಂತೆ. ಹಾಗೆ ನೋಡಿದರೆ ಆರ್. ಪಾಟೀಲರು ಈ ಪುಸ್ತಕದ ಸಾವಿರಾರು ಪ್ರತಿಗಳ ಮಾರಾಟದ ವ್ಯವಸ್ಥೆ ಮಾಡಿ ಅದರ ಮಹಾಪೋಷಕರಾಗಿರುವವರಲ್ಲವೆ?

ಗ್ರಾಮ ಪಂಚಾಯ್ತಿಗಳನ್ನು ಬಲಪಡಿಸಲು ಕಾನೂನಿನಲ್ಲಿ ಮಾಡಬೇಕಾದ ತಿದ್ದುಪಡಿಗಳ ಬಗ್ಗೆ ಚರ್ಚಿಸಲು ಬಂದಿದ್ದ ಇವರಿಗೆ ನಾನು ಹೇಳಿದ್ದಿಷ್ಟು: ಗ್ರಾಮಗಳನ್ನು ನಗರಗಳನ್ನಾಗಿ ಮಾಡುತ್ತಿರುವ ಸದ್ಯದ ಅಭಿವೃದ್ಧಿ ನೀತಿಯನ್ನು ಪರಿಷ್ಕರಿಸದೆ ಇಂತಹ ಕಾನೂನು ತಿದ್ದುಪಡಿಗಳಿಂದ ಯಾವುದೇ ಪ್ರಯೋಜನವಿರಲಾರದು. ಇದು ಕರೋನಾ ಪೀಡಿತ ನಗರದ ಜನ ಹಳ್ಳಿಗಳತ್ತ ಓಡಿಬಂದು ಅಲ್ಲೂ ಸೋಂಕು ಹರಡಲು ಕಾರಣವಾಗುವ ರೋಗದ ಚಕ್ರವ್ಯೂಹ ರಚನೆ ಮಾಡಿದಂತಾಗುತ್ತದಷ್ಟೆ. ಬದಲಿಗೆ ಕರೋನಾದಂತಹ ನಾಗರೀಕತೆಯ ರೋಗಗಳ ಮೂಲಕ್ಕೇ ಕೈ ಹಾಕುವ ವ್ಯವಸ್ಥಿತ ಕಾರ್ಯಕ್ರಮ ಅಥವಾ ಅಭಿಯಾನಗಳಿಗೆ ಕಾನೂನು ಮಾಡಿ. ಉದಾಹರಣೆಗೆ, ‘ಮನೆಗೊಂದು ಬೈಸಿಕಲ್’ ಕಾರ್ಯಕ್ರಮ ಶುರು ಮಾಡಿ ವಾಹನ ದಟ್ಟಣೆ ಕಡಿಮೆ ಮಾಡುವ, ಜನರಲ್ಲಿ ಕನಿಷ್ಠ ದೂರಗಳನ್ನಾದರೂ ನಡೆದು ಕ್ರಮಿಸುವ, ಸಣ್ಣ ಊರುಗಳಲ್ಲಾದರೂ ಶಾಲಾ ಕಾಲೇಜುಗಳಿಗೆ ಮತ್ತು ಕಛೇರಿ–ಕಾರ್ಖಾನೆಗಳಿಗೆ ಹೋಗಲು ಸೈಕಲನ್ನೇ ಬಳಸುವ, ಜನ ಪ್ರತಿನಿಧಿಗಳೂ, ಸಚಿವರೂ ದೂರದ ಪ್ರಯಾಣಗಳಿಗಾಗಿ ಸಾಮೂಹಿಕ ವಾಹನಗಳನ್ನೇ ಬಳಸುವ, ನಗರ ಸಂಚಾರಿ ವಾಹನಗಳಲ್ಲಿನ ಹವಾ ನಿಯಂತ್ರಣ ವ್ಯವಸ್ಥೆಯನ್ನು ನಿಲ್ಲಿಸಿ, ಬೇಕಿದ್ದರೆ ವಿರಳ ಆಸನ ವ್ಯವಸ್ಥೆಯ ವಿಶೇಷ ವಾಹನಗಳ ವ್ಯವಸ್ಥೆ ಮಾಡುವಂತೆ ಆಗ್ರಹಿಸುವ ಕಾರ್ಯಕ್ರಮ ಹಾಕಿಕೊಳ್ಳಿ. ಮನೆ ತುಂಬಾ ಗ್ರಾನೈಟ್ ಹಾಸಿಸುವುದರ ವಿರುದ್ಧ. ಬೇಸಾಯವನ್ನು ಕ್ರಮೇಣ ರಾಸಾಯನೀಕರಣದಿಂದ ಮುಕ್ತಗೊಳಿಸುವ, ಜಲಮೂಲಗಳನ್ನು ಪುನರುಜ್ಜೀವನಗೊಳಿಸುವ ಪ್ರಚಾರಾಂದೋಲನ ಶುರು ಮಾಡಿ. ಸರ್ಕಾರದ ಮೇಲೆ ಒತ್ತಡ ಹೇರಿ ಚತುಷ್ಪಥ ರಸ್ತೆಗಳಿಗಿಂತ ದೊಡ್ಡದಾದ ರಸ್ತೆಗಳ, ವೇಗದ ವೈಭವದ ಕಾರುಗಳ, ರೈಲುಗಳ, ಊರಿಗೊಂದು ವಿಮಾನ ನಿಲ್ದಾಣ ನಿರ್ಮಾಣ, ಊರುಗಳ ನಡುವೆ ಬಸ್ ಮತ್ತು ರೈಲು ಸಂಚಾರವನ್ನು ಹೆಚ್ಚಿಸುವುದನ್ನು ತಡೆಯುವ ಸಂಘಟಿತ ಪ್ರಯತ್ನಗಳನ್ನು ರೂಪಿಸಿ.

ಇವು ಸುಮ್ಮನೆ ಯೋಚಿಸಿದಾಗ ಸದ್ಯಕ್ಕೆ ಹೊಳೆದ ಆಲೋಚನೆಗಳು. ನಾವು ‘ಗ್ಲೋಬಲ್; ಆಗಿದ್ದೂ ಮಾಡಬಹುದಾದ ಮತ್ತು ಗ್ಲೋಬಲೈಜೇಶನ್‌ನ ಬಂಧನಗಳಿಂದ ಕ್ರಮೇಣ ಬಿಡಿಸಿಕೊಳ್ಳಲು ಪರಸ್ಪರ ಪರಿಣಾಮಗಳಿಂದ ನೆರವಾಗುವ ಕಾರ್ಯಕ್ರಮಗಳು. ಇದಕ್ಕಾಗಿ ಉತ್ಪಾದನೆಗಾಗಿ ಬಳಕೆಯಲ್ಲ; ಅಗತ್ಯಕ್ಕಾಗಿ ಬಳಕೆ; ಬಳಕೆಗಾಗಿ ಉತ್ಪಾದನೆ ಎಂಬ ಹೊಸ ಆರ್ಥಿಕತೆಯ ಸಂದೇಶವನ್ನು ಜನರಿಗೆ ಮುಟ್ಟಿಸಿ. ಹಾಗೇ ಉದ್ಯೋಗ ನಿರ್ಮಾಣಕ್ಕಾಗಿ ಉತ್ಪಾದನೆ ಎಂಬುದು ನವಕೈಗಾರೀಕರಣದ ಲಾಭಕೋರತನ ಪರಿಚಯಿಸಿದ ಸರಳೀಕೃತ ಆರ್ಥಿಕ ಸೂತ್ರವಾಗಿದ್ದು, ಅದು ಉದ್ಯೋಗದ ಆರ್ಥೋದ್ದೇಶಗಳನ್ನೇ ವಿಕೃತಗೊಳಿಸಿದೆ ಎಂದು ಮನದಟ್ಟು ಮಾಡಬೇಕಿದೆ. ಈ ಕರೋನಾ ಕಾಲ ಇದಕ್ಕೆಲ್ಲ ಸೂಕ್ತ ಕಾಲ. ಹೇಗೂ ಎರಡೂ ಲಾಕ್‌ಡೌನ್‌ಗಳ ಕಾಲದಲ್ಲಿ ಗ್ಲೋಬಲೈಸ್ ಆದ ಜನವೂ ಕನಿಷ್ಠ ಅಗತ್ಯಗಳ ಗರಿಷ್ಠ ನೆಮ್ಮದಿಯ ಬದುಕನ್ನು ರೂಢಿಸಿಕೊಂಡು ಒಂದು ಸ್ಥಿತ್ಯಂತರ ಅವಧಿಯನ್ನೂ ಸಿದ್ಧಪಡಿಸಿದ್ದದಾರಲ್ಲ! ಇದಕ್ಕಾಗಿ ಪಂಚಾಯ್ತಿ ಮಟ್ಟದಲ್ಲಿ ಸ್ವರಾಜ್ ಪಡೆ ರಚಿಸಿ ಅವುಗಳಿಗೆ ಮಾರ್ಗದರ್ಶನ ನೀಡುವ ಕ್ರಿಯಾಶೀಲಗೊಳಿಸುವ ಕಾರ್ಯಕ್ರಮ ಹಾಕಿಕೊಳ್ಳಿ.

ಇದೆಲ್ಲ ಅಂದಿನ ಅತಿಥಿಗಳ ಕಿವಿಗಳ ಮೇಲೆ ಎಷ್ಟು ಬಿತ್ತೋ ತಿಳಿಯದು. ಆದರೆ ಇವುಗಳಲ್ಲಿ ಬಹಳಷ್ಟನ್ನು ಆಸಕ್ತ ಗುಂಪುಗಳು ಕೂಡ ಮಾಡಬಲ್ಲವಲ್ಲವೆ? ಕಾದು ನೋಡೋಣ–ಸಂ

ಈ ಅಭಿವೃದ್ಧಿ ಇನ್ನು ಸಾಕು; ಆದರೆ ಆ ಕುರಿತು ಚರ್ಚೆ ಇನ್ನೂ ಬೇಕು!

“ಈ ಅಭಿವೃದ್ಧಿ ಇನ್ನು ಸಾಕು” ಎಂಬ ವಿಷಯದ ಮೇಲೆ ಕಳೆದ ಸಂಚಿಕೆಯಲ್ಲಿ ಬರೆದ ಮಹನೀಯರೆಲ್ಲರೂ ಬಹು ಮಹತ್ವದ ಅಂಶಗಳನ್ನು ಚರ್ಚಿಸಿದ್ದಾರೆ. ನಾನಾ ಆಯಾಮಗಳಲ್ಲಿ ಚರ್ಚಿಸಿದ್ದಾರೆ. ಈ ಚರ್ಚೆಗೆ ನಾನೂ ಕೈಜೋಡಿಸಬೇಕು ಎಂದು ಸಂಪಾದಕರು ಆಗಲೇ ಹೇಳಿದ್ದರು. ಇತರರು ಏನು ಬರೆದಿದ್ದಾರೆಂಬುದನ್ನು ನೋಡಿ, “ಅದರಲ್ಲಿ ಬಿಟ್ಟು ಹೋದ ಅಂಶವೇನಾದರೂ ಇದ್ದರೆ ನಾನು ಮುಂದಿನ ಸಂಚಿಕೆಗೆ ಬರೆಯುತ್ತೇನೆ” ಎಂದು ಉತ್ತರಿಸಿದ್ದೆ.

ಅಭಿವೃದ್ಧಿಯ ಬಹುದೊಡ್ಡ ಆಯಾಮವೊಂದು ಈ ಚರ್ಚೆಯಲ್ಲಿ ಬಿಟ್ಟು ಹೋಗಿದ್ದು ಇದೀಗ ನನ್ನ ಗಮನಕ್ಕೆ ಬಂದಿದೆ. ಹಾಗಾಗಿ ನನ್ನ ಕೆಲಸವೀಗ ತುಸು ಸರಳವಾಗಿದೆ.

ನಮಗೆಲ್ಲ ಗೊತ್ತಿದ್ದೋ ಇಲ್ಲದೆಯೋ ನಾವೆಲ್ಲ ಗ್ಲೋಬಲ್ ಮನುಷ್ಯರಾಗಿದ್ದೇವೆ. ಬೇಕೋ ಬೇಡವೋ ನಾವೆಲ್ಲ ಕಳೆದ ೩೦ ವರ್ಷಗಳಿಂದ ಜಾಗತಿಕ ವಾಣಿಜ್ಯದ ಬಂಧದಲ್ಲಿ ಸಿಲುಕಿದ್ದೇವೆ. ನಮ್ಮದು ಸ್ವತಂತ್ರ ದೇಶವೆಂದೂ, ನಮ್ಮದು ಗಟ್ಟಿ ಪ್ರಜಾತಂತ್ರವೆಂದೂ ನಾವೆಷ್ಟೇ ಹೇಳಿಕೊಂಡರೂ ವಿಶ್ವದ ವಾಣಿಜ್ಯ ವ್ಯವಸ್ಥೆಯನ್ನು ಧಿಕ್ಕರಿಸಿ ನಮ್ಮ ಅಭಿವೃದ್ಧಿಯ ರೂಪುರೇಷೆಗಳನ್ನು ನಾವೇ ಸಂಪೂರ್ಣವಾಗಿ ನಿರ್ದೇಶಿಸುವ ಶಕ್ತಿ ನಮ್ಮ ಕೇಂದ್ರ ಸರಕಾರಕ್ಕೇ ಇಲ್ಲ. ಇನ್ನು, ರಾಜ್ಯ ಸರಕಾರಗಳ, ಪಂಚಾಯತ್‌ಗಳ ಮಾತು ದೂರವೇ ಉಳಿಯುತ್ತದೆ. ಇದಕ್ಕೆ ನೂರಾರು ಉದಾಹರಣೆಗಳನ್ನು ಕೊಡಬಹುದು. ಆದರೆ ಇಂದಿನ ತುರ್ತಿಗೆ ಒಂದು ಉದಾಹರಣೆ ಸಾಕೇನೊ: “ಲಸಿಕೆಯನ್ನು ಉತ್ಪಾದಿಸುವ ಅತಿ ದೊಡ್ಡ ರಾಷ್ಟ್ರ” ಎಂದು ಹೆಮ್ಮೆಯಿಂದ ನಾವು ಹೇಳಿಕೊಳ್ಳುತ್ತಿದ್ದರೂ ಕೊರೊನಾ ವ್ಯಾಕ್ಸೀನ್‌ಗಾಗಿ ಬೇಕಾದ ಅಗತ್ಯ ಸಾಮಗ್ರಿಗಳು ಬೇರೆ ದೇಶಗಳಿಂದಲೇ ನಮಗೆ ಬರಬೇಕು. ಅಲ್ಲಿ ಶಕ್ತ ರಾಷ್ಟ್ರಗಳು ತಮ್ಮ ಅಗತ್ಯಕ್ಕಿಂತ ೧೫೦ ಕೋಟಿ ಹೆಚ್ಚುವರಿ ಡೋಸ್‌ಗಳನ್ನು ಪೇರಿಸಿಟ್ಟುಕೊಂಡಿವೆ. ನಮ್ಮಲ್ಲಿ ಲಸಿಕೆಗೆ ಹಾಹಾಕಾರ ನಡೆದಿದೆ. ನಾವೀಗ ದೇಶದೇಶಗಳನ್ನು ಅಂಗಲಾಚಿ, ನಮ್ಮ ಇನ್ನೇನೋ ಸಂಪತ್ತನ್ನು ಅಡವಿಟ್ಟರೆ ಮಾತ್ರ ನಮ್ಮ ಜನಸಂಪತ್ತನ್ನು ಉಳಿಸಿಕೊಳ್ಳಬಹುದಾದ ಸಂದರ್ಭ ಎದುರಾಗಿದೆ.


ಎರಡು: “ಈ ಅಭಿವೃದ್ಧಿ ಇನ್ನು ಸಾಕು” ಎಂಬುದು ಇಂದಿನ ಕೂಗಲ್ಲ; ದೇಶದ ಜನಸಂಖ್ಯೆ ಬರೀ ೩೩ ಕೋಟಿ ಇದ್ದಾಗಲೇ ಗಾಂಧೀಜಿ ಅದನ್ನು ಹೇಳಿದ್ದರು. ಅಂಥದೇ ವೈಯಕ್ತಿಕ ನೆಲೆಯಲ್ಲಿ ಹೆನ್ರಿ ಥೋರೋ, ಐವಾನ್ ಇಲ್ಲಿಚ್ ಮತ್ತು ಷ್ಯುಮೇಕರ್ ಕೂಡ ಹೇಳಿದ್ದರು. ಅವರೆಲ್ಲರ ಸದ್ದಡಗುತ್ತ ಬಂದಂತೆ ಫುಕುವೊಕ ಮತ್ತೆ ಅದನ್ನೇ ಹೇಳಿದ್ದರು. ಇದೇ ನಿಟ್ಟಿನಲ್ಲಿ ವಿವಿಧ ಜಾಗತಿಕ ವೇದಿಕೆಗಳು ಕಳೆದ ೪೦ ವರ್ಷಗಳಿಂದ ಚಿಂತನೆ ನಡೆಸುತ್ತಿವೆ. (೧೯೮೭ರ ನನ್ನ ‘ಇರುವುದೊಂದೇ ಭೂಮಿ’ ಗ್ರಂಥದಲ್ಲಿ ‘ಕ್ಲಬ್ ಆಫ್ ರೋಮ್’ ಎಂಬ ಪ್ರತಿಷ್ಠಿತ ಸಂಘಟನೆ ಈ ಕುರಿತು ಎಚ್ಚರಿಕೆ ನೀಡಿದ್ದರ ಬಗ್ಗೆ ಬರೆದಿದ್ದೆ; ೨೦೦೦ನೇ ಇಸವಿಯಲ್ಲಿ ಪ್ರಕಟವಾದ ‘ಮುಷ್ಟಿಯಲ್ಲಿ ಮಿಲೆನಿಯಂ?’ ಎಂಬ ಪುಸ್ತಕದಲ್ಲಿ ಜಾಗತೀಕರಣದ ಅಸ್ವಸ್ಥ ಮುಖಗಳ ಬಗ್ಗೆ ಬರೆದಿದ್ದೆ; ೨೦೦೭ರಲ್ಲಿ ‘ಅಭಿವೃದ್ಧಿಯ ಅಂಧಯುಗ’ದಲ್ಲಿ ಕೂಡ ಅನೇಕ ಅಧ್ಯಾಯಗಳಲ್ಲಿ ಇದರ ಬಗ್ಗೆ ಬರೆದಿದ್ದೆ). ೨೦೧೨ರಲ್ಲಿ ವಿಶ್ವಸಂಸ್ಥೆಯೇ ‘ಗ್ರೀನ್ ಎಕಾನಮಿ’ಯ ಸಾಧ್ಯತೆಗಳನ್ನು ಕುರಿತು ಜಗತ್ತು ಯೋಚಿಸಬೇಕೆಂದು ಹೇಳುತ್ತ, ಗಾಂಧಿಯನ್ ಮಾದರಿ ಇದಕ್ಕೆ ಉತ್ತರವಾದೀತೆ? ಎಂದು ಕೂಡ ಕೇಳಿತ್ತು. ಇದನ್ನು

ಚರ್ಚಿಸಲೆಂಬಂತೆ ಬೆಂಗಳೂರಿನ ರಾಷ್ಟ್ರೀಯ ಕಾನೂನು ವಿವಿಯಲ್ಲಿ ಒಂದು ಚಕ್ರಗೋಷ್ಠಿಯೂ ನಡೆದಿತ್ತು. ಈಗಂತೂ ಅಭಿವೃದ್ಧಿಯ ಮಹಾರಥ ಇನ್ನಷ್ಟು ವೇಗ ಪಡೆದಿದೆ. ಅದಕ್ಕೆ ಇವತ್ತೇ ಬ್ರೇಕ್ ಹಾಕಬೇಕೆಂದರೂ, ತಂತ್ರಜ್ಞಾನದ ನೂಕುಬಲ ಅದೆಷ್ಟು ಜೋರಾಗಿದೆಯೆಂದರೆ ಅದನ್ನು ನಿಲ್ಲಿಸಹೋದರೆ ಎಲ್ಲರೂ ಎಲ್ಲವೂ ಮಕಾಡೆ ಬೀಳಬೇಕಾಗುತ್ತದೆ.

ಮೂರು: ಕೊರೊನಾ ಆಕ್ರಮಣ ಇಲ್ಲದಿದ್ದರೂ "ಅಭಿವೃದ್ಧಿಯ ಸ್ವರೂಪ ಬದಲಾಗಬೇಕು" ಎಂಬ ಚಿಂತನೆ ಜಾಗತಿಕ ಮಟ್ಟದಲ್ಲಿ ಬೇರೊಂದು ಕಾರಣದಿಂದ ಮುನ್ನೆಲೆಗೆ ಬಂದೇ ಬರುತ್ತಿತ್ತು. ಅದು ಭೂಮಿಯ ತಾಪಮಾನ ಏರಿಕೆ (ಗ್ಲೋಬಲ್ ವಾರ್ಮಿಂಗ್) ಎಂಬ ಖಚಿತ ಅಪಾಯದ ಕುರಿತಾದದ್ದು. ತಥ್ಯ ಏನೆಂದರೆ, ಕೊರೊನಾ ಹಾವಳಿ ಇಲ್ಲದಿದ್ದರೇನೇ ಆ ನಿಟ್ಟಿನಲ್ಲಿ ಇನ್ನಷ್ಟು ಹೊಸ ಹೆಜ್ಜೆಗಳು, ಚುರುಕು ಸಿದ್ಧತೆಗಳು ನಡೆಯುತ್ತಿದ್ದವು. ಕೊರೊನಾ ಅಡ್ಡಗಾಲು ಹಾಕಿದ್ದರಿಂದ ಮಕಾಡೆ ಕುಸಿದ ಬಹಳಷ್ಟು ರಾಷ್ಟ್ರಗಳು ತಾಪಮಾನ ಏರಿಕೆಯನ್ನು ಮರೆತು, ಬೆಂಕಿಗೇ ಗಾಳಿಬೀಸತೊಡಗಿವೆ. ಮೋದಿಯವರು ಆರ್ಥಿಕ ಪುನಶ್ಚೇತನದ ಹೆಸರಿನಲ್ಲಿ ಇಪ್ಪತ್ತು ಲಕ್ಷ ಕೋಟಿ ಪ್ಯಾಕೇಜನ್ನು ಬಿಡಿಸಿ ತೋರಿಸಿದರು ತಾನೆ? ಇದೇ ಬಲಾಢ್ಯ ಕಂಪನಿಗಳಿಗೆ ಹೊಸಹೊಸ ಕಲ್ಲಿದ್ದಲ ನಿಕ್ಷೇಪಗಳನ್ನು ತೆರೆದು ಕೊಡುತ್ತ, ಹೊಸ ಹೊಸ ವಿಮಾನ ನಿಲ್ದಾಣ ಕಟ್ಟಲು ಟೆಂಡರ್ ಕರೆಯುತ್ತ, ಪರಿಸರ ನಿಯಮಗಳನ್ನು ಇನ್ನಷ್ಟು ಮತ್ತಷ್ಟು ಸಡಿಲಗೊಳಿಸುತ್ತ ಅಂಬಾನಿ-ಅದಾನಿಗಳಿಗೆ ರತ್ನಗಂಬಳಿ ಹಾಸಿದ್ದನ್ನು ನಾವು ಆ ಪ್ಯಾಕೇಜಿನಲ್ಲಿ ನೋಡಿದ್ದೇವೆ.

ನಾಲ್ಕು: 'ಈ ಅಭಿವೃದ್ಧಿ ಇನ್ನು ಸಾಕು' ಎನ್ನುತ್ತ ಎದ್ದೇಳಬೇಕಿದ್ದ ಯುವ ಸಮುದಾಯವನ್ನೇ ಅಭಿವೃದ್ಧಿಯ ಮಹಾರಥ ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಎಲ್ಲ ಬಗೆಯ ಚಳವಳಿಗಳನ್ನು ಸುಟ್ಟುಹಾಕಿದ ಆ ಜಾಗತೀಕರಣದ ಜ್ವಾಲೆಯೇ ಹೊಸ ಪೀಳಿಗೆಯ ಕುಡಿಮೀಸೆಯ ಪತಂಗಗಳನ್ನು ತನ್ನತ್ತ ಸೆಳೆಯುತ್ತಿದೆ. ಹೊಲದ ನೆಲದಿಂದ ಎದ್ದ ಹೈಕಳುಗಳೂ ಶೂಟ್ಕೈ ಕಟ್ಟಿಕೊಂಡು ಇಂಗ್ಲಿಷ್ ಮೀಡಿಯಂ ಶಾಲೆಯ ಮೂಲಕ ವೃತ್ತಿಪರ ಕೋರ್ಸ್‌ಗಳನ್ನು ಅರಸುತ್ತ ಆ ಬೆಂಕಿಯತ್ತಲೇ ಜಿಗಿಯುತ್ತಿವೆ. "ಈ ಬೆಂಕಿಗೆ ಮಧ್ಯಮ ಮತ್ತು ಮೇಲ್ವರ್ಗದ ತತ್‌ಕ್ಷಣದ ಫಲಾನುಭವಿಗಳು ಇಂಧನವಾಗಿದ್ದಾರೆ" ಎಂದು ಡಾ. ರಾಜೇಂದ್ರ ಚೆನ್ನಿಯವರು ಹೇಳಿದ್ದು ಸರಿಯೇ ಇದೆಯಾದರೂ ಅದು ಕೆಳವರ್ಗದವರನ್ನೂ ಸೆಳೆಯುತ್ತಿದೆ. "ಇದಕ್ಕೆ ಪ್ರತಿರೋಧವು ಅತ್ಯಂತ ವಿಕೇಂದ್ರೀಕೃತವಾದ ಸ್ಥಳೀಯ ಸಮುದಾಯಗಳಿಂದ, ಹಳ್ಳಿಗಳಿಂದ ಆರಂಭವಾಗಬೇಕು" ಎಂದು ಅವರು ಹೇಳುವುದು ಸರಿಯೇ ಹೌದಾದರೂ ಯಾರು ಉಳಿದಿದ್ದಾರೆ ಅಂಥ ಸಮುದಾಯಗಳಲ್ಲಿ? ಹೈಸ್ಕೂಲ್ ಪಾಸಾಗಲಾರದೆ ಹಿಂದಕ್ಕೆ ಉಳಿದವರು ಹಾಗೂ/ಅಥವಾ ಹಣಕಾಸಿನ ಮುಗ್ಗಟ್ಟಿನಿಂದಾಗಿ ಹೆಚ್ಚು ಓದಲಾರದವರು, ಅಂಥವರೂ ಟ್ರ್ಯಾಕ್ಟರ್ ಟೆಂಪೊ ಚಾಲಕರಾಗಿಯೊ, ಉದ್ಯಮ ಸಂಸ್ಥೆಗಳ ಕಾವಲುಗಾರರಾಗಿಯೊ ಹೇಗೋ ನಗರಗಳಿಗೆ ಸೇರಲು ತವಕಿಸುತ್ತಿದ್ದಾರೆ. ಕೆ.ವಿ. ಅಕ್ಷರ ಹೇಳುವ 'ಆಧುನಿಕ ಮಾಯಾವಾದ' ಎಲ್ಲ ಬಗೆಯ 'ಅನಗತ್ಯ ಅಗತ್ಯ'ಗಳನ್ನು ಸೃಷ್ಟಿಸುತ್ತಲೇ ಕೆಳವರ್ಗದ ಕನಸುಗಳನ್ನೇ ಸುಡುತ್ತಿರುವಾಗ ಯಾರನ್ನು ಸಂಘಟಿಸುವುದು?

ಐದು: ಹಾಗೆಂದು ನಾನು ನಿರಾಶಾವಾದಿಯಲ್ಲ. "ಈ ಅಭಿವೃದ್ಧಿ ಸಾಕು" ಎಂಬ ಧ್ವನಿ ಎಲ್ಲೆಡೆ ಮೊಳಗಲೆಂದು ನಾನೂ ಹಾರೈಸುತ್ತೇನೆ. "ಕೊರೊನಾ ಎಲ್ಲವನ್ನೂ ನೋಡಿಕೊಳ್ಳುತ್ತದೆ ಎಂದುಕೊಂಡು ಅದರ ಮೇಲೆ ಭಾರ ಹಾಕಿ ಸುಖವಾಗಿ ನಿದ್ದೆ ಮಾಡುತ್ತೇನೆ" ಎಂದ ಸಂತೋಷ ಕೌಲಗಿಯವರ ಕೊನೆಯ ವಾಕ್ಯದಲ್ಲಿ ನನಗೊಂದು ಹೊಳಹು ಕಾಣುತ್ತಿದೆ. ಕೊರೊನಾ ಮಾಡಿದ ಮುಖ್ಯ ಕೆಲಸ ಏನೆಂದರೆ ಎಲ್ಲರ ಕೈಗೂ ಮೊಬೈಲ್ ಕೊಟ್ಟಿದೆ. ಅಭಿವ್ಯಕ್ತಿಯ, ಜನಸಂಘಟನೆಯ ಹೊಸ ಅಸ್ತ್ರವೊಂದು ಕೈಗೆಟುಕಿದೆ. ಬಹುತೇಕ ಎಲ್ಲ ಪತ್ರಿಕೆ, ಟಿವಿ ಚಾನೆಲ್, ರೇಡಿಯೊ ಮುಂತಾದ ಎಲ್ಲ ರೂಢಿಗತ ಮಾಧ್ಯಮಗಳನ್ನು ತನ್ನ ಮುಷ್ಟಿಗೆ ಸೇರಿಸಿಕೊಂಡ ನಮ್ಮ ಸರಕಾರ ಸಾಮಾಜಿಕ ಮಾಧ್ಯಮಗಳಿಗೆ ಲಗಾಮು ಹಾಕುವಲ್ಲಿ ಮಾತ್ರ (ಇದುವರೆಗಂತೂ) ವಿಫಲವಾಗಿದೆ. ಕೊರೊನಾವನ್ನು ಮಣಿಸುವ ಸರಕಾರಿ ಕ್ರಮಗಳೆಲ್ಲ ಅಷ್ಟಕ್ಕಷ್ಟೇ ಆಗಿರುವಾಗ, ವಾಟ್ಸಾಪ್, ಟ್ವಿಟ್ಟರ್, ಟೆಲಿಗ್ರಾಫ್, ಫೇಸ್‌ಬುಕ್ ಮುಂತಾದ ನವಮಾಧ್ಯಮಗಳ ಮೂಲಕ ಲಕ್ಷೋಪಲಕ್ಷ ಸಂಖ್ಯೆಯಲ್ಲಿ ಯುವಜನತೆ ಸಂಘಟಿತರಾಗಿ ಕೊರೊನಾ ಸಂತ್ರಸ್ತರಿಗೆ ನೆರವು ನೀಡುತ್ತಿದ್ದಾರೆ. ಪೆಗ್ಗಿ ಮೋಹನ್ ಕಳೆದ ವರ್ಷವೇ ಹೇಳಿದಂತೆ, "ನಾವೀಗ ಅಚ್ಚರಿಗಳು ಕಾದಿರುವ ಹೊಸ ಯುಗದ ಹೊಸ್ತಿಲಲ್ಲಿದ್ದೇವೆ". ಯಾರಿಗೆ ಗೊತ್ತು, ಸದ್ಯದ ಈ ಮಹಾಸಾಂಕ್ರಾಮಿಕ ತಹಬಂದಿಗೆ ಬಂದಮೇಲೆ, ಜಗತ್ತನ್ನು ಮುಂದಿನ ಪೀಳಿಗೆಗೂ ಉಳಿಸಬೇಕೆಂಬ ಗ್ರೇತಾ ಥನ್‌ಬರ್ಗ್ ಮಾದರಿಯ ಹೋರಾಟ ಮತ್ತೆ ಮುನ್ನೆಲೆಗೆ ಬರಬಹುದು.



–ನಾಗೇಶ್ ಹೆಗಡೆ, ವಿಜ್ಞಾನ ಲೇಖಕರು ಮತ್ತು ಅಂಕಣಕಾರರು, ಬೆಂಗಳೂರು

ಈ ಪರಿಯ ಅಭಿವೃದ್ಧಿಯ ಭಾರವನ್ನು ಸ್ವತಃ ಅಭಿವೃದ್ಧಿಯೇ ತಡೆದುಕೊಳ್ಳಲಾರದು

ಪ್ರವಾಹದಲ್ಲಿ ಸಿಕ್ಕವರನ್ನು ದಂಡೆಯಲ್ಲಿ ನಿಂತು ನೋಡುವಂತಹ, ಅವರ ರಕ್ಷಣೆಗೆ ಕೂಗಿ ಕೂಗಿ ಏನಾದರು ಮಾಡುವಂತಹ ಸ್ಥಿತಿಯಲ್ಲಿ ನಾವೀಗ ಇಲ್ಲ. ರಕ್ಷಿಸ ಬಯಸುವವರನ್ನೇ ವ್ಯಂಗ್ಯ- ಮರುಕದಿಂದ ನೋಡುವ "ಸುಖ" ವನ್ನು ಅನುಭವಿಸುವವರ ಸಂಖ್ಯೆ ಹೆಚ್ಚಾಗಿದೆ. ಪ್ರವಾಹದಲ್ಲಿಯೇ ಇದ್ದು ಅದರಲ್ಲಿ ತೇಲುವ ಸುಖದ ಮುಂದೆ ಅನ್ಯ ಸುಖಗಳಿಲ್ಲ ಮತ್ತು ಅದರಿಂದ ಹೊರ ಬರಬೇಕೆಂದು ಅನ್ನಿಸದ ವಿಚಿತ್ರ ಭ್ರಮೆಯ ವಾತಾವರಣದಲ್ಲಿ ಸಿಲುಕಿಕೊಂಡಿದ್ದೇವೆ. ದೊಡ್ಡ ಸಂಖ್ಯೆಯ ಜನರು ಇದು ಸುಖವೋ ಲೋಲುಪತೆಯೊ ಎಂಬುದರ ವ್ಯತ್ಯಾಸ ಅರ್ಥ ಮಾಡಿಕೊಳ್ಳದ ಮುಗ್ಧರು. ಹಾಗಾಗಿ ಎಂದೆಂದೂ ಕಾಣದ ಸ್ವರ್ಗವೆಂದರೆ ಇದೇ ಇರಬೇಕು ಎಂದು ಅವರು ಅಂದುಕೊಂಡಿರಲೂ ಸಾಧ್ಯ. ಇಂಥವರನ್ನು ಈ ದಾರಿಯಿಂದ ಪಲ್ಲಟಗೊಳಿಸುವುದಾದರೂ ಹೇಗೆ? ಇನ್ನು ಅನೇಕರು ಇದರಿಂದ ಹೊರ ಬರಬೇಕೆಂದರೂ ಕುಟುಂಬ ವ್ಯವಸ್ಥೆಯಲ್ಲೊ, ತಮ್ಮನ್ನು ತಾವು ಮೀರಿಕೊಳ್ಳದ ಸಂದರ್ಭದ ಆಮಿಷಕ್ಕೊ ಸಿಕ್ಕಿ ಹಾಕಿಕೊಂಡಿದ್ದಾರೆ.

ಬೇರೆ ಅನೇಕ ಹೋರಾಟಗಳ ಸಂದರ್ಭಗಳಲ್ಲಿ ನಮಗೊಬ್ಬ ಸಾಮಾನ್ಯ ವೈರಿ ಕಾಣುತ್ತಾನೆ ಮತ್ತು ಅಲ್ಲೊಂದು ಗೊತ್ತಿರುವ ಮಾರ್ಗದ ಮೂಲಕ ತಲುಪಬೇಕಾದ ಗುರಿಯ ಸ್ಪಷ್ಟತೆಯಿರುತ್ತದೆ. ಹೀಗಾಗಿ ಇಲ್ಲಿ ಒಂದು ನಾಯಕತ್ವ ಮತ್ತು ಅದರ ಅನುಯಾಯಿಗಳ ಮೂಲಕ ಕಾರ್ಯ ಸಾಧ್ಯವಾಗಿಸುವ ಯತ್ನ ನಡೆಯುತ್ತದೆ. ದುರ್ದೈವವೆಂದರೆ ಈ "ಅಭಿವೃದ್ಧಿಯ" ವಿರೋಧದ ವಿಷಯದಲ್ಲಿ ಮಾತ್ರ ನನಗೆ ಒಂದು ಸಾಮಾನ್ಯ ಗುರಿಯಿರುವ ಗುಂಪು ಮತ್ತು ನಾಯಕತ್ವ ಎರಡೂ ಸ್ಪಷ್ಟವಾಗಿ ಕಾಣುತ್ತಿಲ್ಲ. ಅಥವಾ ಅವೆರಡೂ ಚದುರಿ ಹೋದಂತಹ ರಚನೆಯ ಸ್ವರೂಪದಲ್ಲಿದ್ದು ಒಂದೆಡೆ ಸೇರಿ ಏನನ್ನಾದರು ಸಾಧಿಸಲು ಅವುಗಳೇ ನಿರ್ಮಿಸಿಕೊಂಡ ನೂರೆಂಟು ದ್ವಂದ್ವಗಳ ಅಡೆ ತಡೆಗಳಿವೆ.

ಹೀಗಾಗಿ ನನಗೆ ಇದನ್ನು ಸಾಮುದಾಯಿಕವಾಗಿ ಎದುರಿಸುವುದಕ್ಕಿಂತ ವೈಯಕ್ತಿಕವಾಗಿ "ಒಳ ಒಳಗಿನಿಂದಲೇ" ಎದುರಿಸುವುದು ಹೆಚ್ಚು ಸುಲಭ ಮತ್ತು ಅನುಕೂಲವೆನಿಸುತ್ತದೆ. ಬೇಡವೆನಿಸಿದ ವಸ್ತುವನ್ನು ನಾನು ಬಳಸದೆ ಇರಬಹುದು. ತಾತ್ವಿಕವಾಗಿ ನನ್ನ ಮನಸ್ಸು ಒಪ್ಪದ ಕೆಲಸವನ್ನು ಮಾಡದೆ ಉಳಿಯಬಹುದು. ಅಷ್ಟರ ಮಟ್ಟಿಗೆ ಮಾತ್ರ ನಾನು ಇದನ್ನು ಹಿಂದಕ್ಕೆ ದೂಡಲು ನೋಡಬಹುದು. ಆದರೆ ಈ ಕಾಲದ ನನ್ನ ಸ್ವಂತ ಮಕ್ಕಳಿಗೆ ಇದನ್ನು ಹೀಗೆ ಮಾಡಿ ಎಂದು ಹೇಳಲಾಗದು. ಅಥವಾ ಹೇಳಿ ಒಪ್ಪಿಸಲಾಗದು. ಇದೊಂದು ಸಾಮುದಾಯಿಕ ಸಮಸ್ಯೆ ಎಂದು ಎಲ್ಲರಲ್ಲಿ ಮೂಡಿಸುವುದಾದರು ಹೇಗೆ? ಇಂದಿನ ವಿದ್ಯಾಸಂಸ್ಥೆಗಳ ಚಾಳಿ, ಉನ್ನತ ವಿದ್ಯಾಭ್ಯಾಸದ ರೀತಿ, "ಸರಕಾರದ ಮೇಲೆ ಕಾರ್ಪೋರೇಟ್ ಶಕ್ತಿಯ ಪ್ರಭಾವ ಮುಂತಾದ ಜಾಗತೀಕರಣದ ಉದ್ದೇಶಗಳೆಲ್ಲ ಪ್ರತಿಯೊಬ್ಬರನ್ನು ಹಣದ ಹಿಂದೆ ಹೋಗುವ ಮಾರುಕಟ್ಟೆಯ ಯಂತ್ರವನ್ನಾಗಿಸಿವೆ. ಇವುದರ ನಡುವೆ ನಾವು ಒಂದಿಲ್ಲ ಒಂದು ರೀತಿಯಲ್ಲಿ ನಮ್ಮ ಕೈ-ಕಾಲುಗಳನ್ನು ಆ ಯಂತ್ರದಲ್ಲಿ ಸಿಕ್ಕಿಸಿಕೊಂಡಿರುವಾಗ ಇದನ್ನು ಇಲ್ಲಿಂದ. ಓಡಿಸುವುದು ಹೇಗೆ? ಈ ಪ್ರಕೃತಿ ವಿರೋಧಿಯಾದ ಅಭಿವೃದ್ಧಿಯೆಂಬ ಕೆಟ್ಟ ರೋಗದ ವಿರುದ್ಧ ಜನ ಒಗ್ಗಟ್ಟಾಗದಿರುವುದಕ್ಕೆ ಇವೆಲ್ಲ ಕೆಲವು ಕಾರಣಗಳು.

ಏನಾದರು ಈ ವಿಷಯದಲ್ಲಿ ಒಳ್ಳೆಯದು ಸಾಧ್ಯವಾಗುವುದಾದರೆ ಅದು ಸರಕಾರದ ಧೋರಣೆಗಳಲ್ಲಿನ ಮಾರ್ಪಾಡುಗಳಿಂದ ಮಾತ್ರ ಆದೀತು. ನಿಕಟ ಭವಿಷ್ಯದಲ್ಲಿ ಅದು ಅಸಾಧ್ಯ ಎನಿಸಿದರೂ ಹೆಚ್ಚೆಂದರೆ ಮುಂದಿನ ಹತ್ತು ವರ್ಷಗಳಲ್ಲಿ ಅಂತಹ ಬದಲಾವಣೆ ಆಗಿಯೇ ಆಗುತ್ತದೆಂದು ನನ್ನ ಬಲವಾದ ಅನ್ನಿಸಿಕೆ. ಈ ಪರಿಯ ಅಭಿವೃದ್ಧಿಯ ಭಾರವನ್ನು ಸ್ವತಃ ಅಭಿವೃದ್ಧಿಯೇ ತಡೆದುಕೊಳ್ಳಲಾರದು. ಚಕ್ರ ಉರುಳಲೇಬೇಕು.

ನಿಜ. ನಿಸರ್ಗ ವಿರೋಧಿ ಚಟುವಟಿಕೆಗಳು ಮನುಷ್ಯನನ್ನು ಕರೋನಾದಂತಹ ರೋಗಗಳ ಮೂಲಕ ಎಚ್ಚರಿಸುತ್ತವೆ ಎಂಬ ನಮ್ಮ ಸಾಂಪ್ರದಾಯಿಕ ನಂಬಿಕೆಯನ್ನು ನಾನೂ ನಂಬುತ್ತೇನೆ. ಈ ಜಗತ್ತಿನ ಪ್ರತಿ ಚಲನೆಯ ಹಿಂದೆ ಒಂದು ನಿಗೂಢ ತತ್ವವಿದೆ. ನಿಸರ್ಗಕ್ಕೆ ಅಪಾಯ ಬಂದಾಗಲೆಲ್ಲ ಅದು ಉಗ್ರವಾಗಿ ಪ್ರತಿಭಟಿಸುತ್ತದೆ. ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಕ್ಷಣಾರ್ಧದಲ್ಲಿ ನಿಲ್ಲಿಸಿ ಮನುಷ್ಯ ಮನೆಯಿಂದ ಆಚೆ ಬರುವುದನ್ನು ನಿರ್ಬಂಧಿಸುವ ಅದರ ಶಕ್ತಿಯನ್ನು ನಾವೆಲ್ಲ ಕಣ್ಣಾರೆ ಕಂಡಿದ್ದೇವೆ. ನಮ್ಮನ್ನು ಹಗಲಿರುಳು ಪೋಷಿಸುವ ನಿಸರ್ಗವನ್ನು ಎದುರು ಹಾಕಿಕೊಂಡು ಬದುಕಲಾದೀತೇ? ಹೀಗಾಗಿ ಅಭಿವೃದ್ಧಿಯೆಂಬುದು ಬಹು ಬೇಗ ನಿಲ್ಲಲೇಬೇಕು. ಅದು ಹೇಗೆ ಸಾಧ್ಯವಾಗುತ್ತದೆಂಬುದನ್ನು ಮಾತ್ರ ಈಗ ಹೇಳಲು ನನಗೆ ಸಾಧ್ಯವಾಗಲಿಕ್ಕಿಲ್ಲ. ಅಷ್ಟೇ



–ವಿಜಯೇಂದ್ರ ಪಾಟೀಲ, ನಿವೃತ್ತ ಬ್ಯಾಂಕ್ ಮ್ಯಾನೇಜರ್ ಮತ್ತು ಲೇಖಕರು, ಗೋಕಾಕ

ಇಂದಿಗೂ ಅಲೀಬಾಬಾನೇ ಮಾದರಿ.

ಇತ್ತೀಚೆಗಷ್ಟೇ ವೃತ್ತಪತ್ರಿಕೆಯಲ್ಲಿ ಉತ್ತರ ಕರ್ನಾಟಕದ ಒಂದು ಹಳ್ಳಿಯಲ್ಲಿ ಜಲಪಾತ ನೋಡುಗರಿಗಾಗಿ ಮರಕಡೆದು ರಸ್ತೆ ಮಾಡುತ್ತಿರುವ ಬಗ್ಗೆ ಪ್ರಕಟವಾಯ್ತು. ಮರ ಕಡಿಯುವುದು, ಪ್ರಕೃತಿಯ ಆಸ್ವಾದನೆಗೆ ಪ್ರವಾಸಿಗರನ್ನು ಕರೆಯುವುದು ಎಲ್ಲವೂ ಕೊನೆಗೆ ಎಲ್ಲಿಗೆ ಹೋಗಿ ಮುಟ್ಟುತ್ತದೆ ಎಂಬುದು ಇವತ್ತು ಸ್ಫಟಿಕಸ್ಪಷ್ಟವಾಗಿ ಕಾಣುತ್ತಿದೆ. ಅಂಥಲ್ಲಿ ಇನ್ನೂ ಈ ಪ್ರಮಾದವನ್ನೇ ಮುಂದರಿಸುತ್ತಿದ್ದಾರೆ ಎಂದರೆ? ತಿಳಿದದ್ದು ಒಳಗಿಳಿಯದ ಜೀರ್ಣವಾಗಿ ರಕ್ತಗತವಾಗದ ಉದಾಹರಣೆ ಎಂದರೆ ಇಂಥವೇ. ಕಡಿಯುವುದು ಇದಿಷ್ಟೇ ಮರ, ಬೇಕಾಗಿರುವುದು ಇದಿಷ್ಟೇ ಉದ್ದದ ದಾರಿ, ಆಯಿತು ಮುಗಿಯಿತು, ಕುಡಿಯುವುದು ಇದು ಇಷ್ಟೇ(ಹೆಂಡದ) ಗುಟುಕು ಮತ್ತೆ ಇದಿಲ್ಲಿಗೇ ಕ್ಲೋಸ್ ಅಂತವೇ ಎಲ್ಲವೂ ಮುಂದರಿಯುತ್ತದೆ. ಅಭಿವೃದ್ಧಿಯ ತಪ್ಪು ಪಥದ ಮೂಲಕಥನ ಆರಂಭವಾಗುವುದೇ ಹೀಗೆ ತಾನೆ. ತಕ್ಷಕ ಹೆಡೆಯೆತ್ತಿ ವಿಷ ಫೂತ್ಕರಿಸುವವರೆಗೂ ಸಣ್ಣ ಯಃಕಶ್ಚಿತ್ ಕೀಟವಾಗಿಯೇ ಇರುತ್ತದೆ. ಇದೆಲ್ಲ ಯಾರಿಗೆ ತಿಳಿಯದು? ಆದರೆ ತಿಳಿದಿರುವುದು, ಚರ್ಚಿಸುವುದು, ಅರ್ಥ ಆಗುವುದು ಬೇರೆ. ಅರ್ಥ ಸಾಧನೆ ಎಂಬುದು ಬೇರೆಯೇ. ಎಲ್ಲರಿಗೂ ಎಲ್ಲವೂ ಗೊತ್ತಿರುವಂತೆ ಕಾಣುವ ಮತ್ತು ಗೊತ್ತಿಲ್ಲದಂತೆಯೂ ಕಾಣುವ ಯಾವತ್ತೂ ವಿದ್ಯಮಾನ ಮನುಷ್ಯ ಲೋಕದ್ದು. ಪ್ರಪಂಚ ನಡೆದುಕೊಂಡು ಬಂದಿರುವ ಕ್ರಮವಿದು! ಅರಿತವರು ತಮ್ಮ ಅರಿವನ್ನು ಹಂಚಿಕೊಳ್ಳುವುದು ನಿಜವಾಗಿಯೂ ಅರಿವು ಇಲ್ಲದವರ ಎದುರಾದರೆ ಇವತ್ತಿನ ನಮ್ಮ ಈ ಸ್ಥಿತಿಗೆ ಖಂಡಿತವಾಗಿಯೂ ಅರ್ಧದಷ್ಟಾದರೂ ಏರುಗತಿ ಇರುತ್ತಿತ್ತು.

ಇದುವರೆಗಿನ ವಿಪ್ಲವಗಳು ಏನಿದ್ದರೂ ಅದು ತಿಳಿದವರಿಂದಲೇ ನಡೆಯುತ್ತಿರುವುದು, ಎಚ್ಚರವಿದ್ದೂ ನಡೆಸುತ್ತಿರುವುದು. ಎಚ್ಚರವಿದ್ದವರಿಗೆ ಎಚ್ಚರಿಸುವ ಮಾತು ಸುಮ್ಮನೆ ಅರೆಕ್ಕೂರೆ ಕೇಳಿ ಬಿಡುವುದರಲ್ಲೇ ಮುಗಿಯುವುದು.

ಪುರಾಣ ಕತೆಗಳು, ಕತೆಗಳ ರೂಪದಲ್ಲಿಯೇ ಇವತ್ತಿಗೂ ನಿಜವೆನಿಸುವ ಮನುಷ್ಯ ಸ್ವಭಾವವನ್ನು ಲೇಖಿಸಿ ಕೊಟ್ಟಿವೆ. ನಾಗರಿಕ ಎನಿಸಿಕೊಂಡವರ ಹೀನನಡೆಯನ್ನು ಪ್ರಕೃತಿಯೇ ಮಣಿಸಿ ಮಣ್ಣಾಗಿಸಿದ ಗಾಥೆಗಳು ಇತಿಹಾಸ, ಐತಿಹ್ಯಗಳ ಮೂಲಕ ಪೀಳಿಗೆಯಿಂದ ಪೀಳಿಗೆಗೆ ದಾಟಿಕೊಂಡಿವೆ. ಮಾನವ ಕ್ರಿಮಿಯಾದಾಗೆಲ್ಲ, ತನಗೆ ಮನುಕುಲದ ಅಗತ್ಯವೇ ಇಲ್ಲ ಎಂದು ಭೂದೇವಿಯೇ ಸೂಚಿಸುತ್ತಾಳೆ. ಸೂಚನೆಯನ್ನು ಗಂಭೀರವಾಗಿ ಗಣಿಸದಿದ್ದಲ್ಲಿ ಆಕೆ ಏನು ಮಾಡಬೇಕೋ ಅದನ್ನು ಮಾಡಿಯೇ ಮಾಡುತ್ತಾಳೆ. ದುಃಖವೆಂದರೆ ಒಮ್ಮೆ ಸಂಹಾರ ಸುರುವಾಯಿತಾದರೆ ಅಪರಾಧ ಮಾಡಿದವರ ಜೊತೆಗೆ ಅಮಾಯಕರೂ ಬಲಿಯಾಗಬೇಕಾಗುವುದು. "ವಿವಿಧ ರೂಪೀ ರಕ್ಕಸರ ಉಪಟಳ ಮಿತಿ ಮೀರಿದ ಮೇಲೆಯೇ ದೇವಿಯರೂ ದೇವರುಗಳೂ ನಾಲ್ಕು ಕೈಯಲ್ಲಿ ಆಯುಧಗಳನ್ನು ಹಿಡಿದು ಎದ್ದು ಬರುತ್ತಾರೆ. ಅದುವರೆಗೂ ನರಳುವ ನರಮನುಷ್ಯರು ನರಳುತ್ತಿರುತ್ತಾರೆ. ದೇವದೇವಿಯರು ಗಪ್‌ಚಿಪ್ ನೋಡುತ್ತಿರುತ್ತಾರೆ. ಇವತ್ತಿನ ಸ್ಥಿತಿ ಅದರಲ್ಲೊಂದು." ಎಂದರು ದೇವಿ ಮಹಾತ್ಮೆ ಆಟವನ್ನು ಆಸುಪಾಸು ಎಲ್ಲಿದ್ದರೂ ಹೋಗಿ ನೋಡಿಯೇ ತೀರುವ ಹಿರಿಯರೊಬ್ಬರು, ಹಿಂದೊಮ್ಮೆ ಬೇರೆ ಸಂದರ್ಭದಲ್ಲಿ ಅವರು ಹೀಗೆ ಹೇಳಿದಾಗ ನಾವು ನಕ್ಕಿದ್ದೆವು. ಈ ಸಲ? ನಗೆಯ ರೇಕು ಕೂಡ ಇಲ್ಲದೆ ಸಪ್ಪೆ ಕುಳಿತೆವು.

ಲಾಭದ, ಭೋಗದ, ಶ್ರೀಮಂತಿಕೆಯ, ಅಭಿವೃದ್ಧಿಯ ಅಪಕಲ್ಪನೆಯ ಮೆರವಣಿಗೆಯಲ್ಲಿ ನಾವೂ ಎಲ್ಲ ಸೇರಿ ಹೋಗಿರುವ ಪರಮ ಸಂಕಷ್ಟದ ವಿಚಾರ ಇದು. ನಮ್ಮ ಗುರುತು ನಮಗೇ ತಿಳಿಯದ ಹಾಗೆ ಯಾಂತ್ರಿಕವಾಗಿ ಮುಂದಿನವರ ಹಿಂದೆ ಹಿಂದಿನವರ ಮುಂದೆ ನಡೆಯುತಿದ್ದೇವೆ. ನಾವಾಗಿ ನಡೆಯುತಿದ್ದೇವೆಯೆ? ಉಹ್ಞು, ಕ್ಷಣವೂ ನಿಲ್ಲದಂತೆ ಹಿಂದೆಯೂ ಮುಂದೆಯೂ ಇರುವ ಒತ್ತಂಕೆಗೆ ಅನುಗುಣವಾಗಿ ಹೆಜ್ಜೆಯನ್ನು ಮುಂದೆ ಇಡಲ್ಪಡುತಿದ್ದೇವೆ. ಹೊರಬರಬೇಕೆಂದರೂ ನುಸುಳಿ ಹೊರಬರಲು ಎಡೆಯಿಲ್ಲದಷ್ಟು ನಿಬಿಡವಾದ, ಎದುರು ಪ್ರಪಾತವೇ ಎದುರಾದರೂ ನಿಲ್ಲಲಾರದ ಅಪದ್ಧ ಮೆರವಣಿಗೆ ಇದು. ವಿಚಾರ ತಿಳಿದೂ ತಿಳಿದೂ ಒಳಹೊಕ್ಕವರಾಗಿ ಮೆರವಣಿಗೆಯ ನಡುವಿನ ಒತ್ತಡದಲ್ಲಿ ಸಿಕ್ಕಿಹಾಕಿಕೊಂಡೇ ಈಗ ಮಾತು ಮಾತು ಮಾತಿನಲ್ಲೇ ವ್ಯಥೆಯನ್ನು ಮಥಿಸುತ್ತೇವೆ. ಪರಿಧಿಯನ್ನು ವಿಸ್ತರಿಸುತ್ತ ಇದೀಗ ಗ್ಲೋಬಲ್ ವಿಲೇಜ್, ಅಲ್ಲಿಂದಲೂ ಮುಂದೆ ಮಂಗಳ ಗ್ರಹ ಅಂತೆಲ್ಲ ಭ್ರಮಿಸಿ ಧಾಂಗುಡಿಯಿಡುತ್ತಿರುವ ಲೋಕ ಪ್ರಸ್ತುತ ಮನೆಯೊಳಗೆ ಎಲ್ಲರನ್ನೂ ನೂಕಿಟ್ಟಿದೆಯಲ್ಲ. ಮುಂದೆ? ಏನು? ಅವಿತುಕೊಳ್ಳಬೇಕಾಗಿ ಬರುವುದು, ಎಲ್ಲಿ?



ಯಾವತ್ತೂ ನಮಗೆ ಅಲೀಬಾಬಾನೇ ಮಾದರಿ ಹೊರತು ಹೊರಬರುವ ಸೂತ್ರವನ್ನೇ ಮರೆಯುವ ಕಾಸಿಮನಲ್ಲ. . .ಎಂಬುದೂ ಗೊತ್ತಿರುವುದೇ. ಆದರೂ...

–ವೈದೇಹಿ, ಹಿರಿಯ ಲೇಖಕಿ, ಮಣಿಪಾಲ.


ಈಗ ದಾರಿ ತೋರಬಲ್ಲ ಬೆಳಕು ಗಾಂಧೀಜಿ ಮತ್ತವರ ಚಿಂತನೆಗಳು ಮಾತ್ರ

ಅಭಿವೃದ್ಧಿ ಎಂದರೆ ಜನಸಾಂದ್ರಿತ ನಗರಗಳು, ಬೃಹತ್ ಕಟ್ಟಡಗಳು ಮತ್ತು ಕ್ಷಿಪ್ರಸಾರಿಗೆ ಎನ್ನುವ ಕಲ್ಪನೆಯಿಂದ ನಾವು ದೂರ ಸರಿಯಬೇಕು. ಪ್ರಕೃತಿಯಲ್ಲಿಯ ಸಮತೋಲನವನ್ನು ಕೆಡಿಸದೆ ಘನತೆಯಿಂದ ಬದುಕಲು ಬೇಕಾದ ರೀತಿಯಲ್ಲಿ ಬದುಕುವುದೇ ಮನುಷ್ಯನ ಮುಂದಿರುವ ಏಕೈಕ ಮಾರ್ಗ. ಆ ನಿಟ್ಟಿನಲ್ಲಿ ಮೂರು ಆಯಾಮಗಳಲ್ಲಿ ಅಥವ ಮೂರು ಅಂಗಳಗಳಲ್ಲಿ ನಾವು ಈ ಸಮಸ್ಯೆಯನ್ನು ಎದುರುಗೊಳ್ಳಬೇಕಿದೆ.

ಮೊದಲಿಗೆ ಸರ್ಕಾರಗಳು ತಮ್ಮ ನೀತಿನಿರೂಪಣೆಗಳಲ್ಲಿ ಬದಲಾವಣೆ ಮಾಡಿಕೊಂಡು, ಈಗ ಪರಿಭಾವಿಸುತ್ತಿರುವ ಅರ್ಥವ್ಯವಸ್ಥೆ ಮತ್ತು ಅಭಿವೃದ್ಧಿಯ ಮಾನದಂಡಗಳನ್ನು ಬದಲಿಸಬೇಕಿದೆ. ಜೀವಿ–ಅವಶೇಷದ ಇಂಧನಗಳ (ತೈಲ ಮತ್ತು ಕಲ್ಲಿದ್ದಲು) ಮೇಲಿನ ಅವಲಂಬನೆಯನ್ನು ಪೂರ್ತಿ ನಿಲ್ಲಿಸಲು ಕ್ರಮಕೈಗೊಂಡು ಸುಧಾರಿತ ಮತ್ತು ನವೀಕರಣವಾಗುವ ವಿದ್ಯುತ್ ಉತ್ಪಾದನೆಗೆ ಆದ್ಯತೆ ನೀಡಬೇಕು. ಜನರನ್ನು ಸೇವಾವಲಯದ ಸೇವಕರನ್ನಾಗಿ ಮಾಡುವ ಶಿಕ್ಷಣ ಮತ್ತು ಉದ್ಯೋಗ ಸೃಷ್ಟಿಗಿಂತಲೂ, ಹಳ್ಳಿ ಮತ್ತು ಸಣ್ಣಪೇಟೆಗಳಲ್ಲಿ ಸ್ವಾವಲಂಬಿ ಜೀವನಕ್ಕೆ ಅಗತ್ಯವಾದ ವ್ಯವಸ್ಥೆಯನ್ನು ರೂಪಿಸಬೇಕು ಹಾಗೂ ಮಾಲಿನ್ಯಕೇಂದ್ರಗಳಾಗಿರುವ ಮಹಾನಗರಗಳ ಬೆಳವಣಿಗೆಯನ್ನು ನಿಯಂತ್ರಿಸಬೇಕು. ಬೃಹತ್ ಮತ್ತು ಕೇಂದ್ರೀಕೃತ ಕಾರ್ಖಾನೆಗಳ ಬದಲಿಗೆ ಸಣ್ಣ ಮತ್ತು ವಿಕೇಂದ್ರಿತ ಕಾರ್ಖಾನೆಗಳಿಗೆ ನೀತಿನಿರೂಪಣೆಯಲ್ಲಿ ಪ್ರೋತ್ಸಾಹ ನೀಡಬೇಕು. ವಿಶ್ವದಾದ್ಯಂತ ಜವಾಬ್ದಾರಿಯುತ ಪ್ರಜಾಪ್ರಭುತ್ವಗಳನ್ನು ಕಟ್ಟಬೇಕು ಮತ್ತು ವಿಶ್ವಸಂಸ್ಥೆಯಂತಹ ಜಾಗತಿಕ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ರೂಪಿಸಬೇಕು. ಒಂದು ದೇಶದಲ್ಲಿ ಪರಿಸರದ ಮೇಲೆ ದಾಳಿ, ಇನ್ನೊಂದು ದೇಶದಲ್ಲಿ ಪರಿಸರ ಕಾಳಜಿ ಸಮಸ್ಯೆಗಳಿಗೆ ಪರಿಹಾರ ಅಲ್ಲ.

ಇನ್ನೊಂದು ಆಯಾಮದಲ್ಲಿ ಸಮಾಜವು ಜವಾಬ್ದಾರಿಯುತ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಕಟ್ಟಿಕೊಳ್ಳಬೇಕು ಮತ್ತು ಹಣದ ಮೂಲಕ ಗೌರವ ಮತ್ತು ಪ್ರಭಾವವನ್ನು ಅಳೆಯುವುದನ್ನು ನಿಲ್ಲಿಸಬೇಕು. ಸಮುದಾಯ ಪ್ರಜ್ಞೆಯನ್ನು ಉತ್ತೇಜಿಸಬೇಕು. ಮೌಲ್ಯಾಧಾರಿತ ಸಮಾಜ ಮಾತ್ರ ನೆಮ್ಮದಿಯ ಹಾಗೂ ಸಮಾನತೆಯ ಜೀವನವನ್ನು ಖಾತ್ರಿಗೊಳಿಸುತ್ತದೆ. ಶ್ರಮಜೀವನ ಮತ್ತು ಸರಳಜೀವನವನ್ನು ಗೌರವಿಸುವ ಮೌಲ್ಯಗಳನ್ನು ಬೆಳೆಸಬೇಕು. ಅಪಾರ ಪ್ರಮಾಣದ ನೈಸರ್ಗಿಕ ಸಂಪನ್ಮೂಲಗಳನ್ನು ದಿನಮಾತ್ರದಲ್ಲಿ ಉರಿಸಿ ನಾಶಮಾಡುವ ದುಂದುವೆಚ್ಚದ ಮದುವೆ, ಸಮಾರಂಭಗಳ ಕುರಿತು ತಿರಸ್ಕಾರ ಭಾವನೆ ಬರಬೇಕು. ಪ್ರಯಾಣ ಮತ್ತು ಪ್ರವಾಸಕ್ಕೆ ಸಮೂಹ ಸಾರಿಗೆಯನ್ನು ಅವಲಂಬಿಸಬೇಕು. ನೆರೆಹೊರೆ ಶಾಲೆಗಳಿಗೆ ಮತ್ತು ಸ್ಥಳೀಯ ಉದ್ಯೋಗಾವಕಾಶಗಳಿಗಾಗಿ ಸರ್ಕಾರದ ಮೇಲೆ ಒತ್ತಡ ತರಬೇಕು. ಸಮುದಾಯ ಜೀವನದ (ಕಮ್ಯುನಿಟಿ ಲಿವಿಂಗ್) ವಿವಿಧ ಸುಸ್ಥಿರ ಮಾದರಿಗಳನ್ನು ಪ್ರೋತ್ಸಾಹಿಸಬೇಕು.

ಅಂತಿಮವಾಗಿ ಮತ್ತು ಬಹುಮುಖ್ಯವಾಗಿ ವೈಯಕ್ತಿಕ ನೆಲೆಯಲ್ಲಿ ಪ್ರತಿಯೊಬ್ಬ ಮನುಷ್ಯನೂ ಅಥವ ಕುಟುಂಬವೂ ತನ್ನ ಜೀವನಶೈಲಿಯನ್ನು ಬದಲಾಯಿಸಿಕೊಳ್ಳಬೇಕು. ಇದು ಸಹಜವಾಗಿ ಸಮಾಜದ ಮೇಲೆಯೂ, ಸರ್ಕಾರದ ಮೇಲೆಯೂ ಸಕಾರಾತ್ಮಕ ಒತ್ತಡವನ್ನು ಹೇರುತ್ತದೆ. ಮೊದಲಿಗೆ ಆಹಾರದಿಂದ ಆರಂಭಿಸಬೇಕು. ಪ್ರಕೃತಿಯ ಮೇಲೆ ಗಣನೀಯ ಒತ್ತಡವನ್ನು ಸೃಷ್ಟಿಸುತ್ತಿರುವ ಕೈಗಾರಿಕೋತ್ಪನ್ನ ಮಾಂಸಾಹಾರವನ್ನು ತ್ಯಜಿಸಬೇಕು ಮತ್ತು ಹೆಚ್ಚು ಸಸ್ಯಾಹಾರವನ್ನು ಬಳಸಬೇಕು. ಪೂರ್ಣವಾಗಿ ಸಸ್ಯಾಹಾರಿಯಾದರೆ ಇನ್ನೂ ಒಳ್ಳೆಯದು. ಅದರಲ್ಲಿಯೂ ಸ್ಥಳೀಯವಾಗಿ ಸಿಗುವ ಆಹಾರ ಪದಾರ್ಥಗಳನ್ನೇ ತಿನ್ನಲು ಮತ್ತು ಕುಟುಂಬಕ್ಕೆ ಅಗತ್ಯವಾದ ಸೊಪ್ಪು, ತರಕಾರಿ, ಧಾನ್ಯಗಳ ಅವಶ್ಯಕತೆಯನ್ನು ಸ್ಥಳಾವಕಾಶವಿದ್ದಲ್ಲಿ ತನ್ನದೇ ಜಾಗದಲ್ಲಿ ಬೆಳೆಯಲು ಪ್ರಯತ್ನಿಸಬೇಕು. ಪ್ರಯಾಣ ಮಾಡುವ ಅಗತ್ಯಗಳನ್ನು ಕಡಿಮೆ ಮಾಡಿಕೊಳ್ಳಬೇಕು ಮತ್ತು ಸ್ಥಳೀಯ ಓಡಾಟಕ್ಕೆ ಸೈಕಲ್ ಅಥವ ಎಲೆಕ್ಟ್ರಿಕ್ ವಾಹನಗಳನ್ನು ಬಳಸಬೇಕು. ಮಕ್ಕಳನ್ನು ಸಾಧ್ಯವಾದಷ್ಟು ನೆರೆಹೊರೆ ಶಾಲಾಕಾಲೇಜುಗಳಲ್ಲಿ ಓದಿಸಲು ಆದ್ಯತೆ ನೀಡಬೇಕು. ಸಮುದಾಯದ ಹಿತದಲ್ಲಿ ವೈಯಕ್ತಿಕ ಹಿತವೂ ಇದೆ ಎನ್ನುವ ಮೌಲ್ಯಗಳನ್ನು ಮಕ್ಕಳಿಗೆ ಆರಂಭದಿಂದಲೇ ತಿಳಿಸಬೇಕು.



ಈ ಮೂರೂ ಅಂಗಳಗಳಲ್ಲಿ ಬದಲಾವಣೆಗಳು ಆರಂಭವಾದರೆ ಮಾತ್ರ ಭವಿಷ್ಯದ ಅಪಾಯಕಾರಿ ದಿನಗಳನ್ನು ಎದುರಿಸಲು ಸಾಧ್ಯ. ಈ ಹಿನ್ನೆಲೆಯಲ್ಲಿ ಸರ್ಕಾರಕ್ಕೆ, ಸಮಾಜಕ್ಕೆ, ಮತ್ತು ವ್ಯಕ್ತಿಗಳಿಗೆ ಮಹಾತ್ಮ ಗಾಂಧೀಜಿಯ ಬರಹ ಮತ್ತು ಬದುಕು ಪ್ರೇರಣೆ ಆಗಬೇಕು. ಈ ಕಗ್ಗತ್ತಲಲ್ಲಿ ನಮಗೆ ದಾರಿ ತೋರಬಲ್ಲ ಬೆಳಕು ಗಾಂಧೀಜಿ ಮತ್ತವರ ಚಿಂತನೆಗಳು ಮಾತ್ರ

–ರವಿ ಕೃಷ್ಣಾರೆಡ್ಡಿ, ಹೋರಾಟಗಾರ ಮತ್ತು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಧ್ಯಕ್ಷ, ಬೆಂಗಳೂರು

ಸರಳ ನೆಮ್ಮದಿಯ ಜೀವನದ ನಮ್ಮ ಹಾದಿ

ಕೊರೋನವೂ ಅಭಿವೃದ್ಧಿಯ ಕೆಟ್ಟ ಫಲವೇ. ಅದರ ನಿರ್ವಹಣಾ ವೈಫಲ್ಯ ಅಭಿವೃದ್ಧಿಯ ಪೊಳ್ಳುತನವನ್ನು ಬಯಲು ಮಾಡಿದೆ. ಕೊರೋನಾದಿಂದ ಜನರು ಪಾಠ ಕಲಿತಂತೆ ಕಾಣುತ್ತಿಲ್ಲ. ಇದಕ್ಕೆ ಮುಖ್ಯ ಕಾರಣ ನಮ್ಮ ಜೀವನ ಶೈಲಿಯ ಪರಿಣಾಮದ ಅರಿವು ಹೆಚ್ಚಿನ ಜನರಿಗೆ ಇಲ್ಲದಿರುವುದು. ಈ ಅಭಿವೃದ್ಧಿ ಸಾಕು ಎನ್ನುವುದರಲ್ಲಿ ಸಂಶಯವೇ ಇಲ್ಲ. ಹೆಚ್ಚು ಸಂಪಾದನೆ ಮಾಡುವುದೇ ಯಶಸ್ಸು ಎನ್ನುವ ಭಾವನೆ ಹೋಗಿ ಪರಿಸರ ಪೂರಕವಾದ ಸಹಬಾಳ್ವೆಯೇ ಯಶಸ್ಸು ಎಂದಾಗಬೇಕು. ಸರಳ, ಮಿತಿಗಳ ಬದುಕೇ ಚಂದದ ಬದುಕು. ಅದು ಕಠಿಣ ಕಷ್ಟದ ಬದುಕು ಆಗಬೇಕಿಲ್ಲ ಎನ್ನುವ ಅಭಿವೃದ್ಧಿ ಮಾದರಿಗಳನ್ನು ಕಟ್ಟಿ ಕೊಡಬೇಕು. ಹೀಗೆ ಮಾಡಿದರೆ ಮಾತ್ರ ಇನ್ನು ಈ ಅಭಿವೃದ್ಧಿ ಸಾಕು ಎನ್ನುವ ಕೂಗಿಗೆ ಹೆಚ್ಚು ಹೆಚ್ಚು ಜನರು ದನಿಗೂಡಿಸಬಹುದು.

ಮಹಾತ್ಮಾ ಗಾಂಧೀಜಿಯವರು ಹಿಂದ್ ಸ್ವರಾಜ್‌ನಲ್ಲಿ ಬರೆಯುತ್ತಾರೆ.., "ಇದನ್ನೆಲ್ಲ ಎಲ್ಲರೂ ಒಂದೇ ಬಾರಿ ಮಾಡಿ ಬಿಡುತ್ತಾರೆ ಅಂತ ಅಲ್ಲ. ಅದು ಅಸಂಭವ. ಆದರೆ ಕೆಲವರು ಮಾಡಿದ್ದನ್ನು ಅನೇಕರು ನೋಡಿ ಅನುಕರಿಸುತ್ತಾರೆ. ಹಾಗೇ ಗಣಿತದ ಲೆಕ್ಕಾಚಾರದಂತೆ ಚಳವಳಿ ಬೆಳೆಯುತ್ತದೆ. ಮುಂದಾಳುಗಳು ಹಾಗೇ ಮಾಡಿದರೆ ಜನತೆ ಸಂತೋಷದಿಂದ ಹಾಗೇ ಮಾಡುತ್ತದೆ. ಉಳಿದವರು ನಮ್ಮ ಹಾಗೇ ಮಾಡುವವರೆಗೆ ನಾವು ದಾರಿ ಕಾಯುತ್ತ ಕೂರಬೇಕಿಲ್ಲ. ಸತ್ಯವನರಿತು ಹಾಗೇ ಮಾಡದವರು ಹೇಡಿಗಳು"

ಇದೇ ಆಶಯದೊಂದಿಗೆ ನನ್ನ ಸ್ವ ಅನುಭವವನ್ನು ಇಲ್ಲಿ ಹಂಚಿಕೊಳ್ಳಲು ಬಯಸುತ್ತೇನೆ. ಇದು ಕೆಲವರಿಗಾದರೂ ಪ್ರೇರಣೆ ನೀಡಿದರೆ ಸಂತೋಷ.

ನಮ್ಮ ಜೀವನ ಶೈಲಿ ಪರಿಸರದ ಮೇಲೆ ಬೀರುವ ಪರಿಣಾಮದ ಅರಿವಿನಿಂದ ನಾವು ಸರಳ ಜೀವನ ಶೈಲಿಯನ್ನು ಪಾಲಿಸುತ್ತಿದ್ದೇವೆ.

೧. ಸಂಪಾದನೆಗೆ ಮಿತಿ ಹಾಕಿಕೊಂಡಿದ್ದೇವೆ. ಸರಳವಾಗಿ ವಿವಾಹವಾಗಿದ್ದೇವೆ. ಸರಳವಾಗೇ ಹುಟ್ಟುಹಬ್ಬ ಇನ್ನಿತರ ಕಾರ್ಯಕ್ರಮಗಳನ್ನು ಆಚರಿಸುತ್ತಿದ್ದೇವೆ.

೨. ಆದಷ್ಟು ಸಹಜವಾಗಿ ಬೆಳೆಸಿದ ಆಹಾರವನ್ನು ಕಡಿಮೆ ಇಂಧನ ಬಳಸಿ ತಯಾರಿಸುತ್ತೇವೆ. ತಿಂಡಿ ತಿನಿಸುಗಳನ್ನು ಕಚ್ಚಾ ವಸ್ತುಗಳನ್ನು ಬಳಸಿ ಮನೆಯಲ್ಲೇ ತಯಾರಿಸಲು ಆದ್ಯತೆ ಕೊಡುತ್ತೇವೆ. ಋತುಮಾನಕ್ಕೆ ಅನುಗುಣವಾಗಿ ಲಭ್ಯವಿರುವ ಹಣ್ಣು, ತರಕಾರಿಗಳನ್ನು ಸಂಸ್ಕರಿಸಿ ಗಾಜಿನ ಜಾಡಿಯಲ್ಲಿ ಸಂಗ್ರಹಿಸಿಡುತ್ತೇವೆ.

೩. ಹೆಚ್ಚಿನ ವಸ್ತುಗಳನ್ನು ರೈತರು ಮತ್ತು ಕುಶಲ ಕರ್ಮಿಗಳಿಂದ, ಸಣ್ಣ ಅಂಗಡಿಗಳಿಂದ ಖರೀದಿಸುತ್ತಿದ್ದೇವೆ. ಖರೀದಿಗೆ ನಮ್ಮದೇ ಕೈ ಚೀಲ, ಕಂಟೈನರ್ಸ್ ಬಳಸುತ್ತೇವೆ ಅಥವಾ ಪೇಪರ್‌ನಲ್ಲಿ ಕಟ್ಟಿ ಕೊಡಲು ಅಂಗಡಿಯವರಿಗೆ ಹೇಳುತ್ತೇವೆ. ಕೈಮಗ್ಗದ ಹತ್ತಿಯ ಬಟ್ಟೆಗಳನ್ನೇ ಹೆಚ್ಚಾಗಿ ಬಳಸುತ್ತೇವೆ. ಚಿನ್ನದ ಬಳಕೆಯನ್ನು ಸಂಪೂರ್ಣವಾಗಿ ಬಿಟ್ಟಿದ್ದೇವೆ.


೪. ವಿವಿಧ ರೀತಿಯ ಗಿಡಗಳನ್ನು ಬೆಳೆಸುತ್ತಿದ್ದೇವೆ. ಮನೆಯ ತ್ಯಾಜ್ಯವನ್ನು ಕಾಂಪೋಸ್ಟ್ ಮಾಡುತ್ತೇವೆ. ಮನೆ, ಕೈ ತೋಟದ ಕೆಲಸ ಎಲ್ಲರೂ ಸೇರಿ ಮಾಡುತ್ತೇವೆ. ಪ್ರತಿ ವರುಷ ಒಂದಿಷ್ಟು ಕಾಡು ಗಿಡ, ಹಣ್ಣಿನ ಗಿಡಗಳನ್ನು ನೆಡುತ್ತೇವೆ ಹಾಗೆಯೇ ಹಂಚುತ್ತಿದ್ದೇವೆ. ಈ ಬಾರಿ ಸ್ನೇಹಿತರನ್ನು ಪ್ರೇರೇಪಿಸಿ ಸುಮಾರು ೬೦೦ಕ್ಕಿಂತಲೂ ಹೆಚ್ಚು ಹಣ್ಣು ಮತ್ತು ಕಾಡಿನ ಗಿಡಗಳನ್ನು ನೆಡಿಸಿದ್ದೇವೆ.

೫. ಪಾತ್ರೆ, ಬಟ್ಟೆ, ನೆಲ, ಸ್ನಾನದ ಮನೆ ತೊಳೆಯಲು ರಾಸಾಯನಿಕಗಳ ಬದಲು ಅಂಟುವಾಳ ಕಾಯಿ, ಬಯೋ ಎನ್ಜೈಮ್‌ಗಳು_ಇತ್ಯಾದಿ ಮನೆಯಲ್ಲಿ ತಯಾರಿಸಿ ಬಳಸುತ್ತೇವೆ.

೬. ಸಂಪರ್ಕ ವ್ಯವಸ್ಥೆ ಸರಿಯಾಗಿ ಇಲ್ಲದ ಕಾರಣ ಸ್ವಂತ ವಾಹನದ ಬಳಕೆ ಅನಿವಾರ್ಯವಾಗಿದೆ. ಹಾಗಾಗಿ ಎಲ್ಲರೂ ಒಟ್ಟಿಗೆ ಪ್ರಯಾಣಿಸುವಾಗ ಹಳೇಯ ಸ್ವಂತ ವಾಹನ ಬಳಸುತ್ತೇವೆ. ಒಬ್ಬರೇ ಪ್ರಯಾಣಿಸುವಾಗ ಬಸ್ಸಿನಲ್ಲಿ ಪ್ರಯಾಣ ಮಾಡುತ್ತೇವೆ.

೭. ಅನಗತ್ಯ ವಸ್ತು, ಯಂತ್ರಗಳ ಖರೀದಿ ಇಲ್ಲ, ಟಿವಿ ಇಲ್ಲ. ಯಾವುದೇ ವಸ್ತುಗಳನ್ನು ಕೊಳ್ಳುವುದಿದ್ದರೂ ಅದರ ತಯಾರಿ ಮತ್ತು ಮುಂದೆ ವಿಸರ್ಜನೆಯಿಂದ ಪರಿಸರದ ಮೇಲೆ ಉಂಟಾಗುವ ಒತ್ತಡದ ಲೆಕ್ಕಾಚಾರ ಮಾಡುತ್ತೇವೆ. ನಮ್ಮ ಕೆಲಸಕ್ಕೆ ತೀರಾ ಅನಿವಾರ್ಯವಾದರೆ ಮಾತ್ರ ಖರೀದಿ ಮಾಡುತ್ತೇವೆ. ಆದಷ್ಟು ಕಡಿಮೆ ವಿದ್ಯುತ್ ಬಳಸಲು ಪ್ರಯತ್ನ ಮಾಡುತ್ತೇವೆ. ಸೋಲಾರ್ ಕೈ ದೀಪ ಬಳಸುತ್ತೇವೆ.

೮. ವೈಯಕ್ತಿಕವಾಗಿ ಸಸ್ಯಮೂಲ ಆಹಾರ ಪದ್ಧತಿಯನ್ನು ಅನುಸರಿಸುತ್ತಿದ್ದೇನೆ. ಮರುಬಳಕೆ ಮಾಡಬಹುದಾದ ಪರಿಸರ ಸ್ನೇಹಿ ಮುಟ್ಟು ಬಟ್ಟಲು ಮತ್ತು ಬಟ್ಟೆಯ ಪ್ಯಾಡ್ ಉಪಯೋಗಿಸುತ್ತಿದ್ದೇನೆ.



೯. ಪರಿಸರ ಸ್ನೇಹಿ ಗ್ರಾಮದ್ಯೋಗಗಳಿಗೆ ಪ್ರೋತ್ಸಾಹ ಕೊಡುವ ನಿಟ್ಟಿನಲ್ಲಿ ಉಡುಪಿ ಕೈಮಗ್ಗ ಸೀರೆ, ನೇಕಾರಿಕೆ ಉಳಿಸಲು ನಮ್ಮಿಂದ ಆಗುವ ಕೆಲಸ ಮಾಡುತ್ತಿದ್ದೇವೆ.


೧೦. ಹೆಚ್ಚು ಒತ್ತಡ ಇಲ್ಲದೆ ಕಲಿಯಲು ಜೀವನ ಕಲೆಯ ಕಲಿಕೆಗೆ ಮಕ್ಕಳಿಗೆ ಹೋಮ್ ಸ್ಕೂಲಿಂಗ್ ಮಾಡಿಸುತಿದ್ದೇವೆ.

ಅಭಿವೃದ್ಧಿಯ ಸೃಷ್ಟಿಯಾದ ಅನಗತ್ಯ ಸರಕುಗಳಿಗೆ ಮಾರುಕಟ್ಟೆ ಆಗದೆ ಸರಳ ಜೀವನದಲ್ಲಿ ನೆಮ್ಮದಿ ಕಂಡುಕೊಂಡಿದ್ದೇವೆ.

–ಮಮತಾ ರೈ, ಮಾಜಿ ಉಪನ್ಯಾಸಕಿ, ಈಗ ಗ್ರಾಮೋದ್ಯೋಗ ಪೋಷಣೆಗಾಗಿರುವ ಕದಿಕೆ ಟ್ರಸ್ಟ್‌ನ ಅಧ್ಯಕ್ಷೆ, ಕಾರ್ಕಳ

ಗ್ರಾಮೋದ್ಯೋಗ ಸೃಷ್ಟಿಸುವ ಅಭಿವೃದ್ಧಿ ಇಂದಿನ ಅಗತ್ಯ

ವೇಗವಾಗಿ ಬೆಳೆಯುತ್ತಿರುವ ಭಾರತದ ಮಧ್ಯಮವರ್ಗವನ್ನು ಗಮನದಲ್ಲಿ ಇಟ್ಟುಕೊಂಡು ಹೆಚ್ಚಿನ ಉದ್ಯಮಗಳು ಭಾರತದಲ್ಲಿ ನೆಲೆಯೂರುತ್ತಿವೆ. ಅಭಿವೃದ್ಧಿಯ ದೃಷ್ಟಿಕೋನದಿಂದ ಅರ್ಥಿಕ ತಜ್ಞರು ಇದನ್ನು ಉತ್ತಮ ಬೆಳವಣಿಗೆ ಎನ್ನುತ್ತಾರೆ. ಆದರೆ ಪಶ್ಚಿಮದ ಅನುಕರಣೆಯಾದ ಕೊಳ್ಳುಬಾಕ ಸಂಸ್ಕೃತಿ ಸಮಸ್ಯೆಗಳನ್ನು ಸೃಷ್ಟಿಸಿದೆ. ಆದರೂ ದೇಶದಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಬಡತನ ರೇಖೆಗಿಂತ ಕೆಳಗೆ ಇರುವಾಗ ಸರಳಜೀವನ ತತ್ವವನ್ನು ಯಾರು ಯಾರಿಗೆ ಹೇಳುವುದು? ಹೆಚ್ಚುತ್ತಿರುವ ಜನಸಂಖ್ಯೆಗೆ ಉದ್ಯೋಗ ಒದಗಿಸಲು ಕೈಗಾರಿಕೆಗಳು ಅನಿವಾರ್ಯ ನಿಜ. ಸಮಸ್ಯೆ ಇರುವುದು ಇವುಗಳೆಲ್ಲಾ ನಗರಕೇಂದ್ರಿತವಾಗಿರುವುದು. ಕನಿಷ್ಠಪಕ್ಷ ಬೃಹತ್ ಕೈಗಾರಿಕೆಗಳ ಬದಲು ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳನ್ನು ಉತ್ತೇಜಿಸಿ ಅವುಗಳನ್ನು ಮಹಾನಗರಗಳ ಬದಲು ಗ್ರಾಮ ಮತ್ತು ಪಟ್ಟಣಕೇಂದ್ರಿತವಾಗಿಸಬೇಕು. ಗಾರ್ಮೆಂಟ್ಸ್‌ನಂತಹ ಉದ್ದಿಮೆಗಳನ್ನು ತಾಲ್ಲೂಕು ಮಟ್ಟದಲ್ಲಿ ಸ್ಥಾಪಿಸಿದರೆ ದುಡಿಯುವ ವರ್ಗದ ವಲಸೆಯನ್ನು ತಪ್ಪಿಸಬಹುದು. ಬದಲಾದ ಜೀವನಶೈಲಿಯಿಂದಾಗಿ ಕೃಷಿಯ ಅರೆಕಾಲಿಕ ಉದ್ಯೋಗವು ಸಾಲದೆ ಹಳ್ಳಿಯ ಯುವಕರು ದಶಕಗಳಿಂದ ನಗರಗಳಿಗೆ ಹೋಗುತ್ತಿದ್ದಾರೆ. ನಮ್ಮ ಶಿಕ್ಷಣ ವ್ಯವಸ್ಥೆಯೂ ಅವರನ್ನು ನಗರಗಳತ್ತ ದೂಡುತ್ತಿದೆ. ಉದ್ಯೋಗಖಾತರಿಯನ್ನು ಕೈಮಗ್ಗ, ಕರಕುಶಲದಂತಹ ಇತರ ಗ್ರಾಮೋದ್ಯೋಗ ಕೆಲಸಗಳಿಗೂ ವಿಸ್ತರಿಸಲು ಸಾಧ್ಯವಿಲ್ಲವೆ? ಶಾಲಾಮಕ್ಕಳ ಸಮವಸ್ತ್ರ, ಆಸ್ಪತ್ರೆಯ ಬೆಡ್‌ಶೀಟ್‌ಗಳು, ಕಚೇರಿಗಳ ಕಿಟಕಿಪರದೆಗಳಿಗೆ ಕೈಮಗ್ಗ ಬಟ್ಟೆಯನ್ನು ಕಡ್ಡಾಯಗೊಳಿಸಬಾರದೇಕೆ? ಎಲ್ಲದಕ್ಕೂ ಮುಖ್ಯವಾಗಿ ಸರಕಾರಕ್ಕೆ ಇಚ್ಛಾಶಕ್ತಿ ಬೇಕು. ಲಾಲುಪ್ರಸಾದ್ ಯಾದವ್ ರೈಲು ನಿಲ್ದಾಣದ ಚಹದಂಗಡಿಗಳಲ್ಲಿ ಮಣ್ಣಿನ ಕಪ್ಪುಗಳ ಬಳಕೆಯನ್ನು ಸಾಧ್ಯವಾಗಿಸಿದ್ದರು. ಕಂಬಾರಿಕೆ, ಕುಂಬಾರಿಕೆ, ನೇಕಾರಿಕೆಯನ್ನು ಕಳೆದುಕೊಂಡು ನಗರಗಳ ಅಡಿಯಾಳಾಗಿರುವ ಗ್ರಾಮಗಳು ಸ್ವಾವಲಂಬಿಗಳಾಗಬೇಕು. ಜನರಿಗೆ ಉದ್ಯೋಗ, ದೇಶಗಳ ನಡುವಿನ ಪೈಪೋಟಿ ಮತ್ತು ಅಂತಿಮವಾಗಿ ಗಡಿರಕ್ಷಣೆ ಹೊರತಾಗಿ ಅಭಿವೃದ್ಧಿ ಕಾರ್ಯಗಳಿಗೆ ಅರ್ಥವೇನಿದೆ? ಕೈಗಾರಿಕೆಗಳಿಗೆ ಜಮೀನು ಮತ್ತಿತರ ಮೂಲಸೌಕರ್ಯ ಒದಗಿಸುವಾಗ ಸರಕಾರ ಅವು ಯಾವ ಪ್ರದೇಶದಲ್ಲಿ ಎಷ್ಟು ಜನರಿಗೆ ಉದ್ಯೋಗ ಒದಗಿಸಲಿವೆ ಎಂಬುದನ್ನು ಮುಖ್ಯವಾಗಿ ಪರಿಗಣಿಸಬೇಕು. ಮೂಲಸೌಕರ್ಯ–ಕೈಗಾರಿಕೆ–ಉದ್ಯೋಗ– ಉತ್ಪಾದನೆ– ಬಳಕೆ ಇವುಗಳಲ್ಲಿ ಯಾವುದೂ ಅತಿಯಾಗದೆ ಸಮತೋಲನವಾಗಿದ್ದಲ್ಲಿ ಮಾದರಿ ಅರ್ಥವ್ಯವಸ್ಥೆಯಾದೀತು. ಆದರೆ ಇದೆಲ್ಲ ಬರಿ ನಮ್ಮ ಕನವರಿಕೆಯಾಗಿದೆ. ವಿಜ್ಞಾನದ ಆವಿಷ್ಕಾರಗಳನ್ನೇ ಚಕ್ರವಾಗಿಸಿಕೊಂಡ ಅಭಿವೃದ್ಧಿಯ ಹುಚ್ಚುಕುದುರೆ ದೇಶದೇಶಗಳ ನಡುವಿನ ಕೊನೆಯಿರದ ಸ್ಪರ್ಧೆಯಲ್ಲಿ ನಾಗಾಲೋಟದಿಂದ ಓಡುತ್ತಲೇ ಇದೆ. ಚುಕ್ಕಾಣಿ ಯಾರ ಕೈಯಲ್ಲಿದೆ ಎಂಬುದೇ ತಿಳಿಯುತ್ತಿಲ್ಲ. ನೇತಾರರೆಲ್ಲರೂ ಅಭಿವೃದ್ಧಿಯ ಸಿದ್ಧಮಾದರಿಗೆ ಜೋತುಬಿದ್ದಂತಿದೆ. ಮನುಷ್ಯನ ಕ್ರಿಯಾಶೀಲತೆಯ ಮೂಲಾಧಾರವಾದ ವಾಂಛೆಯೇ ಅಭಿವೃದ್ಧಿಯ ಹಿಂದಿನ ಪ್ರೇರಣೆಯೆ? ಏನೇ ಇದ್ದರೂ ಪರಿಣಾಮವಂತೂ ಪ್ರಕೃತಿ ವಿನಾಶಕ್ಕೆ ಕಾರಣವಾಗುತ್ತಿದ್ದು ಭೂಮಿಯ ಇತರ ಜೀವಿಗಳ ಜೀವಿಸುವ ಹಕ್ಕನ್ನು ಕಸಿಯುವಂತಾಗಿದೆ. ಫ್ರಾನ್ಸ್ ದೇಶದ ಹಳ್ಳಿಯೊಂದರಲ್ಲಿ ಕೆಲವರು ಉದ್ದೇಶಪೂರ್ವಕವಾಗಿ ವಿದ್ಯುತ್ ಸಂಪರ್ಕವನ್ನೂ ಪಡೆಯದೆ ಸರಳವಾಗಿ ಬದುಕುತ್ತಿರುವ ಕುರಿತ ಲೇಖನವೊಂದು ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ನಮ್ಮ ದೇಶದಲ್ಲೂ ಕೋವಿಡ್ ನಂತರದ ಬೆಳವಣಿಗೆಯಲ್ಲಿ ಅನೇಕರು ಹಳ್ಳಿಗಳಿಗೆ ಹಿಂದಿರುಗಿ ನೆಲಸತೊಡಗಿದ್ದಾರೆ. ನಗರಜೀವನ ಸಾಕೆನ್ನಿಸಿ ಕೃಷಿಚಟುವಟಿಕೆಯಲ್ಲಿ ತೊಡಗಿದ್ದಾರೆ. ತಮಗೆ ಬೇಕಾದ ತರಕಾರಿಯನ್ನು ತಾವೇ ಬೆಳೆಯುತ್ತಿದ್ದಾರೆ. ಕೈಮಗ್ಗದ ಬಟ್ಟೆಯನ್ನು ತೊಡುತ್ತಿದ್ದಾರೆ. ನಿಜಕ್ಕೂ ಇವು ಆಶಾದಾಯಕ ಬೆಳವಣಿಗೆ. ಜಾತ್ರೆಯ ತೇರು ಪಾಜೆಮುಟ್ಟಿ ಹಿಂದಿರುಗುವಂತೆ ಎಲ್ಲರೂ ನಗರದ ಗೆರೆಮುಟ್ಟಿಯೇ ಹಿಂದಿರುಗಬೇಕೇನೊ?



–ಎನ್.ಎಂ. ಕುಲಕರ್ಣಿ, ಕೈಮಗ್ಗ ವಸ್ತ್ರ ವಿನ್ಯಾಸಕ ಮತ್ತು ಮಾರಾಟಗಾರ, ಹೆಗ್ಗೋಡು


ಪ್ರಗತಿಯೋ ಪ್ರಳಯವೋ?

ಬಲಶಾಲಿಗಳು ಮತ್ತು ಉಳ್ಳವರು ರೂಪಿಸುತ್ತಿರುವ ಮತ್ತು ಉಳಿದವರ ಮೇಲೆ ಹೇರುತ್ತಿರುವ ಜೀವನಶೈಲಿಯ ಫಲವಾದ 'ಅಭಿವೃದ್ಧಿ'ಯು ಉಪಭೋಗ, ವ್ಯಾಪಾರ ಮತ್ತು ಅವುಗಳನ್ನು ಪ್ರೋತ್ಸಾಹಿಸುವ ತಂತ್ರಜ್ಞಾನದ ಕೊಡುಗೆ. ಈ ಪರಿಸ್ಥಿತಿಯಾಗಲೀ ಇದರಿಂದ ಪಡಿಪಾಟಲುಗಳನ್ನು ಅನುಭವಿಸುತ್ತಿರುವ ದುರ್ಬಲರ ನೋವು ತುಂಬಿದ ಪ್ರತಿಭಟನೆಯಾಗಲೀ ಹೊಸದೇನೂ ಅಲ್ಲ. 'ಅನ್ನದೊಳಗೊಂದಗುಳ...' 'ಇಂದಿಂಗೆ ನಾಳೆಗೆ' ತೆಗೆದಿಡಬಾರದೆಂಬ ತಿಳಿವಳಿಕೆಯು ಹೇಳುವ 'ಅಸಂಗ್ರಹ' ತತ್ವವನ್ನು ಗಾಂಧಿಯೂ ಹೇಳಿದರು. ಸ್ಪರ್ಧೆ ಮತ್ತು ರಕ್ತಪಾತಗಳಿಗೆ ಎಡೆ ಮಾಡಿಕೊಡುವ ರಾಜಕಾರಣವಾಗಲೀ 'ಹುಸಿ' ಪ್ರಜಾಪ್ರಭುತ್ವವಾಗಲೀ ಇದಕ್ಕೆ ಪರಿಹಾರವಲ್ಲ. ಸಾಮಾಜಿಕ ನ್ಯಾಯದ ಫಲಾನುಭವಿಗಳಿಗೂ 'ಇದೇ ಪ್ರಗತಿ' ಎಂಬ ಭ್ರಮೆಯನ್ನು ಹುಟ್ಟಿಸುವುದರಲ್ಲಿ ವ್ಯವಸ್ಥೆಯು ಯಶಸ್ವಿಯಾಗಿದೆ. ಇಂತಹ ದುರಂತಕ್ಕೆ ಕಾರಣವಾಗಿರುವ 'ರಾಜಕಾರಣ' ಮತ್ತು 'ಪಕ್ಷ ಪ್ರಭುಗಳಿಗೆ' ಅಹವಾಲು ಮಾಡುವುದು ನಿಷ್ಪ್ರಯೋಜಕ. ಇವುಗಳ ಬಗ್ಗೆ ಆರ್ತವಾಗಿ ಅಥವಾ ಆಕ್ರಮಣಶೀಲವಾಗಿ ಮಾತಾಡಿ, ಓದಿ–ಬರೆದು 'ಹುತಾತ್ಮ ಭಾವ'ದ ಸುಖವನ್ನು ಅನುಭವಿಸುವುದು ಕೂಡ ನಡೆದಿದೆ. ಆದರೆ, ಇಂತಹ ಯಾವುದೇ ಪ್ರಯತ್ನವನ್ನು ನಿರಾಕರಿಸುವ ಸಿನಿಕತನವು ಅದಕ್ಕಿಂತ ಅಪಾಯಕರ.

ಮನುಷ್ಯನ ಒಳಗೆ ಹುದುಗಿರುವ 'ದುಷ್ಟಭಾವಗಳ'ನ್ನು ನಿಯಂತ್ರಿಸಿ ಒಳ್ಳೆಯದನ್ನು ಚಿಗುರಿಸುವ 'ಸಾಮುದಾಯಿಕ ವಿವೇಕ'ವು ಕಾಣೆಯಾಗಿರುವ, 'ವ್ಯಕ್ತಿವಾದವು' ಸ್ವಾರ್ಥವೇ ಆಗಿಬಿಟ್ಟಿರುವ ನಮ್ಮ ಈ ಕಾಲದಲ್ಲಿ 'ನಾನು ಬದಲಾಗಬೇಕು' ಎಂಬ ಹಂಬಲವನ್ನು ಮೂಡಿಸುವ 'ನಾಚಿಕೆ' ನಮ್ಮೆಲ್ಲರಲ್ಲೂ ಹುಟ್ಟಬೇಕು. ಗಂಡು, ಹೆಣ್ಣು, ಸಮುದಾಯ, ಸಮಾಜ ಎಲ್ಲರೂ 'ತಾಯಿತನ'ವನ್ನು ಆವಾಹಿಸಿಕೊಳ್ಳುವುದರಿಂದ ಮಾತ್ರ ಇದು ಸಾಧ್ಯ. ಹೆಂಗಸರಿಗೂ ಇದು ಕಷ್ಟವೇ. ಯಾಕೆಂದರೆ, 'ತಾಯಿತತ್ವ' ಸ್ವಂತ ಮಕ್ಕಳ ಆಚೆಗೆ ಚಲಿಸುತ್ತದೆ, ಎಲ್ಲರನ್ನೂ ಒಳಗೊಳ್ಳುತ್ತದೆ.

ಕೊರೊನಾದ ಹಿಡಿತದಲ್ಲಿ ಸಿಕ್ಕ ಕಾಲದಲ್ಲಿ, ನಾವು ರೈಲು, ಬಸ್ಸು, ಅಂಗಡಿ, ಸಿನಿಮಾ, ಸಭೆ–ಸಮಾರಂಭ–ಭಾಷಣ, ಕ್ರಿಕೆಟ್–ಕುಡಿತ ಮುಂತಾದ ಹಪಹಪಿಗಳಿಲ್ಲದೆ ಬದುಕಿದೆವಲ್ಲ, ಅಲ್ಲೊಂದು ಪಾಠವಿದೆ. 'ಅಭಿವೃದ್ಧಿ'ಯ ವಿಷಪ್ರಾಶನವು ಅನಿವಾರ್ಯವಲ್ಲವೆನ್ನುವುದೇ ಆ ಪಾಠ. ನಾವು ಈ ಪಾಠವನ್ನು ಕಲಿಯಲು ಆಳುವ ಶಕ್ತಿಗಳು ಬಿಡುವುದಿಲ್ಲ.

ಆದರೆ, ನಾವು ಕೂಡ ಕನಸು ಕಾಣುವುದನ್ನು ನಿಲ್ಲಿಸಬಾರದು. 'ಆತ್ಮಸಾಕ್ಷಿ'ಯನ್ನು ಕಾಪಿಟ್ಟುಕೊಂಡು ಅನುಭವಿಸುವ ಸೋಲು ನಿಜಕ್ಕೂ ಸೋಲಲ್ಲ. ಬುದ್ಧ, ಬಸವ, ಗಾಂಧಿ ಎಲ್ಲರೂ ಹೀಗೆ ಸೋತು ಗೆದ್ದವರು. ಲೋಕವು ನಾಗರಿಕತೆಗಳ ಹುಟ್ಟು–ಸಾವುಗಳನ್ನು ಕಂಡಿದೆ. ಅಂಥ ಮಾನವಲೋಕವೇ ನಾಶದ ಹಾದಿಯಲ್ಲಿ ಸಾಗುತ್ತಿದೆಯೇ? ಈಗ ಇರುವ ಸ್ಥಿತಿಯು ನಾಶವೇ ಅಲ್ಲದೆ ಮತ್ತೇನು?



–ಎಚ್.ಎಸ್. ರಾಘವೇಂದ್ರ ರಾವ್, ನಿವೃತ್ತ ಕನ್ನಡ ಅಧ್ಯಾಪಕರು ಮತ್ತು ಲೇಖಕರು, ಬೆಂಗಳೂರು

ನನ್ನ ಪ್ರಾಯಶ್ಚಿತ್ತ ಎಲ್ಲಿ, ಹೇಗೆ?

ಗಾಂಧಿ 'ಈ ಭೂಮಿ ಎಲ್ಲರ ಅಗತ್ಯವನ್ನೂ ಪೂರೈಸಬಲ್ಲುದು, ಆದರೆ ದುರಾಸೆಯನ್ನಲ್ಲ...' ಎಂದು ಎಚ್ಚರಿಸಿದ್ದರು. ಸರಿ, ಗಾಂಧಿ ವಿಚಾರಧಾರೆ ಎಲ್ಲರಿಗೂ ಗೊತ್ತಿರುವಂಥದ್ದೇ. ಮತ್ತೇಕೆ ಪುನಃ ಇಲ್ಲಿ ಭಜನೆ ಮಾಡಬೇಕು?

ವಿಷಾದನೀಯ ವ್ಯಂಗ್ಯವೆಂದರೆ ಮನುಕುಲದ ಸದ್ಯದ ಸಮಸ್ಯೆಗಳೂ, ಆ ಸಮಸ್ಯೆಗಳಿಗೆ ಪರಿಹಾರವೂ ಸರ್ವವಿದಿತವೇ. ಗಾಂಧಿ ಚಿಂತನೆಯ ಹಾಗೆಯೇ. ಆದರೆ ಪರಿಹಾರದ ದಿಕ್ಕಿನಲ್ಲಿ ಹೆಜ್ಜೆಯಿಡಲು ಯಾರೂ ತಯಾರಿಲ್ಲ!


ನಮ್ಮ ಅರ್ಥವ್ಯವಸ್ಥೆ ಮತ್ತು ನಾಗರಿಕತೆಗಳ ಬುನಾದಿಯೇ ದುರಾಸೆ. ಈ ಆಯ್ಕೆ ನಮ್ಮ ಮುಂದೆ ತಂದಿಟ್ಟಿರುವ ಬಿಕ್ಕಟ್ಟುಗಳು ಸಹ ಈಗ ಆರಂಭವಾದದ್ದಲ್ಲ. ಯಾವಾಗ ನಾವು ಆಧುನಿಕತೆ ಎಂದರೆ ಅಭಿವೃದ್ಧಿ ಎಂಬ ವ್ಯಾಖ್ಯಾನ ಕೊಟ್ಟುಕೊಂಡೆವೋ, ಮತ್ತು ಮನುಷ್ಯನನ್ನು ನಮ್ಮ ಕಾಳಜಿಯ ಕೇಂದ್ರಸ್ಥಾನದಿಂದ ಉಚ್ಚಾಟನೆ ಮಾಡಿಬಿಟ್ಟೆವೋ, ಅಂದಿನಿಂದ ಪ್ರತಿ ಹೆಜ್ಜೆಯೂ ನಮ್ಮನ್ನು ವಿನಾಶದ ಕಡೆಗೇ ಕರೆದೊಯ್ದಿದೆ.

ನಮ್ಮ ದುರಾಸೆಗಳಿಗಾಗಿಯೇ ಕಾಡುಗಳನ್ನು ಕಳೆದುಕೊಂಡೆವು, ಜೈವಿಕ ಸಮತೋಲ ಕಳೆದುಕೊಂಡೆವು, ಸಹಜೀವನದ ಆನಂದವನ್ನು ಕಳೆದುಕೊಂಡೆವು... ಬಾಕಿ ಇರುವುದು ಮಾನವ ತಳಿಯ ನಾಮಾವಶೇಷ ಮಾತ್ರ. ಈ ಸರ್ವನಾಶಕ್ಕೆ ನಾವು ಕೊಟ್ಟುಕೊಂಡ ಹೆಸರೇ 'ಅಭಿವೃದ್ಧಿ'.

ಈ ಅಭಿವೃದ್ಧಿ ಸಹಜವಾಗಿಯೇ ನಮ್ಮ ಮೌಲ್ಯವ್ಯವಸ್ಥೆಯನ್ನೂ ನಿರ್ದೇಶಿಸುತ್ತಿದೆ. ಕೋವಿಡ್ ಕಾಲದಲ್ಲೇ ಎರಡು ಕೋಟಿ ಜನ ತಮ್ಮ ಜೀವನೋಪಾಯ ಕಳೆದುಕೊಳ್ಳುವರೆಂದೂ, ಸುಮಾರು ೪೦ ಕೋಟಿ ಭಾರತೀಯರು ಕಡುಬಡತನದ ಸುಳಿಗೆ ಜಾರುವರೆಂದೂ ವಿಶ್ವ ಹಣಕಾಸು ಸಂಸ್ಥೆ ವರದಿ ಕೊಟ್ಟಿತ್ತು. ಈ ದಾರುಣ ಅಧಃಪತನದ ಸಮಯದಲ್ಲೇ ಅಂಬಾನಿಯವರ ಪ್ರತಿ ಗಂಟೆಯ ಆದಾಯ ೯೦ ಕೋಟಿ ರೂಪಾಯಿಗೆ ಏರಿತ್ತು. ಆ ಎರಡು ವರ್ಷಗಳಲ್ಲಿ ಅಂಬಾನಿ– ಅದಾನಿಗಳ ಗಳಿಕೆಯಲ್ಲಿ ಶೇಕಡಾ ೩೫೦ರಷ್ಟು ಏರಿಕೆ ಕಂಡುಬಂತು!

ಈ ರಾಕ್ಷಸೀ ಅಸಮಾನತೆಯೇ ಎಲ್ಲ ಹಿಂಸೆಯ ಮೂಲ ಎಂದು ಗೊತ್ತಿದ್ದೂ, ಬಡತನವೆಂಬುದೇ ಇಂದು ಹೀನಾಯ ಅಪಮಾನ ಎನಿಸಿರುವುದಕ್ಕೆ ಸಂಪತ್ತಿನ ಈ ಮಟ್ಟಿನ ಅಶ್ಲೀಲ ಆರಾಧನೆಯೇ ಕಾರಣ ಎಂಬುದನ್ನೂ ಮರೆತು, ನಮ್ಮ ಪಾಡಿಗೆ ಕಣ್ಣು ತಿರುಗಿಸಿ ಓಡುತ್ತಿದ್ದೇವೆ. ಅದಕ್ಕೇ ಆಧುನಿಕ ಮಾನವನ ಬದುಕಿನ ಓಟ ತನ್ನನ್ನೇ ಸುಟ್ಟುಕೊಳ್ಳುವ ಭಸ್ಮಾಸುರ ಆಟದ ಹಾಗೆ ಕಾಣತೊಡಗಿದೆ...

ಹೀಗೆ ಕೊನೆಯಿಲ್ಲದ ದೃಷ್ಟಾಂತಗಳನ್ನು ಕೊಡುತ್ತಲೇ ಹೋಗಬಹುದು. ಕೊಟ್ಟು ದಣಿಯಬಹುದು. ಪ್ರಯೋಜನವೇನು? ಯಾಕೆಂದರೆ ಎಲ್ಲವೂ ಎಲ್ಲರಿಗೂ ಗೊತ್ತಿರುವ ಸಂಗತಿಗಳೇ. ಅಷ್ಟೇ ಅಲ್ಲ, ಇದರ ಪರಿಹಾರ ಸಹ ಎಲ್ಲರಿಗೂ ಗೊತ್ತು! ನಾವು ಕ್ಷಣ ನಿಧಾನಿಸಿ ಉತ್ತರ ನಂನಮ್ಮ ಬದುಕಿನಲ್ಲೇ ಇದೆ ಎಂದು ಒಪ್ಪಿಕೊಳ್ಳುವವರೆಗೆ– ಅಂದರೆ ನಮ್ಮ ದುರಾಸೆಗಳಿಗೆ 'ಸರಳ ಸಭ್ಯ' ಮಿತಿ ಹೇರಿಕೊಂಡು 'ಎಲ್ಲರೊಳಗೊಂದಾಗಿ' ಬಾಳದಿದ್ದರೆ, ಯಾರಿಗೂ ಉಳಿಗಾಲವಿಲ್ಲ. ಅದೂ ಎಲ್ಲರಿಗೂ ಗೊತ್ತು. ಆದರೆ ನಮ್ಮ ದುರಾಸೆಗಳಿಗೆ ಮಿತಿ ಕಂಡುಕೊಳ್ಳುವ ಬಗೆ ಯಾವುದು? ಶುರು ಮಾಡುವುದೆಲ್ಲಿಂದ? ಮತ್ತು ಆ ಸಂಯಮವೇ ಸಮೂಹ ಆಂದೋಲನದ ಸ್ವರೂಪ ಪಡೆಯುವುದು ಹೇಗೆ?



ಒಟ್ಟಿನಲ್ಲಿ ನಾನೂ ತಪ್ಪಿತಸ್ಥನೇ. ಅಂದಾಗ ನನ್ನ ಪ್ರಾಯಶ್ಚಿತ್ತ ಎಲ್ಲಿ, ಹೇಗೆ?

–ಎನ್.ಎಸ್. ಶಂಕರ್, ಹಿರಿಯ ಪತ್ರಕರ್ತ, ಚಲಚಿತ್ರ ನಿರ್ದೇಶಕ


ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ......

ನಮ್ಮನ್ನು ಆಕ್ರಮಿಸಿಕೊಂಡು ನಮ್ಮ ಜೀವನಶೈಲಿಯನ್ನು ನಿಯಂತ್ರಿಸುತ್ತಿರುವ ಸಂಗತಿಗಳಿಂದ ಬಿಡುಗಡೆ ಪಡೆಯುವುದು ಹೇಗೆ ಎನ್ನುವ ಪ್ರಶ್ನೆಯು, ಆಳದಲ್ಲಿ ನಾಗರಿಕತೆ ಮತ್ತು ಸಂಸ್ಕೃತಿಗಳ ನಡುವೆ ಮೂಡಿರುವ ಕಂದರದ ಪರಿಣಾಮವಾದ ಬಿಕ್ಕಟ್ಟು. ನನ್ನ ಸುತ್ತಲೂ ನನ್ನನ್ನೇ ಕುಬ್ಜಗೊಳಿಸುವ ಒಂದು ಪರಿಸರ ಸೃಷ್ಟಿಯಾಗಿದೆ. ಬೇಕೋ ಬೇಡವೋ ನಾನು ಅದರಲ್ಲಿ ಪಾಲುದಾರಿಕೆ ಪಡೆದಿದ್ದೇನೆ ಎಂಬ ಅರಿವು ಮೂಡಿದಾಗ, ನನ್ನ ಮೇಲೆ ನನಗೆ ಅಸಹ್ಯ ಹುಟ್ಟುತ್ತದೆ. ನಾನು ಯಾವುದೋ ದೊಡ್ಡ ಮೋಸದ ಭಾಗವಾಗುತ್ತಿದ್ದೇನೆ ಅನ್ನುವ ಪ್ರಜ್ಞೆಯಲ್ಲಿ ಭಯ ಸೃಷ್ಟಿಯಾಗುತ್ತದೆ, ಎಚ್ಚರ ಹುಟ್ಟುತ್ತದೆ. ಆಗ ಈ ಸೃಷ್ಟಿಯು ನಮ್ಮ 'ಅನುಭೋಗ'ದ ವಸ್ತು ಮಾತ್ರವಲ್ಲ, ಬದುಕೆನ್ನುವುದು 'ಉಳ್ಳುವಿಕೆ'ಯ ಪ್ರಶ್ನೆಯಲ್ಲ, ಅದು 'ಇರುವಿಕೆ'ಗೆ ಸಂಬಂಧಪಟ್ಟ ವಿಷಯ ಅನ್ನುವುದು ಅರಿವಾಗುತ್ತದೆ.

ಲೇಖಕನು ಬರಹದ ಮೂಲಕ, ಕುಂಬಾರ, ವೈದ್ಯ, ಇಂಜಿನಿಯರು, ಬಡಗಿ ಮುಂತಾದವರು ತಮ್ಮ ಕಸುಬಿನಲ್ಲಿ ತೋರಿಸುವ ಕೌಶಲ್ಯ, ನಿಷ್ಠೆಗಳಿಂದ ನಮ್ಮೊಳಗೆ ಸೃಷ್ಟಿಸುವುದು ಈ ಎಚ್ಚರವನ್ನು, ಭಯವನ್ನು ಮತ್ತು ಆತ್ಮಸಾಕ್ಷಿಯನ್ನು. ಆತ್ಮಸಾಕ್ಷಿಯೇ ನನಗೆ 'ದೇವರು' ಅಂತ ಆದಾಗ, ನನ್ನನ್ನು ನಾನೇ ಭೇದಿಸಿಕೊಳ್ಳುವುದಕ್ಕೆ ಇರುವ ಒಂದೇ ದಾರಿ ನಾನು ಮಾಡುವ ಕಾಯಕ ಎನ್ನುವುದು ನನಗೆ ಹೊಳೆಯುತ್ತದೆ.

ಅನುದಿನದ ಬದುಕಿನಲ್ಲಿ ಬದಲಾವಣೆಯಾಗದೆ, ಮತ್ತೊಬ್ಬರಲ್ಲಿ ಅದನ್ನು ತರುವುದು ಸಾಧ್ಯವಿಲ್ಲ ಅನ್ನುವ ನಂಬಿಕೆ ನನ್ನದು. ಅದಕ್ಕಾಗಿ ನನ್ನ ಮಿತಿಯಲ್ಲಿ ನಾನು ಮಾಡುತ್ತಿರುವುದಿಷ್ಟು: ಮಳೆನೀರಿನ ಸಂಗ್ರಹ/ಬಳಕೆ, ಬೀದಿಯ ಪಾರ್ಥೇನಿಯಂ, ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಆಯ್ದು ತೆಗೆಯುವುದು, ಲಭ್ಯವಿರುವ ಖಾಲಿ ಜಾಗದಲ್ಲಿ ಸೊಪ್ಪು/ತರಕಾರಿ ಬೆಳೆಯುವುದು, ತ್ಯಾಜ್ಯವಸ್ತುಗಳನ್ನು ಗೊಬ್ಬರವಾಗಿ ಬಳಸುವುದು, ದೇಶೀ/ಕರಕುಶಲ ವಸ್ತುಗಳನ್ನು ಬಳಸುವುದು, ಬೀದಿ ನಾಯಿಗಳಿಗೆ ಊಟ ಹಾಕುವುದು ಇತ್ಯಾದಿ.

ಇದೆಲ್ಲದರಿಂದ ಲೋಕ ಬದಲಾಗುತ್ತದೋ ಇಲ್ಲವೋ ತಿಳಿಯದು, ನನ್ನ ಲೋಕದೃಷ್ಟಿ ಬದಲಾಗುತ್ತದೆ. ಎಲ್ಲರೂ ಬದಲಾಗಬೇಕು ಎನ್ನುವುದು ಕನಸೇ ಇರಬಹುದು. ಆದರೆ, ಕನಸುಗಳಿಲ್ಲದ ಬದುಕಿಗೆ ಅರ್ಥವೆಲ್ಲಿದೆ?




–ಜ.ನಾ ತೇಜಶ್ರೀ, ಕವಯತ್ರಿ, ಕತೆಗಾರ್ತಿ, ಹಾಸನ

ತಮ್ಮ ಜೀವನ ಪ್ರಾರಂಭಿಸಿ ಯೌವನದಲ್ಲಿ ಸೋವಿಯತ್ ಒಕ್ಕೂಟದ ಕಟ್ಟಾ ಸಮರ್ಥಕ ಮಾರ್ಕ್ಸವಾದಿ-ಲೆನಿನ್‌ವಾದಿಯಾಗಿ ಬದಲಾಗಿದ್ದವರು. ತಮ್ಮ ೪೦ನೆಯ ವರ್ಷದಲ್ಲಿ ಕಮ್ಯೂನಿಸಂನಿಂದ ಭ್ರಮನಿರಸನಗೊಂಡು ಪ್ರಜಾಸತ್ತಾತ್ಮಕ ಸಮಾಜವಾದದ ಕಡೆ, ನಂತರ ಗಾಂಧಿ ಮತ್ತು ವಿನೋಬಾ ಅವರುಗಳ ವಿಚಾರಗಳ ಕಡೆಗೆ ನಡೆದರು. ೬೦ರ ದಶಕದ ಉದ್ದಕ್ಕೂ ಅವರು ಸಾಮುದಾಯಿಕ ಸಿದ್ಧಾಂತವನ್ನು ಪ್ರತಿಪಾದಿಸಿದರು. 'ಸಂಪೂರ್ಣ ಕ್ರಾಂತಿ'ಯ ಕರೆ ಅವರ ಬೌದ್ಧಿಕ ಪ್ರಯಾಣದಲ್ಲಿ ಮತ್ತೊಂದು ಹಂತ ಮಾತ್ರವಾಗದೆ ಇಡೀ ಪ್ರಯಾಣದ ಅನುಭವದ ಅರಿವಿನ ಕೋಶವಾಗಿತ್ತು, ೨೦ನೆಯ ಶತಮಾನದ ಎಲ್ಲಾ ಸಿದ್ದಾಂತಗಳನ್ನೂ ಒಂದು ಉದ್ದೇಶಕ್ಕಾಗಿ ಸಮಗ್ರಗೊಳಿಸುವುದಾಗಿತ್ತು.

ಜೆ.ಪಿ. ತಮ್ಮ ಕಾಲಕ್ಕಿಂತ ಬಹಳ ಮುಂದಿದ್ದರು. ಆದ್ದರಿಂದ ಅವರ ವಿಚಾರವು ಸಹಜವಾಗಿಯೇ ಸ್ಥೂಲವಾಗಿತ್ತು. ಅವರು ಸಂಪೂರ್ಣ ಕ್ರಾಂತಿ ಎಂದರೆ ವ್ಯವಸ್ಥೆ ಮತ್ತು ಮನುಷ್ಯರನ್ನು ಒಂದು ಮೂಲಭೂತ ಮರುಹೊಂದಾಣಿಕೆಗೆ ಸಿದ್ಧಮಾಡುವ ರಾಜಕೀಯ, ಆರ್ಥಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ, ಹಾಗೆಯೇ ಆಧ್ಯಾತ್ಮಿಕ ವಲಯಗಳಲ್ಲಿಯೂ ಸಹ ಆಗುವ ಕ್ರಾಂತಿ ಎಂಬ ಮಾತನ್ನಾಡುವುದರ ಆಚೆಗೆ ಹೋಗಲಿಲ್ಲ. ಕ್ರಾಂತಿಕಾರಕ ಬದಲಾವಣೆ ಅಹಿಂಸಾತ್ಮಕವಾಗಿದ್ದು ಅದು ರಾತ್ರೋರಾತ್ರಿ ಸಂಭವಿಸಲಾರದು ಎಂದು ಅವರು ಆಗ್ರಹಿಸುತ್ತಿದ್ದರು.

ಅವರ ಹೆಗಲ ಮೇಲೆ ನಿಂತು ನಾವು ಇನ್ನೂ ಉತ್ತಮ ಕೆಲಸ ಮಾಡಬಹುದು. ನಾವು ಜೆಪಿಯವರ ವಿಶಾಲ ವಿಚಾರರಾಶಿಯು ಒಳಗೊಳ್ಳದೆ ಬಿಟ್ಟಿರುವ ಫುಲೆ-ಅಂಬೇಡ್ಕರ್‌ವಾದಿ ಬಳುವಳಿಯನ್ನು, ಮಹಿಳಾವಾದವನ್ನು, ಪರಿಸರವಾದದಂತಹ ಸಿದ್ಧಾಂತಗಳನ್ನೂ ಒಂದುಗೂಡಿಸಬಹುದು. ಅವರು ತಮ್ಮ ಕಾಲಕ್ಕೆ ಗ್ರಹಿಸಲಾಗದಿದ್ದ, ಲಿಂಗ, ಜೀವಿಪರಿಸ್ಥಿತಿ, ಮಾಹಿತಿ ರಚನೆ ಮತ್ತು ಸಂವಹನ ತಂತ್ರಗಳಂತಹ ಅಂಶಗಳತ್ತ ನಾವು ಗಮನ ಹರಿಸಬಹುದು. ನಾವು ಇತಿಹಾಸದ ಮುಂಚೂಣಿ ನಾಯಕವರ್ಗವೊಂದರ ಪರಿಕಲ್ಪನೆ, ಕ್ರಾಂತಿಕಾರಕ ಬದಲಾವಣೆಗಳ ಸಾರ್ವತ್ರಿಕ ಮಾದರಿ, ಮತ್ತು ಒಮ್ಮೆಲೇ ಸಂಭವಿಸುವ ಕ್ರಾಂತಿಯಂತಹ ೧೯ ನೆಯ ಶತಮಾನದ ಸಿದ್ಧಾಂತಗಳಲ್ಲಿಯ ಮೂಢನಂಬಿಕೆಗಳನ್ನು ತ್ಯಜಿಸಬಹುದು. ಒಂದು ಉತ್ತಮ ಸಮಾಜದ ಚಿತ್ರವನ್ನು ಕಲ್ಪಕತೆ(ಉಟೋಪಿಯ)ಯಿಂದ ಕಡ ತೆಗೆದುಕೊಳ್ಳದೆ ನಮ್ಮ ಹೊಸ ಆದರ್ಶಗಳನ್ನು ನಾವು ಭಾರತದ ಸಂವಿಧಾನದ ಮೌಲ್ಯಗಳ ಮೂಲಕ ಸಾಧಿಸುವ ಪ್ರಯತ್ನ ಮಾಡಬಹುದು. ಕ್ರಾಂತಿಯ ವಿಚಾರವನ್ನು ಕ್ರಾಂತಿಕಾರಕಗೊಳಿಸಬಹುದು.

ಇಂತಹ ಹೊಸ ತತ್ವಪ್ರಣಾಲಿಕೆಯೊಂದನ್ನು ರೂಪಿಸುವುದು ನಮ್ಮ ಕಾಲದ ಬಹುದೊಡ್ಡ ಸವಾಲುಗಳಲ್ಲೊಂದು. ಇದು ರಾಜಕೀಯ ನಾಯಕರಿಗೆ ಮತ್ತು ಕಾರ್ಯಕರ್ತರ ಪಾಲಿನ ಸವಾಲು ಮಾತ್ರವಲ್ಲ. ಅದು ಎಲ್ಲಾ ಸಾಮಾಜಿಕ ಕಾರ್ಯಕರ್ತರಿಗೂ, ಬುದ್ಧಿಜೀವಿಗಳಿಗೂ ಶಿಕ್ಷಣ ತಜ್ಞರಿಗೂ ಕಲಾವಿದರಿಗೂ ಕೂಡ ಒಂದು ಸವಾಲು. ಈ ಜೂನ್ ೫, ಕಷ್ಟದ ಆದರೆ ಅನಿವಾರ್ಯವಾದ ಪ್ರಯಾಣದ ಪ್ರಾರಂಭ ಬಿಂದುವಾಗಲಿ.



(ಲೇಖಕರು ಖ್ಯಾತ ರಾಜಕೀಯ ವಿಶ್ಲೇಷಕರು ಮತ್ತು 'ಸ್ವರಾಜ್ ಇಂಡಿಯಾ ಅಭಿಯಾನದ ಸಂಚಾಲಕರು)

(ಕೃಪೆ: *ದ ಪ್ರಿಂಟ್* ಕನ್ನಡಕ್ಕೆ: ಎಂ. ರಾಜು)

೨ನೇ ಪುಟದಿಂದ)

ಕೆಲವು ಮೌಲ್ಯಗಳು ನಮ್ಮ ಪಠ್ಯಕ್ರಮದ ಭಾಗವಾಗಬೇಕು. ದೃಶ್ಯ ಮಾಧ್ಯಮಗಳಲ್ಲಿ ದಿನದುದ್ದಕ್ಕೂ ನೂರೆಂಟು ಬಗೆಯ ಸುಳ್ಳು ಜಾಹಿರಾತುಗಳು, ಪ್ರಚಾರಗಳು, ಬೇಸರಗೊಳ್ಳುವಷ್ಟು ಬಿತ್ತರಗೊಳ್ಳುತ್ತಲೇ ಇರುತ್ತವೆ. ಅವುಗಳ ಮಧ್ಯೆ ಒಂದೆರಡಾದರೂ ಜಾಹಿರಾತುಗಳನ್ನು ಸರಕಾರವಾಗಲಿ, ಸಮಾನ ವಿಚಾರ ಹೊಂದಿದ ಸಂಘಸಂಸ್ಥೆಗಳಾಗಲಿ ಸರಳ ಜೀವನ ವಿಧಾನ ಕುರಿತು ಪ್ರಚುರ ಪಡಿಸಬಹುದಲ್ಲವೆ? ಅವು ಎಲ್ಲೋ ಯಾರನ್ನಾದರು ತಟ್ಟಬಹುದು.

ಗೋಕಟ್ಟೆ ಕುರಿತು ಪ್ರಬಂಧ ನಮ್ಮನ್ನು ಬಾಲ್ಯದತ್ತ ಎಳೆಯಿತು. ಸೇದುವ ಬಾವಿ, ಸೇದುವ ಬಾವಿಯ ಹಗ್ಗ, ಬಾವಿ ಸುತ್ತಲಿನ ಕಲ್ಲಿನ ಡೋಣಿಗಳು, ಅವುಗಳ ಸುತ್ತಲೂ ನೀರಿಗಾಗಿ ನೆರೆಯುತ್ತಿದ್ದ ದನಕರುಗಳು, ಕಂಕುಳಲ್ಲೊಂದು, ತಲೆಯ ಮೇಲೊಂದು ಜೋಡು ಕೊಡ ಹೊತ್ತು ನೀರು ತರುವ ಹೆಂಗಳೆಯರು ಹೀಗೆ ಗ್ರಾಮೀಣ ಪ್ರದೇಶದ ಬಾವಿಗಳು ಗ್ರಾಮ ಜೀವನದ ಜೀವಂತಿಕೆಯ ಕೇಂದ್ರಗಳಾಗಿದ್ದವು. ಅದರೊಂದಿಗೆ ಆಗ ಪ್ರಚಲಿತ ಇದ್ದ ಅಸ್ಪೃಶ್ಯತೆಯ ಆಚರಣೆಯೂ ನೆನಪಾಗುತ್ತದೆ.

-ವೆಂಕಟೇಶ ಮಾಚಕನೂರ, ಧಾರವಾಡ.

'ಇನ್ನು ಈ ಅಭಿವೃದ್ಧಿ ಸಾಕು' ವಿಷಯ ಕುರಿತ ಚರ್ಚೆಗೆ ನೀವು ಬರೆದಿರುವ ಮುನ್ನುಡಿಯ ಮಾತುಗಳನ್ನು ಓದುತ್ತಿದ್ದಂತೆ ನನಗೆ ಎರಡು-ಮೂರು ವರ್ಷಗಳ ಹಿಂದೆ ನಾನು ಶಿಬಿರಾರ್ಥಿಯಾಗಿ ಭಾಗವಹಿಸಿದ್ದ ಕುಪ್ಪಳ್ಳಿಯ ಅಧ್ಯಯನ ಶಿಬಿರದ ಒಂದು ದಿನ ಊಟದ ಬಿಡುವಿನಲ್ಲಿ ನೀವು ಇಬ್ಬರು ಸಂಪನ್ಮೂಲ ವ್ಯಕ್ತಿಗಳೊಂದಿಗೆ ನಡೆಸಿದ್ದ ಮಾತುಕತೆ ನೆನಪಿಗೆ ಬಂತು. ಈ ಶಿಬಿರ ಆಯೋಜಿಸುವ ಲೋಹಿಯಾ ಜನ್ಮಶತಾಬ್ದಿ ಪ್ರತಿಷ್ಠಾನ ಬದ್ಧವಾಗಿರಬೇಕಾದ ತತ್ವಗಳಿಗೆ ವಿರುದ್ಧವಾಗಿ ಪ್ರತಿಷ್ಠಾನದ ಒಬ್ಬ ಟ್ರಸ್ಟೀ ದುಬಾರಿ ಕಾರನ್ನು ಕೊಂಡದ್ದಕ್ಕಾಗಿ ಅವರಿಂದ ಪ್ರತಿಷ್ಠಾನವು ಟ್ರಸ್ಟೀಶಿಪ್‌ಗೆ ರಾಜೀನಾಮೆ ಕೊಡಿಸಿದ್ದನ್ನು ನೀವು ಹೇಳುತ್ತಿದ್ದಂತೆ ಲೋಹಿಯಾವಾದಿ ಚಿಂತಕರೆಂದು ಖ್ಯಾತರಾದ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾಗಿದ್ದ ಆ ಸಂಪನ್ಮೂಲ ವ್ಯಕ್ತಿಗಳು 'ಅಯ್ಯೋ ನಾವು ಎಂತಹ ಕಾರು ಇಟ್ಟುಕೊಳ್ಳುತ್ತೇವೆ ಎನ್ನುವುದಕ್ಕೂ ಸಮಾಜವಾದಕ್ಕೂ ಸಂಬಂಧವೇನು?' ಎಂದು ನಕ್ಕು ಪ್ರಶ್ನಿಸಿದರು. ಆಗ ನೀವು ಮುಂದೆ ಮಾತಾಡದೆ ಅವರತ್ತ ಬಿರುನೋಟ ಬೀರಿ ಅಲ್ಲಿಂದ ಎದ್ದುಹೋದ ಚಿತ್ರ ಇನ್ನೂ ನನ್ನ ಕಣ್ಣಿಗೆ ಕಟ್ಟಿದಂತೆ ನೆನಪಿದೆ. ನಿಮಗೆ? ಸಮಾಜವಾದ, ಸರಳ ಜೀವನ ಇವೆಲ್ಲ ಬುದ್ಧಿಜೀವಿಗಳ ಜಾಣ ಮಾತುಗಾರಿಕೆ ಮಾತ್ರವಾಗಿರುವವರೆಗೆ ಬದಲಾವಣೆ ಎಂಬುದು ಸಾಧ್ಯವಿಲ್ಲದ ಮಾತು

-ಎಸ್. ಬಿ. ಶಿವಕುಮಾರ್, ನಂಜನಗೂಡು

ಜೂನ್ ಸಂಚಿಕೆ ತಲುಪಿದೆ. ಕರೋನಾ ನಿಯಂತ್ರಿಸುವಲ್ಲಿ ಸರಕಾರಗಳು ಮೈಮರೆತು ಕುಳಿತು ನಡೆದುಕೊಂಡ ಬಗೆಗೆ ನಿಮ್ಮ ಸಂಪಾದಕೀಯ ಎಂದಿನಂತೆಯೇ ತೀಕ್ಷ್ಣವೂ ಸಮತೂಕವುಳ್ಳದ್ದೂ ಆಗಿದೆ. 'ಕಂಟೇಜಿಯನ್' ಚಲನಚಿತ್ರದ ಕುರಿತಾದ ನಾಗೇಶ್ ಹೆಗಡೆ ಅವರ ಲೇಖನ ವರ್ತಮಾನದ ತಲ್ಲಣಗಳೊಂದಿಗೆ ಹೋಲಿಸಿ ನೋಡಿಕೊಳ್ಳಲು ನಮಗೆ ಅನುವು ಮಾಡಿಕೊಡುತ್ತದೆ. ವೈರಾಣುವೊಂದು ಲೋಕದ ಸರ್ವ ಚಟುವಟಿಕೆಗಳನ್ನು ಪ್ರಭಾವಿಸಿ ಮನುಷ್ಯನನ್ನು ಕ್ರೈಸಿಸ್‌ನ ಕಟಕಟೆಯಲ್ಲಿ ತಂದು ನಿಲ್ಲಿಸಿದ ಸಂಗತಿಯನ್ನು ಲಕ್ಷ್ಮೀಶ ತೋಳ್ಪಾಡಿ ಅವರ ಲೇಖನವು ಅನಾವರಣಗೊಳಿಸುತ್ತದೆ. ಅಭಿವೃದ್ಧಿ ಹೆಸರಿನಲ್ಲಿ ನಾಗಾಲೋಟದಲ್ಲಿ ಓಡುತ್ತಿರುವ ಮಾನವ ಜನಾಂಗ ನಾಶವಾಗಿ ಹೋಗುವ ಮುನ್ನ ವಾಸ್ತವಿಕವಾಗಿ ಅದು ತಳೆಯಬೇಕಾದ ನಿಲುವಿನ ಸುಳುಹುಗಳನ್ನು ಡಾ. ರಾಜೇಂದ್ರ ಚೆನ್ನಿ, ಅಕ್ಷರ ಕೆ.ವಿ., ಗೀತಾ ವಸಂತ, ಸಂತೋಷ ಕೌಲಗಿ, ಕೇಶವ ಎಚ್. ಕೊರ್ಸೆ ಮುಂತಾದವರ ಲೇಖನಗಳು ನೀಡುತ್ತವೆ. ಒಟ್ಟಾರೆ ಇದೊಂದು ಮೌಲಿಕ ಸಂಚಿಕೆ.

-ಚನ್ನಪ್ಪ ಕಟ್ಟಿ, ಸಿಂದಗಿ

ಜೂನ್ ತಿಂಗಳ 'ಹೊಸ ಮನುಷ್ಯ' ಪತ್ರಿಕೆಯಲ್ಲಿ 'ಈ ಅಭಿವೃದ್ಧಿ ಇನ್ನು ಸಾಕು: ಒಂದು ಚರ್ಚೆ' ಎಂಬ ಸಂಪಾದಕರ ಲೇಖನ ತುಂಬಾ ಸಕಾಲಿಕವಾದುದು ಎನ್ನಿಸಿತು. 'ಅಭಿವೃದ್ಧಿ' ಎಂಬುದನ್ನು ನಮ್ಮ ಸ್ವಾರ್ಥದ ಬೆಳೆ ಬೆಳೆಯುವ ಪರವಾನಗಿಯನ್ನಾಗಿ ಮಾಡಿಕೊಂಡಿದ್ದೇವೆ. ರಸ್ತೆ ಅಗಲೀಕರಣ, ಅವೈಜ್ಞಾನಿಕ ನದಿ ತಿರುವು, ಗಣಿಗಾರಿಕೆ ಮುಂತಾದುವುಗಳ ನೆಪದಲ್ಲಿ ನಿರಂತರ ವಿನಾಶ ೨೧ನೇ ಶತಮಾನದ ಮುಖ್ಯ ಕುರುಹಾಗಿ ಬಿಟ್ಟಿದೆ. ಐಷಾರಾಮಿ-ಮೂಲಭೂತ ಎಲ್ಲವೂ ಅಗತ್ಯಗಳೇ ಆಗಿ ಮತ್ತಷ್ಟು ನಾಶವಾಗುವುದರೊಳಗೆ ಇಷ್ಟು ಅಭಿವೃದ್ಧಿ ಸಾಕು ಎಂದು ಗಟ್ಟಿಯಾಗಿ ಹೇಳೋಣ.

-ಮಿಥುನ್ ಚಕ್ರವರ್ತಿ, ಶಿರ್ವ

ಕವಿಶೈಲದ ಮಾನಪ್ಪನವರು ನಿಧನರಾದ ಸುದ್ದಿ ಹೊಸಮನುಷ್ಯ ಓದಿ ತಿಳಿದು ತುಂಬಾ ದುಃಖವಾಯಿತು.. ಅವರನ್ನು ಒಮ್ಮೆ ಮಾತ್ರ ನೋಡಿದ್ದು. ೨೦೧೭ರಲ್ಲಿ ನಮ್ಮ ಕಛೇರಿಯ ಗೆಳೆಯರೊಂದಿಗೆ ಕವಿಶೈಲಕ್ಕೆ ಹೋಗಿದ್ದೆವು. ಸೆಲ್ಫೀ ತೆಗೆಸಿಕೊಳ್ಳಲು ನಮ್ಮವರು ಗಲಾಟೆ ಮಾಡುತ್ತಿದ್ದರು. ಆಗ ಸಂಜೆ ಸಮಯ. ಅಲ್ಲಿಯೇ ಇದ್ದ ಮಾನಪ್ಪನವರು ನಮ್ಮ ಬಳಿ ಬಂದು ಏನೂ ಮಾತಾಡದೆ ಕುವೆಂಪು ಅವರ ನಿಶ್ಯಬ್ದ ಕವನವನ್ನು ವಾಚಿಸತೊಡಗಿದರು. ಅವರ ವಾಚನ ಮುಗಿಯುವಷ್ಟರಲ್ಲಿ ನಮ್ಮವರ ಗಲಾಟೆಯೂ ಇಲ್ಲವಾಯಿತು.

ಕವಿ ಮತ್ತು ಕವಿಶೈಲದ ಬಗ್ಗೆ ಅಷ್ಟೊಂದು ಗೌರವವಿತ್ತು ಅವರಲ್ಲಿ.

-ಮಲ್ಲಿಕಾರ್ಜುನ ಹೊಸಪಾಳ್ಯ, ಹೊಸಪೇಟೆ

೫ನೇ ಪುಟದಿಂದ)

ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಸಲುವಾಗಿಯೇ ಎಂಬುದನ್ನು ಸ್ಪಷ್ಟಪಡಿಸುತ್ತದೆ, ಆದರೆ ಇದು ಈವರೆಗೂ ಹಾಗೇ ಇದೆಯಲ್ಲಾ?

ಇದು ದುರದೃಷ್ಟಕರ. ಭಿನ್ನಮತ ಮತ್ತು ವಾಕ್‌ಸ್ವಾತಂತ್ರ್ಯವನ್ನು ಹತ್ತಿಕ್ಕುವ ಪ್ರಯತ್ನಗಳು ನನಗೆ ತುರ್ತು ಪರಿಸ್ಥಿತಿಯ ದಿನಗಳನ್ನು ನೆನಪಿಸುತ್ತದೆ. ತುರ್ತುಪರಿಸ್ಥಿಯ ಸಮಯದಲ್ಲಿ ನಾನು ವಿದ್ಯಾರ್ಥಿಯಾಗಿದ್ದೆ. ಜನರು ಆಗ ಮುಕ್ತವಾಗಿ ಮಾತನಾಡಲು ಹೆದರುತ್ತಿದ್ದರು. ಇವತ್ತು ತುರ್ತುಪರಿಸ್ಥಿತಿ ಅಂತ ಇಲ್ಲ. ಆದರೆ ಈಗಲೂ ಜನ ತಮ್ಮ ಮನಸ್ಸಿನ ಮಾತುಗಳನ್ನು ಆಡಲು ಹೆದರುತ್ತಾರೆ.

ದೆಹಲಿ ಉಚ್ಚ ನ್ಯಾಯಾಲಯದ ಸದರಿ ತೀರ್ಪಿನ ಬಗ್ಗೆ ಕೊನೆಯದಾಗಿ ಏನು ಹೇಳುವಿರಿ?

ಸಂವಿಧಾನದತ್ತ ಅಭಿವ್ಯಕ್ತಿಯ ಹಕ್ಕು ಮತ್ತು ದೇಶದ ಸಾರ್ವಭೌಮತೆಗೆ ಧಕ್ಕೆಯಾಗಿದೆಯೇ ಇಲ್ಲವೇ ಎಂದು ಪರಿಶೀಲಿಸುವ ಸರ್ಕಾರದ ಹಕ್ಕು, ಇವೆರಡರ ನಡುವೆ ಒಂದು ಸಮತೋಲನ ಇರಬೇಕು. ಸರ್ಕಾರದ ಮೇಲಿನ ಟೀಕೆಯು ದೇಶದ ಮೇಲಿನ ಆಕ್ರಮಣವಲ್ಲ. ಸರ್ಕಾರ ಮತ್ತು ದೇಶ ಒಂದೇ ಅಲ್ಲ. ಹಾಗೇ ಸರ್ಕಾರ ಎಂದರೆ ಅದನ್ನು ನಡೆಸುವ ಜನ ಅಲ್ಲ. ಇವು ಗಮನಿಸಬೇಕಾದ ಬಹಳ ಮುಖ್ಯ ಅಂಶಗಳು. ಈ ತೀರ್ಪನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

(ಸಂಗ್ರಹಾನುವಾದ: **ರೇಖಾಂಬ ಟಿ ಎಲ್ ಮತ್ತು ಪದ್ಮಾಕ್ಷಿ ಕೆ**)

ಸಣ್ಣಕತೆ

ಬೊಗಸೆ ಮಣ್ಣು

–ಅಮರೇಶ ನುಗಡೋಣಿ

"ಶಿವರಾಜಣ್ಣ, ಏನು ಇವತ್ತನೂ ನೀವು ಹೈದ್ರಾಬಾದಿಗೆ ಬರಂಗ ಕಾಣದಿಲ್ಲ ಬುಡು" ಎಂದು ಮಲ್ಲೇಶ ಮನೆ ಬಾಗಿಲಿಗೆ ಬಂದು ಕೂಗಿದ. ಅವನು ಕೂಗಿದೇಟಿಗೆ ಶಿವರಾಜ ದಿಗ್ಗನೆದ್ದು ಬಾಗಿಲಿಗೆ ಬಂದ. ಹಂಗೇ ಹೊಸ್ತಿಲು ದಾಟಿ ಹೊರಬಿದ್ದ. ಅಷ್ಟರಲ್ಲೇ ಮತ್ತೆ ಮಲ್ಲೇಶ "ಇವತ್ತು ಬರದಾಗದಿಲ್ಲಂತ ಹೇಳ್ಬೇಕಣ್ಣಾ..? ಅಲ್ಲ ಜೀಪು ಹತ್ತುವವರಿಗೇನೂ ಬರಯಿಲ್ಲ. ಮತ್ತೇ ಗುಳೆ ಹೊಂಟಾರ ಸಿಟಿಗೆ" ಎಂದ ಗುಟಕ ತುಂಬಿಕೊಂಡ ಬಾಯಿಯಿಂದ. "ಮಲ್ಲ, ಅಪ್ಪ ಇವತ್ತನೂ 'ನಡಿರಿ' ಅಂತ ತಯ್ಯಾರಾಗಲಿಲ್ಲ. ಬುಟ್ಟು ಹೋಗಂಗಿಲ್ಲ" ಅಂದ ಶಿವರಾಜ. "ನಾಳೆ ಬರ್ತಿದ್ರ ಫೋನ್ ಮಾಡಣ್ಣಾ. ಮತ್ತೆ ನನ್ಗೊಂದು ಒಳ್ಳೆ ಮೊಬೈಲ್ ಸೆಟ್ ಬೇಕಣ್ಣಾ. ಹೈದ್ರಾಬಾದಿನ್ಯಾಗ ಕೊಡ್ಸು. ತಿಂಗ್ಳ ತಿಂಗ್ಳ ಹಣ ಕೊಡ್ತೀನಿ" ಎಂದು ಮಲ್ಲೇಶ ವಿನಂತಿ ಮಾಡಿದ. "ಆಯ್ತು ಬಾ ಕೊಡಸ್ತೀನಿ. ನೀನೇನು ದುಡಿದಿದ್ದೆಲ್ಲ ಮೊಬೈಲ್‌ಗೆ ಇಡ್ತಿದ್ದೇನು? ನೆಟ್ಟಗ ಇಟಗಳ್ಳಕ ಕಲಿ" ಎಂದು ಹೇಳಿ ಕಳಿಸಿದ ಶಿವರಾಜ, ಗಳಿಗೆ ಹೊತ್ತು ಮನೆ ಮುಂದ ನಿಂತ. ಬ್ಯಾಸಿಗೆ ಸರದಿತ್ತು, ಆಶಾಡದ ಗಾಳಿ ಶುರುವಾಗಿತ್ತು. ಊರುಕೇರಿಯಲ್ಲಿ ಮತ್ತೆ ಕೆಲ್ಸಕ್ಕೆ ಸಿಟಿಗಳ ಕಡೆ ಹೊರಟದ್ದು ಕಂಡಿತು. ಮೊನ್ನೆ, ನಿನ್ನೆ, ಇವತ್ತು ಮೂರುದಿನದಿಂದ ಹೊರಡಲು ಬ್ಯಾಗ್ ಸಿದ್ಧಮಾಡಿಕೊಂಡಿದ್ದರೂ ತಂದೆ ತಮ್ಮಿಂದ ಬರಲು ಸಿದ್ಧನಾಗಲಿಲ್ಲ. ಶಿವರಾಜ ಸಂಕಟ ಪಡುತ್ತಿದ್ದ. ರಾತ್ರಿ ಹತ್ತು ಗಂಟೆ ಮೇಲಾಯಿತ್ತು. ಊರಿಂದ ಸಿಟಿಗೆ ಜೀಪುಗಳು ಹೋಗುವ ಸದ್ದು ಕೇಳಿಬಂತು.



ಚಿತ್ರ: ಗುಜ್ಜಾರ್

ಮನೆಯೊಳಗೆ ಬಂದ. ತಂಗಿ ಸರಸ್ವತಿ ನೆಲದ ಮ್ಯಾಲೆ ಮಲಗಿದ್ದಳು. ತಂದೆ ಗ್ವಾಡೆಗೆ ಬೆನ್ನಾನಿಸಿಕೊಂಡು ಚಕ್ಕಳ ಮುಕ್ಕಳ ಹಾಕಿಕೊಂಡು ಕುಂತಿದ್ದ. ಮಲ್ಲೇಶ ಬಂದು ಹೋದದ್ದು ಅಪ್ಪನೂ ನೋಡಿದ್ದ. ಹಿಂಗಾಗಿ ಶಿವರಾಜ ಬಾಗಿಲಾಕಿ, ಲೈಟ್ ತೆಗೆದು ಮಲಗಿದ. ಮೂರು ದಿನ ರಾತ್ರಿ ಜೀಪು ಹತ್ತುವುದು ಆಗಲಿಲ್ಲ. ಚಿಂತೆಯಿಂದ ದಣಿದು ಹೋಗಿದ್ದನಲ್ಲ. ನೆಲಕ್ಕೆ ಮೈಕೊಟ್ಟು ಮಲಗಿಬಿಟ್ಟ.

ಮಕ್ಕಳಿಬ್ಬರು ಹತಾಶೆಯಿಂದ ದಣಿದು ಮಲಗಿದ್ದನ್ನು ನೋಡುತ್ತ ಕುಂತಿದ್ದ ಸಂಗಪ್ಪ. ಕತ್ತಲು ತಿಳಿಯಾಗತೊಡಗಿತು. ಮೂರುದಿನದಿಂದ ಹೈದ್ರಾಬಾದಿಗೆ ಹೋಗಲು ತುದಿಗಾಲ ಮ್ಯಾಲೆ ನಿಂತಿದ್ದ ಮಕ್ಕಳ ಆಶೆಗೆ ಸಂಗಪ್ಪ ಕಲ್ಲಾಕುತ್ತ ಕಳೆದಿದ್ದ. ತನ್ನಿಂದ ಮಕ್ಕಳಿಗೆ ಸಂಕಟವಾಯ್ತಲ್ಲವೆಂದು ಮನಸ್ಸಿಗೆ ಅನ್ನಿಸಿದ್ದೇ ತಡ ದುಃಖ ಒತ್ತಿ ಬಂತು. ಕಣ್ಣುಗಳಲ್ಲಿ ನೀರು ಮೂಡಿದವು. ತಲೆಗೆ ಸುತ್ತಿಕೊಂಡಿದ್ದ ಸೆಲ್ಲೆಯಿಂದ ಒರೆಸಿಕೊಂಡ. ಆತನಿಗೂ ಸಂಕಟವಾಯಿತು. 'ಬೆಟ್ಟದ ಮಲ್ಲಯ್ಯ' ಎಂದು ಊರ ದೇವರಿಗೆ ಕೈ ಮುಗಿದ. ಹೆಂಡತಿ ತುಂಗಮ್ಮ ನೆನಪಾದಳು. ಮೊನ್ನೆ ಕನಸಿನ್ಯಾಗ ಬಂದು 'ಮಗ್ಳಿಗಿ ಮದುವೆ ಮಾಡಿಬುಡು. ಮಗನ ಜತಿನೆ ನೀನು ಇರು' ಎಂದು ಹೇಳಿದಂಗ ಕಾಣಿಸಿತು. ಕತ್ತಲಲ್ಲಿ ಮಲಗಿದ್ದ ಮಕ್ಕಳಿಬ್ಬರನ್ನು ನೋಡಿದ. ಕರುಣೆ ಉಕ್ಕಿತು. 'ಅಪ್ಪ, ಈ ಒಂದೂವರೆ ವರ್ಸದಿಂದ ಜನ್ರು ಕೊರೊನಾ ಹಾವಳಿಯಿಂದ ತಪ್ಪಿಸಿಕೊಳ್ತಿವೋ ಬಲಿಯಾಗ್ತಿವೋ ಅಂತ ಎದೆಗುಂದ್ಯಾರ. ಜೀವ ಕೈಯಾಗ ಹಿಡಕೊಂಡೇ ಬಾಳ್ವೆ ನಡಿಸ್ಯಾರ. ಅಮ್ಮನ ಗತಿ ಏನಾಯ್ತು? ನಮ್ಗ ಅಮ್ಮನ್ನ ಉಳಿಸಿಕೊಳ್ಳಲಾಗಲಿಲ್ಲ. ನೀನೂ ಒಂದೂವರೆ ವರ್ಸದಿಂದ ಈ ಮನ್ಯಾಗ, ಈ ಊರಾಗ ಒಂಟಿಯಾಗಿದ್ದು ಜೀವ ಉಳಿಸಿಕೊಂಡಿದ್ದೇ ನಮ್ಮ ಪುಣ್ಯ. ಇನ್ನ ಸಾಕು! ನಡಿ ನಮ್ಮಿಂದ. ಜತಿಗಿ ಬದುಕಮು' ಮಗ ಶಿವರಾಜ ಹೇಳಿದ್ದು ಇನ್ನೂ ಕೇಳುತ್ತಲೇ ಇತ್ತು. 'ಅಪ್ಪ ನಿನ್ನ ಒಬ್ಬಾತನ್ನ ಬುಟ್ಟು ನಾವು ಸಿಟಿಗೆ ಹೋದ್ರೆ ಜನ ಏನಂತಾರ ಅಂಬೋದು ಇರ್ಲಿ. ನಮ್ಮ ಮನ್ಸಿಗೆ ನೋವು ಆಗ್ತದ. ಸಿಟಿಯಲ್ಲಿರದು ನಿನ್ಗ ರೂಢಿಯಾಗ್ಯಾದಲ್ಲ. ನಡಿ ಹೋಗಮು' ಮಗಳು ಸರಸ್ವತಿ ಕೈ ಹಿಡಿದು ಹೇಳಿದ್ದಳು. ವಾರದಿಂದ ಚಿಂತೆ ಮಾಡ್ತಿದ್ದ. ಊರುಕೇರಿಯಲ್ಲಿ ವಯಸ್ಸಾದ ನಾಕಾರು ಮಂದಿ 'ಮಕ್ಳು ನಮ್ಮನ್ನ ಈ ಕೊಂಪ್ಯಾಗ ಕೂಡಿಟ್ಟು ತಾವು ಪಟ್ಟಣಕ್ಕ ಹೋದ್ರು ಸಂಗಪ್ಪ' ಎಂದು ತಮ್ಮ ಮಕ್ಕಳಿಗೆ ಶಾಪ ಹಾಕುತ್ತಿದ್ದುದನ್ನು ಕೇಳಿದ್ದ. ಅಂತದರಲ್ಲಿ ಮಕ್ಕಳಿಬ್ಬರು ಕರೆದೊಯ್ಯಲು ನಿಂತಿದ್ದನ್ನು ನೆನೆಯುತ್ತಿದ್ದ. ಆದರೂ ಊರು, ಮನೆ, ಹೊಲ ಬಿಟ್ಟು ಹೋಗಲು ಉಮೇದಿ ಮಾಡುತ್ತಿರಲಿಲ್ಲ. ಈ ವರ್ಷದ ಊದ್ದಕ್ಕೂ ಇಲ್ಲೇ ಇದ್ದು ಒಂಟಿತನ ಅನುಭವಿಸಿದ್ದ. ಇದು ಜುಗುಪ್ಸೆ ಮೂಡಿಸಿತ್ತು, ಖರೆ. ಆದ್ರೂ ಮಕ್ಕಳಿಂದ ನಗರಕ್ಕೆ ಹೋಗಲು ಮನಸ್ಸು ಸಿದ್ಧವಾಗುತ್ತಿರಲಿಲ್ಲ. ಸಂಗಪ್ಪನಿಗೆ ಹೆಂಡತಿ ನೆನಪಾದಳು. ಆಕೆ ಬದುಕಿದ್ದರೆ ತನ್ನ ಜತೆ ಊರಲ್ಲಿ ಇರುತ್ತಿದ್ದಳೇನು? ಎಂದು ಯೋಚಿಸಿದ. ಅನುಮಾನವಾಯ್ತು, ಆಕೆ ಮಕ್ಕಳಿಂದ ನಗರಕ್ಕೇ ಹೋಗುತ್ತಿದ್ದಳು ಅನ್ನಿಸಿತು...

> ಸಂಗಪ್ಪನಿಗೆ ಅದೆಲ್ಲ ನೆನಪಾಗಿ ಮತ್ತೊಮ್ಮೆ ಆ ಸನ್ನಿವೇಶ ಮನದಲ್ಲಿ ನಡೆದು ಹೋಯಿತು. ಊರಮಂದಿಗೆ ಮರುದಿನವೇ ವಿಷಯ ತಿಳಿದಿತ್ತು. ವಾರವಪ್ಪತ್ತಿನಲ್ಲಿ ಊರಲ್ಲಿ ಆರೇಳು ಮಂದಿ ಕೊರೊನಾಗೆ ಜೀವತೆತ್ತರು. ಶವಗಳು ಊರಿಗೆ ಕೆಲವೇ ಬಂದವು. ಯುಗಾದಿಗೆ ಲಾಕ್‌ಡೌನ್ ಶುರುವಾದದ್ದು ಮೂರು ತಿಂಗಳು ಮನೆಬಿಟ್ಟು ಮಂದಿ ಹೊರ ಹೋಗಲಿಲ್ಲ. ವಾತಾವರಣ ತಿಳಿಯಾಗುತ್ತಿದ್ದಂತೆ ಆ ವರ್ಷ ಮಳೆ ವಾಡಿಕೆಗಿಂತ ಹೆಚ್ಚೆ ಸುರಿಯುವಂತೆ ಕಂಡಿತು. ಮತ್ತೆ ಸಿಟಿ ಸಹವಾಸ ಬ್ಯಾಡಂತ ಊರಿಗೆ ಬಂದ ಮಂದಿ ಮತ್ತೇ ಹೊರಟು ನಿಂತರು.

ಆರು ವರ್ಷದ ಹಿಂದೆ ಮಕ್ಕಳು, ಹೆಂಡತಿ ಜತೆ ಸಂಗಪ್ಪನಿಗೂ ಗುಳೆ ಹೋಗುವುದು ಬಂತು. ಅದಕ್ಕಿಂತ ಮೊದ್ಲೇ ಮಗ, ಮಗಳು ತಾಲ್ಲೂಕಿನಲ್ಲಿದ್ದು ಕಾಲೇಜು ವಿದ್ಯಾಭ್ಯಾಸ ಮುಗಿಸಿಕೊಂಡು ಊರಿಗೆ ಬಂದರು. ಸರ್ಕಾರಿ ಕಾಲೇಜು, ಹಾಸ್ಟೇಲ್‌ನಲ್ಲಿದ್ದೇ ಓದಿದ್ದರು. ಸಂಗಪ್ಪನಿಗೆ ತಂದೆ ಕೊಟ್ಟ ಎರಡು ಎಕರೆ ಮಳೆ ನೀರಿಗೆ ಬೆಳಿತಿದ್ದ ಭೂಮಿಯನ್ನೇ ನಂಬಿ ಬದುಕಿದ್ದ. ವರ್ಷಕ್ಕೊಂದು ಬೆಳೆ. ಹೊಟ್ಟೆ ಬಟ್ಟೆಗೆ ಹೊಂದಿಸಿಕೊಂಡು ನಡೆದಿದ್ದ. ಮಗ ಶಿವರಾಜ ಕೆಲ್ಸ ಹುಡುಕಿ ಹೈದರಾಬಾದಿಗೆ ಹೋದ. ತಾನು ಕೆಲ್ಸ ಹುಡುಕಿಕೊಂಡು ತಂಗಿ ಸರಸ್ವತಿಗೂ ಕೆಲ್ಸ ಹುಡುಕಿ ಕರೆದುಕೊಂಡು ಹೋದ. ಎರಡು ವರ್ಷ ಕಳೆದಿರಬೇಕು ಮಗಳು 'ಅಮ್ಮ, ನೀನು ಬಂದು ಬಿಡಮ್ಮ. ಅಣ್ಣ, ನನ್ಗ ಅಡಿಗೆ ಮಾಡಲು ಬಾ. ನಮ್ಗ ಕೆಲ್ಸ ಬಾಳಿರ್ತದ. ಓಡಾಟ ಜಾಸ್ತಿ ಸಿಟಿಯಲ್ಲಿ' ಎಂದು ಬೆನ್ನತ್ತಿ ಹೆಂಡತಿಯನ್ನು ಕರೆದೊಯ್ಯಲು ಮಕ್ಕಳು ಪ್ರಯತ್ನಿಸಿದರು. 'ನಿಮ್ಮಪ್ಪ ಒಬ್ಬಾತ ಇಲ್ಲಿ ಹೆಂಗಿರ್ತನ ಮಗಳೆ? ಅನ್ನ, ನೀರಿಗೆ ಪರದಾಡ್ಬೇಕಾಗ್ತದ.....' ಎಂದು ಹೆಂಡತಿ ಚಿಂತಿಸಿದ್ದಳು. ಶಿವರಾಜ 'ಅಪ್ಪ' ನೀನೂ ಬಂದು ಬಿಡು. ಕೆಲ್ಸ ಕೊಡುಸ್ತೀನಿ' ಎಂದು ಹುರಿದುಂಬಿಸಿದ. ಸಂಗಪ್ಪನಿಗೆ ಈಗಾಗಲೇ ಊರಲ್ಲಿನ ಸಂಸಾರಗಳು ಹೊಟ್ಟೆಪಾಡಿಗೆ ಸಿಟಿಗೆ ಗುಳೆ ಹೋಗಿದ್ದವರ ಪಾಡು ಅರಿತಿದ್ದ. ಅದನ್ನು ಕೇಳಿ ಮಕ್ಕಳಿಂದ ಹೋಗಲು ಮನಸ್ಸು ಮಾಡಲಿಲ್ಲ. 'ಬೇಕಾದ್ರೆ ನಿಮ್ಮಮ್ಮನ್ನು ಆಸರೆಗೆ ಕರಕೊಂಡು ಹೋಗ್ರಿ. ನಾನು ನನ್ನ ತಮ್ಮನ ಮನ್ಯಾಗ ಉಂಡುಕೊಂಡಿರ್ತೀನಿ' ಎಂದು ಹೇಳಿದ್ದ. ಹೆಂಡತಿ ತುಂಗಮ್ಮ ಮಕ್ಕಳ ಕರೆಗೆ ಓಗೊಟ್ಟು ನಿಂತಳು. ಆ ಎರಡು ವರ್ಷ ಮಳೆಯಾಗದೆ ಉತ್ತುವುದು, ಬಿತ್ತುವುದು ನಿಂತೇ ಹೋಯಿತ್ತು. ಹೆಂಡತಿ ತುಂಗಮ್ಮ ಮಕ್ಕಳು ಕರೆಯುತ್ತಿದ್ದರಲ್ಲ, 'ನಾನು ಹೋಗ್ತಿನಿ. ನೀನಿದ್ದು ಇಲ್ಲಿ ಏನ್ಮಾಡ್ತಿದ್ದಿ ನಡಿ' ಎಂದು ಹೈದ್ರಾಬಾದಿಗೆ ಕರೆದುಕೊಂಡೇ ನಡೆದಳು. ಹೋಗುವಾಗ ತಮ್ಮನಿಗೆ ಹೊಲ ಪಾಲಿಗೆ ಮಾಡಲು ಕೊಟ್ಟಿದ್ದ. ಮಗ ಶಿವರಾಜ ತಿಂಗಳೊಪ್ಪತ್ತಿನಲ್ಲಿ ಗೇಟ್‌ಕೀಪರ್ ಕೆಲ್ಸವನ್ನು ತಂದೆಗೆ ಕೊಡಿಸಿದ. ಸಂಗಪ್ಪ ಕೊಟ್ಟ ಕುದುರೆ ಏರಿಬಿಟ್ಟ. ಆರು ತಿಂಗಳೊಳಗಾಗಿ ಮಾಲೀಕರಿಂದ 'ಸಂಗಪ್ಪ ಕೆಲ್ಸಗಾರ' ಎಂದು ಕರೆಸಿಕೊಂಡ. ಚಿಕ್ಕಮನೆ ಬಾಡಿಗೆ ಹಿಡಿದು ನಾಲ್ವರು ಆರು ವರ್ಷ ಕಾಲ ದುಡಿಯುತ್ತ ಕಳೆದರು. ಊರಲ್ಲಿದ್ದ ಹೊಲವನ್ನು ತಮ್ಮನಿಗೆ ಕೊಟ್ಟಿದ್ದನ್ನಲ್ಲ ಮನೆಯನ್ನೂ ಬಳಸಲು ಹೇಳಿದ್ದ. ವರ್ಷದಲ್ಲಿ ಒಮ್ಮೆಯಾದ್ರೂ ಸಂಗಪ್ಪ ಬಂದು ಹೋಗ್ತಿದ್ದ. ತಕ್ಕಮಟ್ಟಿಗೆ ತಮ್ಮ ಹೊಲದಲ್ಲಿ ಬೆಳೆದಿದ್ದ ಪಾಲೂ ಕೊಡ್ತಿದ್ದ. ತಮ್ಮನಿಗೆ ಕಾಲು ಮುರಿದು, ಅದು ಸರಿ ಹೋಗದೆ ಆತ ಊನಗೊಂಡ. ತಮ್ಮನ ಮಗ ಸಂಗಪ್ಪನ ಹೊಲವನ್ನು ಉತ್ತಿ ಬಿತ್ತಿದರೂ ಪಾಲು ನ್ಯಾಯಯುತವಾಗಿ ಕೊಡಲಿಲ್ಲ. ಸಂಗಪ್ಪ ತುಂಗಮ್ಮರಿಗೆ ಸಿಟ್ಟು, ಸಂಕಟವಾಯ್ತು. ಆಗಲೇ ಸಂಗಪ್ಪ ಕೆಲ್ಸಬುಟ್ಟು ಊರಿಗೆ ಬಂದು ಬಿಡಬೇಕೆಂದು ಕೇಳಿದ. ಮಕ್ಕಳು, ಹೆಂಡತಿ ಬಿಡಲಿಲ್ಲ. ತುಂಗಮ್ಮ ಮಗಳಿಗೆ ಮದುವೆ ಮಾಡಬೇಕೆಂಬ ಚಿಂತೆಯಲ್ಲಿದ್ದಳು. ಆ ವರ್ಷವೇ ಮೊದಲ ಸಲ ಕೊರೊನಾ ವೈರಸ್ ದಾಳಿಗೆ ಹೈದ್ರಾಬಾದ್ ಸಿಟಿಯ ಮಂದಿ ತತ್ತರಿಸಿದರು. ಇನ್ನೂ ಯುಗಾದಿ ಬರುವುದಿತ್ತು. ಬೇಸಿಗೆ ಶುರುವಾಗಲಿತ್ತು. ಲಾಕ್‌ಡೌನ್ ಮಾಡಿತು ಸರ್ಕಾರ. ಮಗ ಶಿವರಾಜ ಹುಷಾರಿ ಹುಡುಗ. ಎಲ್ಲರನ್ನು ಕರಕೊಂಡು, ಅಲ್ಪಸ್ವಲ್ಪ ಬಳಕೆ ಸಾಮಾನುಗಳೊಂದಿಗೆ, ಮನೆಬೀಗ ಹಾಕಿ ಊರಿಗೆ ಕರೆತಂದು ಬಿಟ್ಟ. ಆದ್ರೂ ಊರು ಮುಟ್ಟುವುದರಲ್ಲಿ ಬೀದಿ ನಾಯಿಪಾಡು ಅನುಭವಿಸಿದ್ದರು......

"ಅಪ್ಪ, ಮಲಗು. ಚಿಂತೆ ಮಾಡಾಕ ಏನದ? ನಿನ್ಗ ಹೈದ್ರಾಬಾದು ಹೊಸದಲ್ಲ, ಕೆಲ್ಸನೂ ಹೊಸದಲ್ಲ. ಜತೆಗೆ ನಾವಿರ್ತಿವಲ್ಲ? ಕಳೆದ ವರ್ಸ ಊರಲ್ಲಿದ್ದು ಅನುಭವಿಸಿದ್ದು ಸಾಕಾಗಿಲ್ಲೇನು?" ಎಂದು ಎಚ್ಚರಗೊಂಡ ಮಗಳು ಕೇಳಿದಳು. ಸಂಗಪ್ಪ ಮಾತಾಡಲಿಲ್ಲ. ಸರಸ್ವತಿ ಬಚ್ಚಲಕ್ಕೆ ಹೋಗಿ ಬಂದಳು. ಸಂಗಪ್ಪ ಮೆಲ್ಲಕ "ಮಗ್ಳೆ, ನೀನು ನನ್ನ ಜತೆ ಇಲ್ಲೇ ಊರಾಗ ಇರ್ತಿದ್ದೇನು?" ಎಂದು ಕೇಳಿದ. ಮಗಳು ಮಲಗುತ್ತ, "ನಮ್ಮೂರಾಗ ಏನೈತೆ

ಅಂತ ಇರ್ಬೇಕು? ಹೋದ ವರ್ಸ ಲಾಕ್‌ಡೌನ್ ಆದಾಗ ಊರಿಗೆ ಬಂದೆವು. ಕೊರೊನಾ ಸೋಂಕು ತಗುಲಿ ಅಮ್ಮ ತೀರಿಕೊಂಡ್ಳು. ಅದೇ ಚಿಂತ್ಯಾಗ ನೀನು ಇಲ್ಲೇ ಊರಲ್ಲಿ ಉಳಕೊಂಡಿ. ನಾನು ಅಣ್ಣ ನಾಲ್ಕೂ ತಿಂಗಳ ಮ್ಯಾಲೆ ಮತ್ತೆ ಹೋದೆವು. ನೀನು ಒಲ್ಲೇ ಅಂತ ಹಟ ಹಿಡಿದು ಇಲ್ಲೇ ಉಳಕಂಡಿದ್ದಿ. ಹೊಲವನ್ನು ಬಿತ್ತಿ ಬೆಳದಿ, ಕರೆ. ಲಾಭ ಆಗಿದೆಷ್ಟು? ನೀನೇ ಹೇಳಿದ್ದಿ ಆರೇಳು ಸಾವಿರ ಉಳಿತು ಅಂತ. ಸಿಟಿಯಲ್ಲಿ ನಿನ್ನ ಗೇಟ್‌ಕೀಪರ್ ಕೆಲ್ಸಕ್ಕ ತಿಂಗಳಿಗೇ ಆರೇಳು ಸಾವಿರ ಪಗಾರ ಸಿಗತಿತ್ತಾ? ಇಲ್ಲಿದ್ದು ಒಂಟಿಯಾಗಿ ಅನ್ನಕ್ಕೆ, ನೀರಿಗೆ ಪರದಾಡಿದ್ದಿ. ನಾನು ಎಳ್ಳಮಾಸಿಗೆ ಬಂದು ನಿನ್ನ ಮಾತಾಡಿಸಿದಾಗ ನಿನ್ನ ಸ್ಥಿತಿ ಹೆಂಗಿತ್ತು. ಊರಾಗಿನ ಮಂದಿ 'ಏನವ್ವ ದುಡಿತಿದ್ದೀರಿ ಆದ್ರೆ ತಂದೆನ್ನ ಅನಾಥ ಮಾಡಿ ಹೋಗಿದ್ರೆಲ್ಲ?' ಅಂತ ಮಾರಿಗೆ ಬಡದಂಗ ಹೇಳಿದ್ರು. ಈಗ ಮಲಗು ಚಿಂತೆ ಸಾಕು" ಎಂದು ಸಿಟ್ಟು, ಬೇಸರದಿಂದಲೇ ಹೇಳಿದಳು.

ಸಂಗಪ್ಪ ಎದ್ದು ಕತ್ತಲಲ್ಲೇ ಮನೆಯಿಂದ ಹೊರಹೋಗಿ ಕಾಲ್ಮಡಿದು ಬಂದು ಕುಂತ. ನಿದ್ದೆ ಮನಸ್ಸಿನ ಬಳಿ ಸುಳಿಯಲಿಲ್ಲ. ಹೆಂಡತಿ ನೆನಪಾದಳು. ಕೊರೊನಾ ನಿನ್ನ ಒಯ್ಯುವ ಬದ್ಲು ನನ್ನ ಒಯ್ದಿದ್ರೆ ಬೇಸಿತ್ತು. ಹೊಲ್ದಾಗ ಮಣ್ಣಾಗ್ತಿತ್ತು. ನನ್ನ ಹೊಲ್ದಾಗ, ಮಣ್ಣಿನಲ್ಲಿ ತಣ್ಣಗಿರ್ತಿದ್ದೆ. ಆ ಪುಣ್ಯ ನಿನಗೆ ಬಂತು! ನನ್ಗ ಬರವಲ್ದು– ಅಂದುಕೊಂಡ.....

ಮೊದಲ ಸಲ ಕೊರೊನಾ ಬ್ಯಾನಿ ಮನುಷ್ಯರಿಗೆ ಗಂಟು ಬಿದ್ದಿತ್ತಲ್ಲ, ಆಗ ಮನೆಮಂದಿ ಹೈದರಾಬಾದಿನಿಂದ ಊರಿಗೆ ಬಂದು ತಲುಪಿದ್ದೇ ಪುಣ್ಯ ಅನ್ನಿಸಿಬಿಟ್ಟಿತು. ಯಾಕಂದ್ರ ಹತ್ತಾರು ವರ್ಷಗಳಿಂದ ಊರುಕೇರಿ ಮಂದಿ ಗುಳೆ ಹೋಗುತ್ತಿದ್ದರಲ್ಲ, ಆಗ ಊರುಕೇರಿ ಅರ್ಧಕರ್ಧ ಖಾಲಿಯಾಗಿತ್ತು. ಕೇರಿಯಂತೂ ಬಣಬಣ. ಕೊರೊನಾ ಹಬ್ಬಿದ್ದೇ ತಡ ಎಲ್ಲೆಲ್ಲಿಂದಲೋ ಊರಿಗೆ ಬಂದು ನಿಂತರು. ಊರುಕೇರಿ ತುಂಬಿ ಗಿಜಿಗಿಜಿ ಅಂತು. ಸಂಗಪ್ಪ ತನ್ನ ಊರಿನ ಮಂದಿಯನ್ನೇ ತಿರುಗಾಡಿ ಹೊಸಬರನ್ನು ನೋಡಿದಂತೆ ನೋಡಿ ಬರ್ತಿದ್ದ. ಒಂದು ಕಾಲಕ್ಕ ಊರು ದಾಟಿ ಇನ್ನೊಂದು ಊರು ನೋಡಿರದ ಮಂದಿ ಗುಳೆ ಹೋಗಿ ದೊಡ್ಡ ದೊಡ್ಡ ಸಿಟಿಯಲ್ಲಿ ಜೀವನ ನಡೆಸುವುದನ್ನು ಖುಷಿಯಿಂದ ಹಂಚಿಕೊಳ್ಳುತ್ತಿದ್ದರು. ತುಂಗವ್ವಂತೂ ಕಬರು ತಪ್ಪಿ ಊರುಕೇರಿ ತಿರುಗಿ, ಊರಿಗೆ ಬಂದವರನ್ನೆಲ್ಲ ಮಾತಾಡಿಸಿ ಬರತೊಡಗಿದ್ದಳು. ಮಗ, ಮಗಳಿಗೆ ತಂದೆ ತಾಯಿನ್ನ ಹಿಡದು ಮನೆಯಲ್ಲಿ ಕೂಡಿ ಹಾಕುವುದಕ್ಕೆ ಸಾಕುಸಾಕಾಗಿತ್ತು. ಕೊರೊನಾ ಸೋಂಕು ತಗುಲೀತೆಂದು ಮಕ್ಕಳಿಗೆ ಭಯ. ಅದರಲ್ಲಿ ಗುಳೆ ಹೋದವರು ಮರಳಿ ಸಿಟಿಯಿಂದ ಊರಿಗೆ ಬಂದವರಿಂದಲೇ ಕೊರೊನಾ ಹಬ್ಬುತ್ತಿದೆ ಅಂತ ಸರ್ಕಾರ ಎಚ್ಚರಿಸುತ್ತಲೇ ಇತ್ತು. ಆಶಾ ಕಾರ್ಯಕರ್ತೆ, ಅಂಗನವಾಡಿ ಹೆಣ್ಣುಮಕ್ಕಳು ಮನೆಮನೆಗೆ ತಿರುಗಿ ಹೆದರಿಸಿ ಒಳಗೇ ಇರುವಂತೆ ತಾಕೀತು ಮಾಡುತ್ತಿದ್ದರು. ಪಂಚಾಯಿತಿ, ಪೋಲಿಸ್ರು ಊರು ಸುತ್ತಿ ಮಂದಿಯನ್ನು ಹೊರ ಬರದಂಗ ಕಾಯ್ತಿದ್ದರು. ಹಿಡಿದಿಡಿದು ಮನುಷ್ಯರಿಗೆ ಟೆಸ್ಟ್ ಮಾಡಿಸಿ, ಕಾಯಿಲೆ ಕಂಡರೆ ಊರ ಶಾಲೆಯಲ್ಲಿ ಕ್ವಾರಂಟೈನ್ ಮಾಡ್ತಿದ್ದರು. ವಾರ ಕಳಿತಿದ್ದಂಗೆ ಗುಳೆ ಹೋಗಿ ಬಂದ ಮಂದಿಯನ್ನು ಕ್ವಾರಂಟೈನ್ ಮಾಡುವುದು ಹೆಚ್ಚಾಯಿತು. ತುಂಗಮ್ಮನಿಗೆ ಟೆಸ್ಟ್ ಮಾಡಿದಾಗ ಪಾಜಿಟಿವ್ ಬಂದು ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ಒಯ್ದು ಬಿಡಲಾಯಿತ್ತು. ಶಿವರಾಜ, ಸರಸ್ವತಿ, ಸಂಗಪ್ಪರನ್ನು ಮನೆಯಲ್ಲೇ ಕ್ವಾರಂಟೈನ್ ಮಾಡಿಬಿಟ್ಟರು.

ಸಂಗಪ್ಪನಿಗೆ, ಮಕ್ಕಳಿಗೆ ಸರ್ಕಾರಿ ಆಸ್ಪತ್ರೆಗೆ ಹೋಗಲು ನಿರ್ಬಂಧಗಳಿಂದ ಸಾಧ್ಯವಾಗಲಿಲ್ಲ. ಊರನ್ನು, ಕೊರೊನಾ ಸೋಂಕಿತರನ್ನು ನಿಯಂತ್ರಿಸುತ್ತಿದ್ದ ಆಶಾ ಕಾರ್ಯಕರ್ತೆಯನ್ನು ಶಿವರಾಜ ಸಂಪರ್ಕಿಸಿ ತಾಲ್ಲೂಕಿನಲ್ಲಿದ್ದ ತಾಯಿಯನ್ನು ನೋಡಿ ಸಮಾಚಾರ ತಿಳಿಸುವಂತೆ ಬೇಡಿಕೊಂಡ. ಆಕೆ ಎರಡೋ, ಮೂರೋ ದಿನಕ್ಕೊಮ್ಮೆ ಬಂದು ಸಂಗಪ್ಪನ ಮನೆಗೆ ತುಂಗಮ್ಮಳ ಆರೋಗ್ಯ ಸ್ಥಿತಿಯನ್ನು ತಿಳಿಸುತ್ತಿದ್ದಳು. ಹತ್ತು ದಿನಗಳಲ್ಲಿ ಮೂರು ಸಲ ಬಂದು ಸುದ್ದಿ ತಿಳಿಸಿದಳು. ಗುಣವಾಗುತ್ತಿದ್ದಾಳೆಂದು ಹೇಳುತ್ತಿದ್ದಳು. ಮೊಬೈಲ್‌ನಲ್ಲಿ ಫೋಟೋ ತೆಗೆದುಕೊಂಡು ಬಂದೂ ತೋರಿಸುತ್ತಿದ್ದಳು. ಮನೆಮಂದಿಗೆ ಸಮಾಧಾನ ತರುತ್ತಿತ್ತು.

ಒಂದು ಮುಂಜಾನೆ ಶಿವರಾಜನಿಗೆ ಕರೆ ಬಂತು. 'ತಾಲ್ಲೂಕು ಸರ್ಕಾರಿ ಆಸ್ಪತ್ರೆಗೆ ಬನ್ನಿ' ಎಂದಷ್ಟೇ ವಿಷಯ ತಿಳಿಸಿದ್ದರು. ಮನೆಮಂದಿಗೆ ಖುಷಿ, ಒಳಗೆ ಭಯವೂ ಸುಳಿದಾಡಿತು. ಶಿವರಾಜ ಯಾರದ್ದೊ ಬೈಕ್ ಪಡೆದು ಹೋದ. ಸರಸ್ವತಿ, ಸಂಗಪ್ಪ ದಾರಿಕಾಯುತ್ತ ಕುಳಿತಿದ್ದರು. ಸಂಜೆಯಾದರೂ ಸುಳಿವಿಲ್ಲ. ರಾತ್ರಿ ಒಂಬತ್ತಕ್ಕೆ ಶಿವರಾಜ ಹೌಹಾರಿ ಮನೆಗೆ ಬಂದ! ಊರ ಹೊರಗೆ ಅಂಬುಲೆನ್ಸ್ ನಿಲ್ಲಿಸಿ ಬಂದಿದ್ದ. ತುಂಗಮ್ಮ ಕೊರೊನಾಗೆ ಬಲಿಯಾಗಿದ್ದಳು. ಸಂಗಪ್ಪ ಹೆಂಡತಿಯನ್ನು ತನ್ನ ಹೊಲದಲ್ಲಿ ಮಣ್ಣು ಮಾಡಿ, ಮಕ್ಕಳೊಂದಿಗೆ ಮಧ್ಯರಾತ್ರಿ ಮನೆಗೆ ಬಂದು ಮಲಗಿದ.....

ಸಂಗಪ್ಪನಿಗೆ ಅದೆಲ್ಲ ನೆನಪಾಗಿ ಮತ್ತೊಮ್ಮೆ ಆ ಸನ್ನಿವೇಶ ಮನದಲ್ಲಿ ನಡೆದು ಹೋಯಿತು. ಊರಮಂದಿಗೆ ಮರುದಿನವೇ ವಿಷಯ ತಿಳಿದಿತ್ತು. ವಾರವಪ್ಪತ್ತಿನಲ್ಲಿ ಊರಲ್ಲಿ ಆರೇಳು ಮಂದಿ ಕೊರೊನಾಗೆ ಜೀವತೆತ್ತರು. ಶವಗಳು ಊರಿಗೆ ಕೆಲವೇ ಬಂದವು. ಯುಗಾದಿಗೆ ಲಾಕ್‌ಡೌನ್ ಶುರುವಾದದ್ದು ಮೂರು ತಿಂಗಳು ಮನೆಬಿಟ್ಟು ಮಂದಿ ಹೊರ ಹೋಗಲಿಲ್ಲ. ವಾತಾವರಣ ತಿಳಿಯಾಗುತ್ತಿದ್ದಂತೆ ಆ ವರ್ಷ ಮಳೆ ವಾಡಿಕೆಗಿಂತ ಹೆಚ್ಚೆ ಸುರಿಯುವಂತೆ ಕಂಡಿತು. ಮತ್ತೆ ಸಿಟಿ ಸಹವಾಸ ಬ್ಯಾಡಂತ ಊರಿಗೆ ಬಂದ ಮಂದಿ ಮತ್ತೇ ಹೊರಟು ನಿಂತರು. ಶಿವರಾಜ, ಸರಸ್ವತಿ ಹೈದರಾಬಾದಿಗೆ ಹೋಗಲು ಸಿದ್ಧರಾದರು. ಸಂಗಪ್ಪ ಮನೆಗೆ ಬಂದಿದ್ದರಿಂದ ತಮ್ಮನಿಗೆ ಹೇಳಿ 'ಈ ವರ್ಷ ನಾನೇ ಬಿತ್ತಿ ಬೆಳಿತಿನಿ' ಎಂದು ದಗದ ಶುರುಮಾಡಿಕೊಂಡು ನಿಂತ. ಮಕ್ಕಳಿಗೆ ದಿಕ್ಕು ತೋರಲಿಲ್ಲ. ಊರಲ್ಲಿ ಒಂಟಿಯಾಗಿ ತಂದೆಯನ್ನು ಬಿಡಲು ಹೆದರಿದರು. ಕೂಳಿನ ಸಮಸ್ಯೆ ಎದುರಾಯ್ತು. ಶಿವರಾಜ, ಸರಸ್ವತಿ ಜಿದ್ದು ಬಿದ್ದು ಬೆನ್ನತ್ತಿದರು. 'ಹೊಲನ್ನ ಹದ ಮಾಡೀನಿ. ಬಿತ್ತಿ, ಬೆಳೆ ತೆಗಿತೀನಿ. ಆರು ತಿಂಗಳ ಆಗ್ತದ. ಕಣ ಮುಗಿಸಿಕೊಂಡು ಬರ್ತಿನಿ. ನೀವು ನಡಿರಿ' ಎಂದು ಮಾತಾಯಿತು. ತಮ್ಮನ ಮನೆಮಂದಿಯೇ ತಂದೆಗೆ ನಿತ್ಯ ಊಟ ಕೊಡುವಂತೆ ಹೇಳಿ ಅದರ ಖರ್ಚನ್ನು ಮುಗಂಡವಾಗಿ ಶಿವರಾಜ ಕೊಟ್ಟು ತಂಗಿ ಜತೆ ಸಿಟಿಗೆ ಹೊರಟದ್ದನ್ನು ಸಂಗಪ್ಪ ನೆನೆಸಿಕೊಂಡ. ಊರಲ್ಲಿ ಕೆಲವರು ತಮ್ಮ ಮಕ್ಕಳನ್ನು ನೋಡಿಕೊಳ್ಳಲಾಗದಕ್ಕೆ ಶಾಪ ಹಾಕುವುದನ್ನು ಸಂಗಪ್ಪ ನೋಡಿದ್ದ ಅಂತದ್ದರಲ್ಲಿ ತನ್ನ ಮಕ್ಕಳು ತನ್ನನ್ನು ಊರಲ್ಲಿ ಬಿಟ್ಟು ಹೋಗಲು ಸಿದ್ಧರಿರಲಿಲ್ಲ. ಮಕ್ಕಳು ಮತ್ತೆ ಸಿಟಿ ಸೇರಿದರು. ಸಂಗಪ್ಪ ಹೊಲ, ಬೆಳೆ ಅಂತ ದಿನ ನೂಕಿದ. ಆದ್ರೆ ಯಾಕೋ ಒಂಟಿ ಜೀವನದ ತಾಪತ್ರಯ ಅನುಭವಿಸಿದ್ರೂ ತಾಳಿಕೊಂಡಿದ್ದ. ಎಳ್ಳಮವಾಸೆ ಮುಗಿದ ಮೇಲೆ ಮಕ್ಕಳು ಊರಿಗೆ ಬಂದರು. ಜತೆಗೆ ಕರೆದೊಯ್ದರು. ಗೇಟ್‌ಕೀಪರ್ ಕೆಲ್ಸಕ್ಕೆ ಹೋಗಲಿಲ್ಲ ಸಂಗಪ್ಪ. ತಿಂಗಳೊಪ್ಪತ್ತು ಕಾಲ ಕಳೆಯುತ್ತಿದ್ದಂತೆ ಎರಡನೇ ದಾಳಿ ಶುರುವಾಯಿತು. ಸಂಗಪ್ಪನಿಗೆ ಮಗ ಮೊದಲ ಲಸಿಕೆ ಹಾಕಿಸಿದ. ಲಾಕ್‌ಡೌನ್ ಆಯಿತು. ಮತ್ತೆ ಮಕ್ಕಳ ಜತೆ ಸಂಗಪ್ಪ ಊರಿಗೆ ಬಂದು ನಿಂತ. ಮತ್ತದೇ ಗೋಳು. ಕೊರೊನಾ ದಾಳಿಯಿಂದ ಊರಿನ ಮಂದಿ ನಷ್ಟ ಅನುಭವಿಸಿದನ್ನ ಸಂಗಪ್ಪ ನೋಡುತ್ತಿದ್ದ. ಎರಡು ತಿಂಗಳಲ್ಲಿ ವಾತಾವರಣ ತಿಳಿಯಾಯಿತು. ಮಕ್ಕಳು ಸಿಟಿಗೆ ಹೋಗಲು ಮತ್ತೆ ತಯ್ಯಾರಾಗಿ ನಿಂತರು. ತನ್ನನ್ನು ಬಿಟ್ಟು ಹೋಗಲು ಮಕ್ಕಳು ಸಿದ್ಧರಿರಲಿಲ್ಲ. ಆದ್ರೆ ಸಂಗಪ್ಪನಿಗೆ ಊರು ಬಿಡಲು ಮನಸ್ಸು ಸಿದ್ಧವಾಗುತ್ತಿರಲಿಲ್ಲ. ಮಕ್ಕಳು ಬ್ಯಾಗ್ ರೆಡಿಮಾಡಿಕೊಂಡು ಮೂರು ದಿನದಿಂದ ಕಾಯುತ್ತಿದ್ದರು ಸಂಗಪ್ಪ ತನಗೂ ಸಂಕಟ, ಮಕ್ಕಳ ಸಂಕಟ ನೋಡುತ್ತ ಮೂರು ದಿನ ಕಳೆದಿದ್ದ.....

೨

ಬೆಳಗ್ಗೆ ಚೂರು ತಡವಾಗಿಯೇ ಸರಸ್ವತಿ, ಶಿವರಾಜ ಎದ್ದಾಗ ತಂದೆ ಕಾಣಲಿಲ್ಲ. ಆತಂಕದಲ್ಲೇ ನಿತ್ಯಕರ್ಮಗಳನ್ನು ಮುಗಿಸಿಕೊಂಡರು. "ಅಪ್ಪ ಹೊಲಕ್ಕ ಹೋಗಿದ್ದಾನು" ಅಂದ ಶಿವರಾಜ. ಸರಸ್ವತಿ "ಊರಲ್ಲಿ ಯಾರನ್ನಾದರೂ ಮಾತಾಡಿಸಕ ಹೋಗಿರ್ಬೇಕು" ಅಂದಳು.

"ಇವತ್ತು ಹೈದ್ರಾಬಾದಿಗೆ ಬಂದಾನೇನು ನಮ್ಮ ಜತೆಗೆ?" ಶಿವರಾಜ ಕೇಳಿದ.

"ಅಣ್ಣ, ನನ್ಗ ಅನುಮಾನ. ಅಮ್ಮ ಇದ್ದಿದ್ರ ಬರ್ತಿದ್ದ." ಸರಸ್ವತಿ.

ಶಿವರಾಜನಿಗೆ ಏನು ಹೇಳಬೇಕೆಂದು ತಿಳಿಲಿಲ್ಲ. ತಂಗಿ ಅಣ್ಣನ ಕಡೆ ನೋಡಿದಳಷ್ಟೇ.

"ಒಂದು ವ್ಯಾಳೆ ಅಪ್ಪ ನಮ್ಮಿಂದ ಬರಲಿಲ್ಲ ಅಂದ್ರೆ ..? ಸರಸ್ವತಿ, ನೀನು ಅಪ್ಪನ ಜತಿಗೆ ಇಲ್ಲೆ ಉಳಿದು ಬಿಡು" ಎಂದು ಹೇಳಿದ.

"ಏನಣ್ಣ ಹಿಂಗತಿದ್ದಿ ? ಚಂದ್ರು ನನಗಾಗಿ ಕಾಯ್ತಿರ್ತಾನ. ಮದುವೆಗೆ......."

ಶಿವರಾಜನಿಗೆ ಅರ್ಥವಾಯಿತು. "ಇದನ್ನೇ ಹೇಳಿ ಅಪ್ಪನ್ನ ಕರಕೊಂಡು ಹೋದ್ರಾಯ್ತು" ..


ಅಷ್ಟರಲ್ಲಿ ತಂದೆ ಮನೆಯೊಳಗೆ ಬಂದ. ಕೈಯಲ್ಲಿ ಚಿಕ್ಕ ಗಂಟು ಹಿಡಿದಿದ್ದ. ಮಕ್ಕಳಿಬ್ಬರು ಅದನ್ನು ನೋಡಿದರು ಕುತೂಹಲದಿಂದ.

"ಶಿವ ಇದನ್ನ ಬ್ಯಾಗಿನ್ಯಾಗ ಇಡು" ಎಂದು ತಂದೆ ಗಂಟು ಕೊಟ್ಟ. ಶಿವರಾಜ ಮುಟ್ಟಿ ನೋಡಿದ. ಮಣ್ಣಿನ ಗಂಟು ಇದ್ದೀತು ಅಂತ ಅನ್ನಿಸಿತು. ತಂದೆಯನ್ನೇ ದಿಟ್ಟಿಸಿ ನೋಡುತ್ತ,

"ಇದು ಯಾಕಪ್ಪ?" ಎಂದು ಕೇಳಿದ.

"ಇನ್ನೇನು ಮಾಡ್ಲಿ? ನಿಮ್ಮಿಂದ ಬರ್ತೀನಿ. ಅಲ್ಲೇ ಸತ್ರೆ, ನನ್ನನ್ನು ಮಣ್ಣು ಮಾಡುವಾಗ ಈ ಮಣ್ಣು ನಮ್ಮ ಹೊಲದ್ದು ಹಾಕಿ ಮಣ್ಣು ಮಾಡ್ರಿ" ಎಂದು ತಣ್ಣಗೆ ಹೇಳಿದ.

"ಅಂದಂಗ, ಹೊಲ ನಿನ್ಗ ಒಪ್ಪಿಸಿನಿ. ನೀನು ಏನಾದ್ರ ಮಾಡು." ಎಂದು ಕುಂತು "ಜೀಪಿಗೆ ಹೇಳು. ಮೂರು ಸೀಟು ನಮ್ಗಿರ್ಲಿಯಂತ" ಅಂದ.



(ವೃತ್ತಿಯಿಂದ ಕನ್ನಡ ಪ್ರಾಧ್ಯಾಪಕರಾಗಿರುವ ಲೇಖಕರು ಕನ್ನಡದ ಪ್ರಮುಖ ಕತೆಗಾರಲ್ಲಿ ಒಬ್ಬರಾಗಿದ್ದಾರೆ)

ಪ್ರಸಿದ್ಧ ಕ್ರೀಡಾಪಟು ಮಿಲ್ಕಾ ಸಿಂಗ್, ಹಿರಿಯ ಲೇಖಕ ವಸಂತ ಕುಷ್ಟಗಿ, ಹಿರಿಯ ಭಾಷಾ ತಜ್ಞ ಎಚ್. ಎಂ.ಮಹೇಶ್ವರಯ್ಯ ಕನ್ನಡ ಚಿತ್ರರಂಗದ ಹಿರಿಯ ಚಿತ್ರ ನಟಿ ಬಿ. ಜಯಾ, ಪ್ರತಿಭಾವಂತ ನಟ ಸಂಚಾರಿ ವಿಜಯ್, ಉದ್ಯಮಿ ಕೆ.ಸಿ.ಎನ್ ಚಂದ್ರು ಮತ್ತು ತುಮಕೂರಿನ ಸಾವಯವ ಕೃಷಿಕ ಮತ್ತು ಶ್ರದ್ಧಾಳು ಎನ್.ಎಸ್. ಗಂಗಾಧರಮೂರ್ತಿಯವರ ನಿಧನಕ್ಕೆ 'ಹೊಸ ಮನುಷ್ಯ' ತನ್ನ ಶ್ರದ್ಧಾಂಜಲಿಗಳನ್ನು ಸಲ್ಲಿಸುತ್ತದೆ.–ಸಂ.

ನವಿಲುಗರಿ

ಸಿದ್ಧಲಿಂಗಯ್ಯನವರ ನೆನಪಿನಲ್ಲಿ...

ಸಾವಿರಾರು ನದಿಗಳು



ನೆನ್ನೆ ದಿನ
ನನ್ನ ಜನ
ಬೆಟ್ಟದಂತೆ ಬಂದರು.

ಕಪ್ಪು ಮುಖ ಬೆಳ್ಳಿಗಡ್ಡ ಉರಿಯುತಿರುವ ಕಣ್ಣುಗಳು

ಹಗಲುರಾತ್ರಿಗಳನು ಸೀಳಿ ನಿದ್ದೆಯನ್ನು ಒದ್ದರು
ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ
ಭೂಕಂಪನವಾಯಿತು ಅವರು ಕುಣಿದ ಹುಚ್ಚಿಗೆ
ಇರುವೆಯಂತೆ ಹರಿವ ಸಾಲು ಹುಲಿಸಿಂಹದ ದನಿಗಳು
ಧಿಕ್ಕಾರ ಧಿಕ್ಕಾರ ಅಸಮಾನತೆಗೆ
ಎಂದೆಂದಿಗು ಧಿಕ್ಕಾರ ಶ್ರೀಮಂತರ ಸೊಕ್ಕಿಗೆ
ಲಕ್ಷಾಂತರ ನಾಗರಗಳು ಹುತ್ತಬಿಟ್ಟು ಬಂದಂತೆ
ಊರತುಂಬ ಹರಿದರು
ಪಾತಾಳಕೆ ಇಳಿದರು ಆಕಾಶಕೆ ನೆಗೆದರು.
ಬೀದಿಯಲ್ಲಿ ಗಲ್ಲಿಯಲ್ಲಿ ಬೇಲಿಮೆಳೆಯ ಮರೆಗಳಲ್ಲಿ

ಯಜಮಾನರ ಹಟ್ಟಿಯಲ್ಲಿ ಧಣಿ ಕೂರುವ ಪಟ್ಟದಲ್ಲಿ
ಎಲ್ಲೆಲ್ಲೂ ನನ್ನ ಜನ ನೀರಿನಂತೆ ನಿಂತರು.

ಇವರು ಬಾಯಿ ಬಿಟ್ಟೊಡನೆ
ಅವರ ಬಾಯಿ ಕಟ್ಟಿತು
ಇವರ ಕಂಠ ಕೇಳಿದೊಡನೆ ಅವರ ದನಿ ಇಂಗಿತು
ಕ್ರಾಂತಿಯ ಬಿರುಗಾಳಿಯಲ್ಲಿ ಕೈಬೀಸಿದ ನನ್ನ
ಭಡಿಯ ಏಟು ಹೊಡೆದವರ
ಕುತ್ತಿಗೆಗಳ ಹಿಡಿದರು.

ಪೋಲಿಸರ ದೊಣ್ಣೆಗಳು ಏಜೆಂಟರ ಕತ್ತಿಗಳು
ವೇದಶಾಸ್ತ್ರ ಪುರಾಣ ಬಂದೂಕದ ಗುಡಾಣ
ತರಗೆಲೆಕಸಕಡ್ಡಿಯಾಗಿ
ತೇಲಿತೇಲಿ ಹರಿದವು
ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು.

ನನ್ನ ಜನಗಳು

ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು
ವದೆಸಿಕೊಂಡು ವರಗಿದೋರು ನನ್ನ ಜನಗಳು
ಕಾಲುಕಯ್ಯಿ ಹಿಡಿಯೋರು ಕೈ ಮಡಗಿಸಿಕೊಳ್ಳೋರು
ಭಕ್ತರಪ್ಪ ಭಕ್ತರೋ ನನ್ನ ಜನಗಳು


ಹೊಲವನ್ನುತ್ತು ಬಿತ್ತೋರು ಬೆಳೆಯ ಕುಯ್ದು ಬೆವರೋರು
ಬಿಸಿಲಿನಲ್ಲಿ ಬೇಯೋರು ನನ್ನ ಜನಗಳು
ಬರಿಗೈಲೇ ಬಂದೋರು ಉಸ್ಸೆಂದು ಕೂತೋರು
ಹೊಟ್ಟೆ ಬಟ್ಟೆ ಕಟ್ಟಿದೋರು ನನ್ನ ಜನಗಳು

ಮಾಳಿಗೆಗಳ ಎತ್ತಿದೋರು ಬಂಗಲೆಗಳ ಕಟ್ಟಿದೋರು
ತಳಾದೀಗೆ ಸಿಕ್ಕಿದೋರು ನನ್ನ ಜನಗಳು
ಬೀದಿಯಲ್ಲಿ ಬಿದ್ದೋರು ಸದ್ದಿಲ್ಲದೆ ಇದ್ದೋರು
ಒಳಗೊಳಗೇ ಅತ್ತೋರು ನನ್ನ ಜನಗಳು


ಬಡ್ಡಿಯನ್ನು ತೆತ್ತೋರು ಭಾಷಣಗಳ ಬೆಂಕಿಯಲ್ಲಿ

ಬೆಂದು ಬೂದಿಯಾದೋರು ನನ್ನ ಜನಗಳು
ಪರಮಾತ್ಮನ ಹೆಸರು ಹೇಳಿ ಪರಮಾನ್ನ ಉಂಡಜನಕೆ
ಬೂಟುಮೆಟ್ಟು ಹೊಲೆದೋರು ನನ್ನ ಜನಗಳು

ಚಿನ್ನವನ್ನು ತೆಗೆಯೋರು ಅನ್ನವನ್ನು ಕಾಣದೋರು
ಬಟ್ಟೆಯನ್ನು ನೇಯೋರು ಬರಿಮೈಲೇ ಹೋಗೋರು
ಹೇಳಿದಂತೆ ಕೇಳುತಾರೆ ನನ್ನ ಜನಗಳು
ಗಾಳಿಯಲ್ಲೆ ಬಾಳುತಾರೆ ನನ್ನ ಜನಗಳು




ಗುಜ್ಜಾರ್



ಗುಜ್ಜಾರ್



ವಿಜಯಶ್ರೀ ಹಾಲಾಡಿ



ದಣಿವು ಹಿಂಗಿ...



ದಣಿವು ಹಿಂಗಿ,
ತಂಗಾಳಿಯ ಸವರಿಕೊಳುವ ಮಯ್ಯ
ಇನ್ನೂ ಏಸು ಶತಮಾನಗಳ ಬಾಳುವೆ/
ಎಂದು ಕೇಳುವಾಸೆ
ಕೂಸೇ ಆಗಿ ಬಿಟ್ಟಿದ್ದರೆ ಕೊನೆ ತನಕ
ಅಮ್ಮನೂ ಇದ್ದು
ಮೊಲೆವಾಲೂ ದೊರೆತು ಆಹಾ!
ಸವಿಗನಸು ಮುಗಿವನಕ
ಬೆಚ್ಚನ್ನ ಬೆಚ್ಚಗಿನ ಮಡಿಲು!
ಹಾಲು ಬೆಳೆಸಿದ ಕೈ ಕಾಲಾಡಿಸುತ
ಕಾಲ ಚಕ್ರವ ಓಡಿಸುತ
ಇದಿಗೋ ಬಂದು ಸೇರಿದ್ದು ಯಾವ ಬಿಂದು?
ಮುಂದು ಮುಂದೋಡಿಸುವ ಚಾಲಕ
ಹಿಂದಿನ ಕೈಯಿ ಕಾಣದೆಂದೂ
ಕರೆವುದೇನಂತ? ಏನದರ ಅಂಕಿತ?

–ಕೆ.ಪಿ. ಮೃತ್ಯುಂಜಯ.

ಒಡಲ ಜ್ವರ

ಇಲ್ಲ ಇಲ್ಲ
ಇದು ಕರೋನಾ ಬಾಧೆಯಲ್ಲ
ಆದರೂ ಉಸಿರು ಸಿಕ್ಕುತ್ತಿಲ್ಲ

ಜೀವ ಜಂಬರದಲ್ಲಿ ಅಭಿಮನ್ಯು
ಸಮರದಲೂ ಸಾವಿನಲೂ ಏಕಾಂಗಿ

ಮಾತಿನ ಬಿರುಗಾಳಿಯಲಿ ಮೌನವಾಗಿದೆ ಅರ್ಥ
ಛಿದ್ರ ವಿಚ್ಛಿದ್ರ
ಬೀಸುವ ಚಂಡಮಾರುತವೂ
ಉಸಿರುಳಿಸಲಾರದೆ ಸೋಲುತಿದೆ.

ಅಟ್ಟಷ್ಟೂ ಬೇಯದ ಅಡುಗೆ
ತಿಂದಷ್ಟೂ ತುಂಬದ ಉದರ
ನುಡಿದಷ್ಟೂ ತಿಳಿಯದ ಜಿಹ್ವೆ
ಸವೆದಷ್ಟೂ ಸಾಗದ ಬದುಕು
ಅವನತಿಯ ಅಂಚಿನಲಿ ಮತಿ
ನಿಂತು ತೂರಾಡುತಿದೆ ಪ್ರಗತಿ

ಸುತ್ತಲೂ ವಿಷದ ಗಾಳಿ
ಬಿಕ್ಕುತಿದೆ ಬಿಸಿ ಶೀತ...
ಶುದ್ಧ ಗಾಳಿಯ ತುಣುಕು
ಹೆಕ್ಕಿ ಹೆಕ್ಕಿ ಬದುಕು
ಸಾವರಿಸಿಕೊಂಡು ಸೇಂಕುತ್ತ
ಆರ್ತತೆಯೇ ಮೂರ್ತವಾಗಿ ಕೇಳುತ್ತಿದೆ...




ಅಳಿಯುತ್ತಿರುವ ಈ ಉಸಿರಿಗೆ
ಭಾವಬಯಕೆಯ ಜೀವ
ತುಂಬಿ ಬದುಕಿಸಬಲ್ಲುದು
ಅದಾವ
ಆಮ್ಲಜನಕ!?

–ನಯನಾ ಕಾಶ್ಯಪ್

ಅಭಿಮಾನ ಸಂವಹನಗಳ ಅತಿರೇಕ, ಖಾದ್ರಿ ಶಾಮಣ್ಣ ಪ್ರಶಸ್ತಿ ಇತ್ಯಾದಿ: ಕೆಲ ಬಿಡಿ ಟಿಪ್ಪಣಿಗಳು

ಅಂಬೇಡ್ಕರ್ ಮತ್ತು ಕುವೆಂಪು





ಒಂದೂವರೆ ವರ್ಷದ ಹಿಂದೆ ಇರಬೇಕು, ದೊಡ್ಡಬಳ್ಳಾಪುರದಲ್ಲಿ ನಾನು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ ಸಾಹಿತ್ಯ ಅಧ್ಯಯನ ಶಿಬಿರವೊಂದರಲ್ಲಿ ಕೆಲ ದಲಿತ ಅಧ್ಯಾಪಕರು ಕುವೆಂಪು ವಿರುದ್ಧ ಒಂದು ಸಂಘಟಿತ ಕ್ರೋಧ ವ್ಯಕ್ತಪಡಿಸಿ ಒಂದು ಗೋಷ್ಠಿಯನ್ನೇ ಅಸ್ತವ್ಯಸ್ತಗೊಳಿಸಿದ್ದರ ಬಗ್ಗೆ ಬರೆದಿದ್ದುದು ನಿಮ್ಮಲ್ಲಿ ಕೆಲವರಿಗಾದರೂ ನೆನಪಿರಬಹುದು. ಕುವೆಂಪು ನಿಜವಾಗಿ ಜಾತಿ ಪದ್ಧತಿಯ, ಅಸ್ಪೃಶ್ಯತೆಯ ವಿರೋಧಿಯಾಗಿದ್ದರೆ ಅವರು ಅಂಬೇಡ್ಕರ್ ಬದುಕಿದ್ದಾಗಲೇ ಬದುಕಿದ್ದೂ ಅವರನ್ನೇಕೆ ಭೇಟಿಯಾಗಲಿಲ್ಲ? ಅವರ ಬಗ್ಗೆ ಏನೂ ಏಕೆ ಬರೆಯಲಿಲ್ಲ ಎಂಬುದು ಈ ದಲಿತ ಅಧ್ಯಾಪಕರ ತಕರಾರಾಗಿತ್ತು!

ನಮ್ಮ ಯುವಜನರಿಗೆ ಸಾಹಿತ್ಯ ಬೋಧಿಸುವ ಅಧ್ಯಾಪಕರೇ ಹೀಗೆ ಜಾತಿಕುರುಡರಾದರೆ ಸಾಹಿತ್ಯಾಧ್ಯಯನದ ಗತಿಯೇನು ಎಂದು ಕೊಂಚ ಆತಂಕಿತನಾಗಿದ್ದ ನಾನು ನಂತರ ಇದು ಕೆಲವರಿಗಷ್ಟೇ ತಗುಲಿರುವ ಸೋಂಕು ಇರಬಹುದೆಂದು ಸಮಾಧಾನಪಟ್ಟುಕೊಂಡಿದ್ದೆ. ಆದರೆ ಇತ್ತೀಚೆಗೆ ಇದರ ಹಿಂದೆ ಸೋಂಕು ಹರಡುವ ವ್ಯವಸ್ಥಿತ ಜಾಲವೇ ಇದೆಯೆಂಬ ಅನುಮಾನ ಹುಟ್ಟಿಸುವ ಸಂದರ್ಭವೊಂದು ನನಗೆದುರಾಗಿ ಗಾಬರಿಗೊಳಗಾದೆ. ಅದರ ವಿವರ ಹೀಗಿದೆ:

ನಮ್ಮ ಪತ್ರಿಕೆಗೆ ಹೊಸದಾಗಿ ಚಂದಾದಾರರಾದ ಬೆಳಗಾವಿ ಜಿಲ್ಲೆಯ ದಲಿತ (ಇವರ ಜಾತಿ ನನಗೆ ಗೊತ್ತಾದದ್ದೂ ಅವರು ಸಾಂದರ್ಭಿಕವಾಗಿ ತಿಳಿಸಿದಾಗಲೇ) ಶಾಲಾ ಉಪಾಧ್ಯಾಯರೊಬ್ಬರು ಪತ್ರಿಕೆಯ ಏಪ್ರಿಲ್ ಸಂಚಿಕೆಯಲ್ಲಿ ಅಂಬೇಡ್ಕರ್ ಅವರ ಕೆಲ ಸಾಮಾಜಿಕ ವಿಚಾರಗಳ ಅವಲೋಕನ ಮಾಡಿದ್ದ ಪ್ರೊ. ಜೆ.ಎಸ್. ಸದಾನಂದ ಅವರ ಲೇಖನವೊಂದರ ಬಗ್ಗೆ ತೀರಾ ಕ್ರೋಧಮಯ ಭಾಷೆಯಲ್ಲಿ ಪ್ರತಿಕ್ರಿಯಿಸುತ್ತಾ ಸದಾನಂದ ಅವರು ಪ್ರಾಧ್ಯಾಪಕರಾಗಿದ್ದ ವಿಶ್ವವಿದ್ಯಾಲಯ ಕುವೆಂಪು ಹೆಸರಿನಲ್ಲಿರುವುದರಿಂದ ಅವರ ಈ ವಿಚಾರಗಳು ಹೀಗಿರುವುದು ಸಹಜವೇ ಆಗಿದೆ ಎಂದು ವ್ಯಂಗ್ಯವಾಡುತ್ತಾ ಕುವೆಂಪು ಅವರ ಸಾಹಿತ್ಯವನ್ನು ಹೀಯಾಳಿಸಿದ್ದರಲ್ಲದೆ 'ಇಂತಹ ಗೊಡ್ಡು' ಮನುಷ್ಯನನ್ನು ರಾಷ್ಟ್ರಕವಿ ಎಂದು ಹೊತ್ತು ಮೆರೆಯುವುದನ್ನು ನಿಲ್ಲಿಸಬೇಕೆಂದು ಆಗ್ರಹಿಸಿದ್ದರು. (ಈ ಮಹಾಶಯ ಈ ಕವಿಯ ಬಗ್ಗೆ ಬಳಸಿರುವ ಶಬ್ದ ಮತ್ತು ವಾಕ್ಯಗಳನ್ನು ಇಲ್ಲಿ ದಾಖಲಿಸಲಾರೆ, ಕ್ಷಮೆ ಇರಲಿ) ಈ ಸಂಬಂಧ ಅವರು ಬರೆದ ಎರಡು ಪತ್ರಗಳ ಕೆಲ ಅಣಿಮುತ್ತುಗಳು ಹೀಗಿವೆ: 'ಈ ಭೂಮಿ ಹುಟ್ಟಿದಾಗಿನಿಂದ ಬಾಬಾಸಾಹೇಬರಷ್ಟು ಓದಿಕೊಂಡ ಚಿಂತಿಸಿದ ಮತ್ತೊಬ್ಬ ವ್ಯಕ್ತಿ ಹುಟ್ಟಿಲ್ಲ. ಅಂತಹ ಮಹಾನ್ ವ್ಯಕ್ತಿ ಬರೆದ ಸತ್ವಶಾಲಿ ಸಂವಿಧಾನದ ಬಗ್ಗೆ ತಕರಾರೆತ್ತುವುದು ಹೀನಬುದ್ಧಿಯಷ್ಟೆ', 'ಗಾಂಧಿ ಮತ್ತು ಲೋಹಿಯಾ ಅಂಬೇಡ್ಕರ್ ಅವರ ಉದುರಿದ ಒಂದು ಕೂದಲಿಗೆ ಸಮವಲ್ಲ.' 'ಯಾವುದೇ ಪತ್ಯದ ಅಸ್ಪೃಶ್ಯರ ಓದಿಗೂ ಮೇಲ್ಜಾತಿಯವರ ಓದಿಗೂ ತಾಳೆಯಾಗುವುದಿಲ್ಲ.' 'ಧೈರ್ಯವಿದ್ದರೆ ಸದಾನಂದ ತಮ್ಮ ಜಾತಿಯನ್ನು ಹೇಳಿಕೊಳ್ಳಬೇಕಿತ್ತು.', 'ವೀರಪ್ಪ ಮೊಯ್ಲಿ ಕೆಳಜಾತಿಗೆ ಸೇರಿದ್ದರಿಂದ ಅವರ ಮಹಾಕಾವ್ಯಗಳ ಬಗ್ಗೆ ಸೊಲ್ಲೆತ್ತದ ಸವರ್ಣೀಯರು ಯಾರ ಬಾಯಲ್ಲೂ ಒಂದು ಸಾಲೂ ಉಳಿಯದ ಕುವೆಂಪುವಿನ ರಾಮಾಯಣ ದರ್ಶನವನ್ನು ಮಹಾಕಾವ್ಯವೆಂದು ಹಾಡಿಹೊಗಳುತ್ತಾರೆ... ಮತ್ತು ನಾನು ಬರೆದಿರುವ ಮಹಾಕಾವ್ಯವೊಂದನ್ನು ಓದಲೂ ನಿರಾಕರಿಸುತ್ತಿದ್ದಾರೆ.' ಇತ್ಯಾದಿ ಇತ್ಯಾದಿ. ಇಂಥವರೊಂದಿಗೆ ಏನು ಸಂವಾದ ಮಾಡುವುದು?


ಕೆಲ ವರ್ಷಗಳ ಹಿಂದೆ ಶಿವಮೊಗ್ಗದಲ್ಲಿ ನಡೆದ ದಲಿತ ಲೇಖಕ ಮತ್ತು ಕಲಾವಿದರ ಸಮ್ಮೇಳನದಲ್ಲಿ ಪ್ರದರ್ಶಿತವಾದ 'ಗಾಂಧಿ ವರ್ಸಸ್ ಅಂಬೇಡ್ಕರ್' ನಾಟಕದಲ್ಲಿನ ಒಂದು ಕಾಲ್ಪನಿಕ ದೃಶ್ಯದಲ್ಲಿ ಅಂಬೇಡ್ಕರ್ ಮನೆಗೆ ಬಂದ ಗಾಂಧಿಯವರನ್ನು ಅಂಬೇಡ್ಕರ್ ಸೌಜನ್ಯದಿಂದ ಮಾತಾಡಿ ಉಪಚರಿಸುವುದನ್ನು ನೋಡಿ ಅದನ್ನು ಅಂಬೇಡ್ಕರ್‌ಗೆ ಮಾಡಿದ ಅಪಚಾರವೆಂದು ಬೆಳಗಾವಿ ಕಡೆಯ ದಲಿತ ಯುವಕರ ಗುಂಪೊಂದು ಗಲಭೆ ಮಾಡಿದುದನ್ನು ಕಂಡಿದ್ದ ನನಗೆ ಈ ಶಾಲಾ ಉಪಾಧ್ಯಾಯರ ಕ್ರೋಧಮಯ ಮತ್ತು ಅಸಭ್ಯ ಮಾತುಗಳು ಆಶ್ಚರ್ಯವನ್ನೇನೂ ತರಲಿಲ್ಲವಾದರೂ, ನಾನು ಹತ್ತಾರು ವರ್ಷಗಳ ಕಾಲ ಒಡನಾಡಿದ ಮತ್ತು ನನ್ನ ಮಿತಿಗಳಲ್ಲೇ ಬೆಳೆಯಲು ನೆರವಾದ ದಲಿತ ಸಂಘರ್ಷ ಸಮಿತಿ ಮಾಡಿದ ಕೆಲಸ ಇಷ್ಟು ಬೇಗ ಎಷ್ಟು ಮಣ್ಣುಪಾಲಾಗಿದೆ ಎಂದು ದುಃಖವಾಯಿತು ಮತ್ತು ಕಲಿತ ದಲಿತರ ಇಂತಹ ಸಂಘಟಿತ ಗುಂಪುಗಳು ಸಾಂಸ್ಕೃತಿಕವಾಗಿ ಏನೆಲ್ಲ ಅನಾಹುತಗಳನ್ನು ಮಾಡಬಲ್ಲವು ಎಂದು ಗಾಬರಿಯೂ ಆಯಿತು. ಇದನ್ನೆಲ್ಲ ತಲೆಕೆಟ್ಟ ಒಬ್ಬ ಅಥವಾ ಕೆಲ ದಲಿತರ ಅಧಿಕ ಪ್ರಸಂಗಗಳಾಗಿ ನೋಡಲು ಮನಸ್ಸು ನಿರಾಕರಿಸಿತು.

ಆದರೆ ಇದನ್ನೆಲ್ಲ ಯಾರಲ್ಲಿ ಹೇಳಲಿ? ದಲಿತ ಸಂಘರ್ಷ ಸಮಿತಿಯ ನನ್ನ ಹಲವು ಗೆಳೆಯರು ನೆನಪಾದರು. ಅವರಲ್ಲಿ ಹಲವರು ಮೃತರಾಗಿದ್ದಾರೆ. ಉಳಿದವರು ಬದುಕಿದ್ದೂ ಮೃತಪಟ್ಟಂತಿದ್ದಾರೆ. ಇನ್ನು ಸದ್ಯದ ದಲಿತ ನಾಯಕರ ವರಸೆಗಳನ್ನು ನೋಡಿದರೆ ಮುಂದೆ ಮಾತಾಡುವಂತೆಯೇ ಇಲ್ಲ. ಹಾಗಾಗಿಯೇ ಈ ಸ್ಥಿತಿ ಎನ್ನಿಸಿ ಇಲ್ಲಿ ನನ್ನಂತವರ ಪಾತ್ರ ಏನೂ ಇಲ್ಲವೆಂದು ಮನದಟ್ಟಾಗಿ ಸುಮ್ಮನಾದೆ. ಸುಮ್ಮನಾದೆ ಎಂದರೆ ಭೌತಿಕವಾಗಿ ಮಾತ್ರ.

ವಾಟ್ಸಪ್ ಎಂಬ ಸ್ನೇಹದ ಹೆಸರಿನ ಹಾವಳಿ

'ತಂತ್ರಜ್ಞಾನ ವರ ಹೇಗೋ ಶಾಪವೂ ಹೌದು ಎಂಬುದು ಹಳೆಯ ಮಾತು. ಈ ಸ್ಮಾರ್ಟ್‌ಫೋನ್‌ನ ಸಹವಾಸದಲ್ಲಿ ಮತ್ತೆ ಮತ್ತೆ ನೆನಪಿಗೆ ಬರುತ್ತಿದೆ. ಫೇಸ್‌ಬುಕ್‌ನಲ್ಲಿ ನಡೆದಿದ್ದ ಅಸಂಬದ್ಧ ವಾಕ್ಸಮರಗಳ ಗುಂಡಿನ ಚಕಮಕಿಗೆ ಸಿಕ್ಕಿ ಗಾಯಗೊಳ್ಳುವುದರಿಂದ ತಪ್ಪಿಸಿಕೊಂಡು ನೆಮ್ಮದಿಯ ನಿಟ್ಟುಸಿರು ಬಿಡುವ ಹೊತ್ತಿಗೆ ಈ ವಾಟ್ಸಾಪ್ ಕಾಟ ಶುರುವಾಗಿದೆ. ಇನ್ನೊಬ್ಬರಿಗೆ ಬೇಕೋ ಬೇಡವೋ ಎಂದರಿಯುವ ಮುನ್ನವೇ ತಾವು ಅಲೆದಾಡಿ ಬಂದ ಮಾಹಿತಿಯ ತಿಪ್ಪೆ ಗುಂಡಿಗಳ ಸರಕನ್ನೆಲ್ಲ ಇನ್ನೊಬ್ಬರ ಮನೆಯ ಹಜಾರಕ್ಕೆ ಸುರಿಯುವ `ವರ್ತನೆ ನನ್ನ ಪ್ರಕಾರ ಅನಾಗರಿಕ ವರ್ತನೆಯೇ. ವಿಚಾರ ವಿನಿಮಯ ನಾಗರಿಕ ಸಮಾಜದ ಸಲ್ಲಕ್ಷಣವೇ. ಆದರೆ ಅದು ಪರಸ್ಪರ ಪರಿಚಯವಿರುವವರ ನಡುವೆ ಅಗತ್ಯ ಅರಿತು ನಡೆಯಬೇಕು. ಆದರೆ ಇನ್ನೊಬ್ಬರ ನಂಬರ್ ಸಿಕ್ಕರೆ ಸಾಕು ಅಥವಾ ಹುಡುಕಿ ತಮ್ಮ ಮಾಹಿತಿ ಶ್ರೀಮಂತಿಕೆಯ ಪ್ರದರ್ಶನಕ್ಕಾಗಿ ಬಂಡಿ ಸುರಿದು ಹೋಗುವ ಜನರನ್ನು ಏನೆಂದು ಕರೆಯಬೇಕು? ಇವರ ಹಾವಳಿಯಿಂದ ಪಾರಾಗುವುದು ಹೇಗೆ? ನಾನು ಪತ್ರಿಕೆಯೊಂದರ ಸಂಪಾದಕನೂ ಆದುದರಿಂದ ನನಗೆ ಈ ಕಾಟ ವಿಪರೀತ. ನಂಬರೂ ಸುಲಭವಾಗಿ ಸಿಗುವುದಲ್ಲ? ಇದನ್ನು ಗಮನಿಸಿ, ಅದನ್ನು ಗಮನಿಸಿ ಇದನ್ನು ಅನುವಾದಿಸಿ ಹಾಕಿ ಇತ್ಯಾದಿ ಸಲಹೆ–ಶಿಫಾರ್ಸುಗಳ ಮಹಾಪೂರ. ಹೋಗಲಿ ಮೊನ್ನೆ ಲಾಕ್‌ಡೌನ್‌ನಿಂದಾಗಿ ಪತ್ರಿಕೆಯನ್ನು ಮುದ್ರಿಸಲಾಗದ್ದರಿಂದ ವಾಟ್ಸಪ್ ನಂ. ಲಭ್ಯವಿದ್ದ ಚಂದಾದಾರರಿಗೆಲ್ಲ ಇಡೀ ದಿನ ಕೂತು ವಾಟ್ಸಾಪ್ ನಂ. ಲಭ್ಯವಿರುವ ಚಂದಾದಾರರ ಪಟ್ಟಿ ಮಾಡಿ ಅವರಿಗೆಲ್ಲ ಎರಡು ದಿನಗಳ ಕಾಲ ಪತ್ರಿಕೆಯ ಪಿಡಿಎಫ್ ಆವೃತ್ತಿಯನ್ನು ಕಳಿಸಿದರೆ ನನಗೆ ಸಿಕ್ಕ ಪ್ರತಿಫಲವೇನು ಗೊತ್ತೇ, ವಾಪಸ್ ವಾಟ್ಸಾಪ್‌ನಲ್ಲಿ ರಾಶಿ ರಾಶಿ ಕವನ, ಕಥೆ, ಲೇಖನಗಳು! ಇವುಗಳಿಗೆಲ್ಲ ಉತ್ತರ ಕೊಡಲು ನನಗಂತೂ ಸಾಧ್ಯವಿಲ್ಲ. ಹಾಗಾಗಿ ಎಲ್ಲ ಸೌಜನ್ಯವನ್ನೂ ಬದಿಗಿಟ್ಟು ಹಲವರ ನಂಬರುಗಳನ್ನು ನಿಷೇಧಿಸುವ (ಬ್ಲಾಕ್ ಮಾಡುವ) 'ಅನಾಗರಿಕ' ಕ್ರಮ ಕೈಗೊಳ್ಳಲಾರಂಭಿಸಿದ್ದೇನೆ!

ಆರ್‌ಪಿವಿಗೆ ಖಾದ್ರಿ ಶಾಮಣ್ಣ ಪ್ರಶಸ್ತಿಯ ಗರಿ



ಗೆಳೆಯ ಆರ್.ಪಿ. ವೆಂಕಟೇಶಮೂರ್ತಿಯವರಿಗೆ ೨೦೨೧ರ ಪ್ರತಿಷ್ಠಿತ ಖಾದ್ರಿ ಶಾಮಣ್ಣ ಪತ್ರಿಕೋದ್ಯಮ ಸಾಧನೆಯ ಪ್ರಶಸ್ತಿ ಸಂದಿದೆ. ಅವರಿಗೆ ಪತ್ರಿಕೆಯ ಅಭಿನಂದನೆಗಳು. ಕಳೆದ ಎಪ್ಪತ್ತರ ದಶಕದ ಜೆಪಿಯವರ ಸಂಪೂರ್ಣ ಕ್ರಾಂತಿ ಚಳುವಳಿಯ ಕಾವಿನಲ್ಲಿ ಹಾಸನ ಜಿಲ್ಲೆಯಲ್ಲಿ ರೂಪುಗೊಂಡ ಸಮಾಜವಾದಿ ಯುವಜನ ಸಭಾದ ಒಂದು ಯುವ ಉತ್ಸಾಹಿ ತಂಡ ೧೯೭೭ರಲ್ಲಿ ಹೊಸ ಸಮಾಜವೊಂದರ ಕನಸಿನೊಂದಿಗೆ ಆರಂಭಿಸಿದ 'ಜನತಾ ಮಾಧ್ಯಮ' ದಿನ ಪತ್ರಿಕೆ ಆರಂಭದ ಕೆಲ ವರ್ಷಗಳ ನಂತರ ವೆಂಕಟೇಶಮೂರ್ತಿಯವರ ಸಂಪಾದಕತ್ವದ ಸುಪರ್ದಿಗೆ ಬಂದು ಹಾಸನ ಜಿಲ್ಲೆಯ ಸಾರ್ವಜನಿಕರ ಧ್ವನಿಯಾಗಿ ಕೆಲಸ ಮಾಡುತ್ತಿದೆ. ಇದರ ಎಲ್ಲ ಕೀರ್ತಿ ಇವರಿಗಷ್ಟೇ ಸಲ್ಲದೆ ಆರಂಭದ ದಿನಗಳಲ್ಲಿ ವಾಸುದೇವನ್, ಪೀಟರ್, ಪಾಟೀಲ, ಜಯರಾಮ ಹೆಗಡೆ ಮುಂತಾದವರಿಗೆ ಸಲ್ಲುತ್ತದೆ. ಹಾಗೇ ಆರಂಭದಿಂದಲೂ ಮೂರ್ತಿಯವರ ಜೊತೆಗಿದ್ದ ಈಗ ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾದ ಮಂಜುನಾಥ ದತ್ತ ಅವರಿಗೂ ಸಲ್ಲುತ್ತದೆ.

ಆರಂಭದಿಂದಲೂ ಈ ಪತ್ರಿಕೆಯನ್ನು ಗಮನಿಸುತ್ತಾ ಆಗಾಗ್ಗೆ ಅದಕ್ಕಾಗಿ ಲೇಖನಗಳನ್ನೂ ಬರೆಯುತ್ತಾ ಬಂದಿರುವ ನನಗೆ ಇರುವ ಒಂದು ಅಸಮಾಧಾನವೆಂದರೆ, ಅದರ ಜೊತಗಿದ್ದ ಯುವ ಉತ್ಸಾಹಿ ತಂಡ ಅದು ನಂಬಿದ್ದ ಲೋಹಿಯಾ ವಿಚಾರ ಮತ್ತು ಅದು ಕಟ್ಟಿದ ರೈತ ಚಳುವಳಿಯ ಹಿನ್ನೆಲೆಯಲ್ಲಿ ಬೆಳೆಯಬೇಕಾದಷ್ಟು ಬೆಳೆದಿಲ್ಲ ಎಂಬುದು.


ಅಂದಹಾಗೆ ಪ್ರತಿಷ್ಠಿತ ಎನ್ನಲಾಗುವ ಈ ಪ್ರಶಸ್ತಿಯನ್ನು ನೀಡುವ ಖಾದ್ರಿ ಶಾಮಣ್ಣ ಟ್ರಸ್ಟ್ ಪ್ರಶಸ್ತಿಯ ಜೊತೆಗೆ ನೀಡಲಾಗುವ ಜುಜುಬಿ ಹದಿನೈದು ಸಾವಿರ ರೂಪಾಯಿಗಳ ಮೊತ್ತವನ್ನು ತನ್ನ ಪ್ರತಿಷ್ಠೆಗೆ ತಕ್ಕುನಾಗಿ ಹೆಚ್ಚಿಸಬೇಕು. ಆಗದಿದ್ದರೆ ನಗದು ಕೊಡುವುನ್ನು ನಿಲ್ಲಿಸುವುದೊಳಿತು. ಈ ಟ್ರಸ್ಟ್‌ನ ಜೀವಾಳವಾಗಿದ್ದ ದಿ.ಅಚ್ಯುತನ್ ಅವರಿಗೂ ಹಿಂದೆ ಈ ಮಾತು ಹೇಳಿದ್ದೆ.


–ಡಿಎಸ್ಸೆನ್

ಪುಸ್ತಕಾವಲೋಕನ

ಟಿ.ಪಿ. ಅಶೋಕ ಅವರ ನಾಲ್ಕು ಕಿರು ಅಧ್ಯಯನಗಳು

ಪು: ೧. ಕೃಷ್ಣ ಕಥನ ೨, ದೇವನೂರ ಕಥನ ಲೇ: ಟಿ.ಪಿ. ಅಶೋಕ ಪ್ರ: ಅಭಿನವ, ಬೆಂಗಳೂರು (೯೪೪೮೮೦೪೯೦೫) ಪು: ೧. ೯೬ ೨. ೮೮ ಬೆಲೆ: ೧.ರೂ. ೮೦/- ೨. ರೂ. ೭೫/-





ಕನ್ನಡದ ಹಿರಿಯ ವಿಮರ್ಶಕರಾದ ಟಿ.ಪಿ. ಅಶೋಕರವರ ಕೃಷ್ಣ ಕಥನ ಹಾಗೂ ದೇವನೂರು ಕಥನ ಕೃತಿಗಳು ಅಶೋಕರವರ ಸಹಜ ಸಾಹಿತ್ಯ ಪ್ರೀತಿ ಮತ್ತು ಗಂಭೀರ ಅಧ್ಯಯನದ ಉದಾಹರಣೆಗಳಾಗಿವೆ. ಕನ್ನಡ ಬರಹಗಳ ಎರಡು ಮಾದರಿಗಳಾದ ಭಾಷಣ ಮಾದರಿ ಹಾಗೂ ಪ್ರಬಂಧ ಮಾದರಿಗಳ ಮಿತಿಗಳನ್ನು ಈ ಕೃತಿಗಳು ಮೀರಿವೆ. ಭಾಷಣ ಮಾದರಿ ಬರಹಗಳ ಅತಿ ಭಾವುಕತೆ, ರೆಟರಿಕ್ ಮೂಲಕವೇ ಎಲ್ಲವನ್ನೂ ಸಾಬೀತುಗೊಳಿಸಬಹುದೆಂಬ ನಂಬಿಕೆ, ವಾಚಾಳಿತನ ಈ ಕೃತಿಗಳಲ್ಲಿಲ್ಲ. ಹಾಗೇ ಪ್ರಬಂಧ ಮಾದರಿ ಬರಹಗಳ ಪಾಂಡಿತ್ಯದ ಪ್ರದರ್ಶನ, ಪ್ರಸಿದ್ಧ ವಿಮರ್ಶಕರ ಬರಹಗಳ ಅನವಶ್ಯಕ ಉಲ್ಲೇಖ, ಅನವಶ್ಯಕವಾಗಿ ಪಾರಿಭಾಷಿಕ ಪದಗಳ ಬಳಕೆ ಇಲ್ಲಿ ಕಾಣುವುದಿಲ್ಲ.

ಕೃಷ್ಣ ಕಥನವನ್ನು ಅಶೋಕರವರು ಶ್ರೀ ಕೃಷ್ಣ ಆಲನಹಳ್ಳಿಯವರ ಸಮಗ್ರ ಸಾಹಿತ್ಯ ಅಧ್ಯಯನ ಎಂದು ಹೇಳಿದ್ದಾರೆ. ಆದರೆ ಇದು ಕೇವಲ ಪರಿಚಯಾತ್ಮಕ ಪುಸ್ತಕವಲ್ಲ. ಕೃಷ್ಣ ಅವರ ಕೃತಿಗಳ ಬಗ್ಗೆ ಮಾತಾಡುವಾಗಲೇ ಅಶೋಕರವರು ಕಾದಂಬರಿ ಅನ್ನುವ ಪ್ರಕಾರ ಹಾಗೂ ಕನ್ನಡದಲ್ಲಿ ಕಾದಂಬರಿ ಅನ್ನುವ ಪ್ರಕಾರ ರೂಪುಗೊಂಡ ಪ್ರಕ್ರಿಯೆಯ ಬಗ್ಗೆ ಬಹಳ ಪಾಂಡಿತ್ಯಪೂರ್ಣವಾದ ಹಾಗೂ ಒಳನೋಟಗಳನ್ನು ಹೊಂದಿರುವ ಮಾತುಗಳನ್ನು ಆಡುತ್ತಾರೆ. ಮಾಡಿದ್ದುಣ್ಣೋ ಮಹರಾಯದಿಂದ ಕುಸುಮಬಾಲೆಯವರೆಗೆ ಕನ್ನಡ ಕಥನ ಸಾಹಿತ್ಯ ಬೆಳೆದುಬಂದ ರೀತಿಯ ಬಗ್ಗೆ ಅಶೋಕರವರು ಹೇಳಿರುವುದು ಕನ್ನಡ ಕಾದಂಬರಿಗಳ ಸಂಕ್ಷಿಪ್ತ ಇತಿಹಾಸವೂ, ಹಾಗೂ ಈ ದೀರ್ಘ ಇತಿಹಾಸದಲ್ಲಿ ಕಂಡುಬರುವ ವಿನ್ಯಾಸಗಳನ್ನು ವ್ಯಕ್ತಗೊಳಿಸುವ ಪ್ರಯತ್ನವೂ ಆಗಿದೆ. ಕೃಷ್ಣ ಅವರ ಸಾಹಿತ್ಯವನ್ನು ಅಶೋಕರವರು ನೋಡುವುದು ಈ ರೀತಿಯ ವಿನ್ಯಾಸದ ಭಾಗವಾಗಿ. "ಪ್ರಾಚೀನ-ನವೀನಗಳ ಸ್ನೇಹ ಸಮರಗಳ ದ್ವಂದ್ವ ವಿನ್ಯಾಸ" ಹೇಗೆ ಕಾನೂರು ಹೆಗ್ಗಡತಿ, ಮರಳಿ ಮಣ್ಣಿಗೆ ಹಾಗೂ ಕೃಷ್ಣ ಅವರ ಕಾದಂಬರಿಗಳಲ್ಲಿ ಮುಖ್ಯವಾಗಿದೆ ಅನ್ನುವುದನ್ನು ತೋರಿಸಿಕೊಡುತ್ತಾರೆ. ಕೃಷ್ಣ ಅವರ ಕಥನ ಸಾಹಿತ್ಯದಲ್ಲಿನ ವಿನ್ಯಾಸಗಳ ಬಗ್ಗೆಯೂ ಅಶೋಕರವರು ಹೇಳುತ್ತಾರೆ. ಉದಾಹರಣೆಗೆ, ಆಧುನೀಕರಣದ ಪ್ರಕ್ರಿಯೆಗೆ ಸ್ಪಂದಿಸುವ ರೀತಿ ಕೃಷ್ಣ ಅವರ ಕಾದಂಬರಿಗಳಲ್ಲಿ ಬೆಳೆಯುವ ಬಗೆಗೆ, ಆಧುನಿಕತೆಯ ಪ್ರಶ್ನೆಗಳನ್ನು ಕೃಷ್ಣ ದ್ವಂದ್ವ ನೆಲೆಯಿಂದಲೇ ನೋಡುತ್ತಾರೆ ಅನ್ನುವುದು, ಅವರ ಕಾದಂಬರಿಗಳ ಭೌತಿಕ ಲೋಕ ವಿಸ್ತಾರವಾಗುವ ಪ್ರಕ್ರಿಯೆ, ಹಾಗೂ "ವಾಸ್ತವತೆ ನವ್ಯತೆಗಳ ಕಿರು ಇಕ್ಕಟ್ಟಾದ ದಾರಿಯಲ್ಲಿ" ಪ್ರಾರಂಭ ಮಾಡುವ ಕೃಷ್ಣ ರಸ್ತೆಗೆ ಇಳಿದು ಕೊನೆಗೆ ವಾಸ್ತವತೆಯ ಹೆದ್ದಾರಿಗೆ ಬರುವ ಬಗ್ಗೆ ಹೇಳಿರುವುದನ್ನು ಗಮನಿಸಬಹುದು. ಆದರೆ ಈ ಸಮಗ್ರ ಅಧ್ಯಯನದ ಹಿರಿಮೆ ಇರುವುದು ಅದು ಕೃಷ್ಣ ಅವರ ಕಾದಂಬರಿಗಳು ಹೇಗೆ "ಒಂದನ್ನು ಮುಟ್ಟಿದರೆ ಇನ್ನೊಂದೂ ಮಿಡಿಯುವ" ಕನ್ನಡ ಕಾದಂಬರಿ ಜೀವಜಾಲದ ಭಾಗವಾಗಿದೆ ಎಂದು ತೋರಿಸುವಲ್ಲಿ. ಅಶೋಕರವರು ತೋರಿಸಿಕೊಡುವಂತೆ ಹೋಟೆಲ್ ಅನ್ನುವ ಪ್ರತಿಮೆ ಹೇಗೆ ಮರಳಿ ಮಣ್ಣಿಗೆ-ಭುಜಂಗಯ್ಯನ ದಶಾವತಾರ-ಒಡಲಾಳ ಇವುಗಳಲ್ಲಿ ಬಳಕೆಯಾಗಿದೆ ಅನ್ನುವುದು ಕನ್ನಡ ಕಾದಂಬರಿ ಲೋಕದ ಸಾತತ್ಯಕ್ಕೆ ಒಂದು ಉದಾಹರಣೆ. ಅಶೋಕರವರು ಕೊನೆಯಲ್ಲಿ ಹೇಳುವ "ದೇವನೂರು ಮಹದೇವ, ಕುಂ. ವೀರಭದ್ರಪ್ಪ, ಬಿ.ಚಂದ್ರೇಗೌಡ ಮೊದಲಾದ ಲೇಖಕರ ಹಿಂದೆ ಕೃಷ್ಣ ಖಂಡಿತವಾಗಿ ಇದ್ದಾರೆ" ಅನ್ನುವುದನ್ನು ಈ ಅಧ್ಯಯನ ಸಾಧಿಸಿ ತೋರಿಸಿದೆ. ಇನ್ನು ಅಶೋಕರವರು ಕೃಷ್ಣರವರ ಕತೆಗಳಲ್ಲಿ ಇರುವ ವಿನ್ಯಾಸಗಳ ಬಗ್ಗೆ ಹಾಗೂ ಕವಿತೆಗಳ ಬಗ್ಗೆ ಬರೆದಿರುವುದು ಒಂದು ಸೇರ್ಪಡೆಯಾಗಿದೆಯೇ ಹೊರತು ಕಾದಂಬರಿಗಳ ಬಗ್ಗೆ ಬರೆದಿರುವುದರ ಮುಂದುವರಿಕೆಯಾಗಿಲ್ಲ. ಅದಕ್ಕೆ ಕೃಷ್ಣರವರ ಕತೆಗಳು ಹಾಗೂ ಕವಿತೆಗಳ ಸಂಖ್ಯೆ ಹಾಗೂ ಸ್ವಭಾವಗಳೇ ಕಾರಣವಾಗಿರಬಹುದು.

ದೇವನೂರು ಕಥನದಲ್ಲೂ ಅಶೋಕರವರು ದೇವನೂರರ ಬರವಣಿಗೆಗಳಲ್ಲಿ ಇರುವ ಪರಸ್ಪರ ಸಾವಯವ ಸಂಬಂಧ ಹಾಗೂ ಆ ಬರಹಗಳು ಕನ್ನಡದ ಇತರ ಸಾಹಿತ್ಯ ಕೃತಿಗಳ ಜೊತೆಗೆ ಹೊಂದಿರುವ ಸಂಬಂಧಗಳಲ್ಲಿ ಆಸಕ್ತನಾಗಿದ್ದೇನೆಂದು ಹೇಳುತ್ತಾರೆ. ಇಲ್ಲಿಯೂ ದೇವನೂರರ ಎಲ್ಲಾ ಬರಹಗಳಲ್ಲಿ ಇರುವ ವಿನ್ಯಾಸಗಳನ್ನು ಹಾಗೂ ಕನ್ನಡ ಸಾಹಿತ್ಯ ಲೋಕದ ಎಲ್ಲಾ ಚಟುವಟಿಕೆಗಳ ಹಿಂದಿರುವ ವಿನ್ಯಾಸಗಳ ಮುಂದುವರಿಕೆಯಾಗಿ ದೇವನೂರರ ಬರಹಗಳು, ಭಾಷಣಗಳು ಹಾಗೂ ಇತರ ಸಾಮಾಜಿಕ ಕೆಲಸಗಳನ್ನು ನೋಡಲು ಪ್ರಯತ್ನ ಪಡುತ್ತಾರೆ. ಅಶೋಕರವರು ಕೃಷ್ಣ ಕಥನದಲ್ಲಿ ತೋರಿಸಿಕೊಟ್ಟಿರುವಂತೆ ಕಥಾನಾಯಕರುಗಳಲ್ಲಿನ ಪ್ರಜ್ಞೆ ಮತ್ತು ಪರಿಸರದ ವಿಘಟನೆ ಹಾಗೂ ಆಧುನಿಕತೆ-ಸಾಂಪ್ರದಾಯಿಕತೆಗಳ ಘರ್ಷಣೆ ಕನ್ನಡ ಕಾದಂಬರಿ ಜೀವಜಾಲದ ಮುಖ್ಯ ತಂತು. ಇವು ದೇವನೂರರ ಸಾಹಿತ್ಯದಲ್ಲಿ ಹಾಗೂ ಅವರ ಒಟ್ಟಾರೆ ಚಟುವಟಿಕೆಗಳಲ್ಲಿ ಹೇಗೆ ಮುಂದುವರೆದಿವೆ ಅನ್ನುವುದನ್ನು ಹೇಳುತ್ತಾರೆ. ಆಧುನಿಕತೆ ತರುವ ಬದಲಾವಣೆಗಳನ್ನು ಬಯಸುವ ಲೇಖಕ ತನ್ನ ಜನಾಂಗದ ನಂಬಿಕೆ, ಆಚರಣೆ, ಸ್ಮೃತಿಗಳನ್ನು ಹೇಗೆ ನೋಡುತ್ತಾರೆ ಅನ್ನುವುದರ ಬಗ್ಗೆ ಅಶೋಕರವರು ಹೇಳುವುದು ಆಸಕ್ತಿದಾಯಕವಾಗಿದೆ. ಆದರೆ ಕೃಷ್ಣ ಅವರ ಬಗೆಗಿನ ಅಧ್ಯಯನಕ್ಕೆ ಹೋಲಿಸಿದರೆ ದೇವನೂರು ಅವರ ಬಗ್ಗೆ ಬರೆದಿರುವುದು ಹೆಚ್ಚು ಪರಿಚಯಾತ್ಮಕ ಮತ್ತು ವಿವರಣಾತ್ಮಕವಾಗಿದೆ. ಇಲ್ಲಿ ದೇವನೂರು ಅವರ ಬರಹಗಳಿಂದ ಹಾಗೂ ಅವರ ಬಗ್ಗೆ ಬೇರೆಯವರು ಬೇರೆ ಬೇರೆ ಕಾಲಘಟ್ಟದಲ್ಲಿ ಬರೆದಿರುವ ಲೇಖನಗಳ ಉಲ್ಲೇಖಗಳ ಗಾತ್ರ ಹಾಗೂ ಸಂಖ್ಯೆ ಜಾಸ್ತಿಯಾಗಿದೆ. (ಕೃಷ್ಣ ಅವರ ಬಗ್ಗೆ ಬಂದಿರುವ ಅಧ್ಯಯನಗಳ ಸಂಖ್ಯೆ ಕಡಿಮೆ ಅನ್ನುವುದು ನಿಜ: ಆದರೆ ದೇವನೂರು ಕಥನದಲ್ಲಿ ಚದುರಿದಂತಿರುವ ವಿವರಗಳನ್ನು ಒಂದು 'ಥೀಸಿಸ್' ಮೂಲಕ ಬೆಸೆಯಲಾಗಿಲ್ಲ.) ದೇವನೂರು ಅವರ ಸಾಹಿತ್ಯದ ಬಗ್ಗೆ ಬಂದಿರುವ ಟೀಕೆಗಳ ಬಗ್ಗೆ ಇನ್ನೂ ಹೆಚ್ಚಿನ ಪರಿಚಯ ಮಾಡಿಸಬಹುದಾಗಿತ್ತು ಹಾಗೂ ಕೇವಲ ಉಲ್ಲೇಖಿಸುವುದರ ಬದಲು ಪುನರ್ ಪರಿಶೀಲಿಸಬಹುದಾಗಿತ್ತು. ದೇವನೂರು ಮಹದೇವ ಅವರ ಸಾಹಿತ್ಯದ ಅನುಸಂಧಾನಕ್ಕೆ ಅರ್ಥಪೂರ್ಣ 'ಪ್ರವೇಶ'ವನ್ನು ಈ ಅಧ್ಯಯನ ನೀಡುತ್ತದೆ.

-ಬಿ.ವಿ. ರಾಮ ಪ್ರಸಾದ್

ಪು :ಬೊಳುವಾರು ಮಹಮದ್ ಕುಂಞ ಲೇ: ಟಿ.ಪಿ. ಅಶೋಕ ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು (೦೮೦-೨೨೧೬೧೯೦೦) ಪು: ೧೧೨ ಬೆ: ರೂ. ೧೦೦/




ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಸಾಹಿತಿಗಳನ್ನು ಕುರಿತ ಪುಸ್ತಕ ಮಾಲೆಯಲ್ಲಿ (ಪ್ರಧಾನ ಸಂಪಾದಕ-ಪ್ರಧಾನ ಗುರುದತ್ತ) ಪ್ರಕಟವಾಗಿರುವ ಈ ಕಿರು ಪುಸ್ತಕದಲ್ಲಿ ಕತೆಗಾರ-ಕಾದಂಬರಿಕಾರ ಬೊಳುವಾರು ಮಹಮದ್ ಕುಂಞಯವರ ಬದುಕು ಬರಹಗಳನ್ನು ಹಿರಿಯ ವಿಮರ್ಶಕರಾದ ಟಿಪಿ ಅಶೋಕ ಅವರು ಸಮಗ್ರವಾಗಿ ಅವಲೋಕಿಸುವ ಉದ್ದೇಶ ಹೊಂದಿದ್ದಾರೆ. ಬೊಳುವಾರರ ಕೌಟುಂಬಿಕ ಪರಿಸರ ಧಾರ್ಮಿಕ-ಸಾಮಾಜಿಕ ಹಿನ್ನೆಲೆಗಳನ್ನು ಆತ್ಮಚರಿತ್ರೆಕಾರನಂತೆ ಹುಡುಕಿ-ಹುಡುಕಿ ಅಶೋಕರು ಬರೆದಿದ್ದಾರೆ. ಗುಲ್ಬರ್ಗದಲ್ಲಿ ಕೆಲಸದಲ್ಲಿದ್ದ ಬೊಳುವಾರರು ತೀರಿಹೋದ ತಂದೆಯ ಶವಸಂಸ್ಕಾರಕ್ಕೆ ಪುತ್ತೂರಿಗೆ ಏಳುನೂರು ಕಿಲೋಮೀಟರ್ ಸ್ಕೂಟರಿನಲ್ಲಿ ಬಂದರೂ ತಂದೆಯ ಮುಖವನ್ನು ನೋಡದೇ ಹೋದ ಘಟನೆಯಿಂದ ಹಿಡಿದು-ಮುಸ್ಲಿಮರ ಕಂದಾಚಾರವನ್ನು ಕುರಿತು ಬರೆದಿದ್ದಕ್ಕಾಗಿ ಬೊಳುವಾರರ ಮೇಲೆ ಕಲ್ಲೆಸೆಯಬೇಕು ಎಂದುಕೊಂಡಿದ್ದ ಅವರದೇ ಊರಿನ ಹಿರೀಕರೊಬ್ಬರು ನಮ್ಮ ಸಮುದಾಯದಲ್ಲಿ ಓದುಬರೆಹ ಕಲಿತು ದೇಶವಿದೇಶಗಳಿಗೆ ಓಡಾಡುತ್ತಿರುವ ಹೆಣ್ಣುಮಕ್ಕಳು ಯಾರಾದರೂ ಇದ್ದರೆ ಅದಕ್ಕೆ ಅವರ ಬರೆಹಗಳೇ ಕಾರಣವೆಂದು ಸಭೆಯೊಂದರಲ್ಲಿ ಹೇಳಿದ್ದನ್ನು ದಾಖಲಿಸುವಂತೆಯೇ. ಅಶೋಕರು ಬೊಳುವಾರರ ಎಲ್ಲಕತೆ- ಕಾದಂಬರಿ-ನಾಟಕ-ಮಕ್ಕಳ ಸಾಹಿತ್ಯಗಳ ವಿವಿಧ ಆಯಾಮಗಳನ್ನು ಕುರಿತು ವಿಸ್ತೃತವಾಗಿ ಬರೆದಿದ್ದಾರೆ. ಹಾಗೆ ನೋಡಿದರೆ ಪುಸ್ತಕದಲ್ಲಿ, ವೃತ್ತಿ-ಪ್ರವೃತ್ತಿಯಿಂದ ಸಾಹಿತ್ಯಪ್ರೇಮಿಯಾಗಿರುವ ಅಶೋಕರನ್ನು ಅವರ ತಾಯಿ ಕಪಿಲಾಬಾಯಿಯವರು ಬೊಳುವಾರರನ್ನು ಓದುವಂತೆ ಸೂಚಿಸುವುದು- ಬಂಡಾಯಗಾರನಾದ ಬೊಳುವಾರರ ತಮ್ಮ ಉಮರ್ ಹಿಂದೂಧರ್ಮಕ್ಕೆ ಮತಾಂತರವಾಗಿ ಬೊಳುವಾರರ ವೈಚಾರಿಕ-ಸಾಂಸಾರಿಕ ನಂಬಿಕೆಗಳಿಗೆ ಸವಾಲೆಸೆಯುವುದು- ಇವೇ ಮೊದಲಾದ ಕುತೂಹಲಕರ ವಿವರಗಳಿದ್ದು ಅವು ಸಾಹಿತ್ಯ-ಸಾಮಾಜಿಕ ಕ್ರಾಂತಿಗಳ ಅನೂಹ್ಯ ಪರಿಣಾಮಗಳನ್ನು ತೋರಿಸುವಂತಿವೆ.

ಬೊಳುವಾರರ ಎಲ್ಲ ಕತೆ-ಕಾದಂಬರಿಗಳ ಕೇಂದ್ರವಾದ ಮುತ್ತುಪ್ಪಾಡಿ ಒಂದು ನಿರ್ದಿಷ್ಟ ಸಾಮಾಜಿಕ-ಧಾರ್ಮಿಕ ಆವರಣವಾಗಿರದೆ ಅದು ಭಾರತೀಯ ಸಮಾಜವು ಎದುರಿಸುತ್ತಿರುವ ಆಧುನಿಕತೆ, ಸಂಪ್ರದಾಯ, ಧಾರ್ಮಿಕತೆ, ಕೋಮುವಾದ ಹಲವಾರು ಪಲ್ಲಟಗಳು ಸಂಭವಿಸುತ್ತಿರುವ ಕುದಿಬಿಂದುವಿನಂತಿದೆ. ಏಕಕಾಲಕ್ಕೆ ಅದು ಸಂಸ್ಕೃತಿ ವಿಶಿಷ್ಟವೂ-ಅಖಿಲ ಭಾರತೀಯವೂ ಆಗಿದೆಯೆಂದು ಅಶೋಕರು ವ್ಯಾಖ್ಯಾನಿಸಿದ್ದಾರೆ. ಸಾವಿರಾರು ಪುಟಗಳಲ್ಲಿ ಚಿತ್ರಿತವಾಗಿರುವ ಮುತ್ತುಪ್ಪಾಡಿಯನ್ನು ಕುರಿತು ಬೊಳುವಾರು

ಬರೆಯುವಾಗ ಅವರು ಪಾವಿತ್ರ್ಯನಾಶ–ಸಾಂಸ್ಥಿಕ ಧರ್ಮಗಳ ವಿರುದ್ಧದ ನೆಲೆಯಿಂದ ಹೊರಟು ಸುಧಾರಣಾವಾದಿ ನೆಲೆಗೆ ಹೇಗೆ ಬಂದು ನಿಂತಿದ್ದಾರೆ ಎಂಬುದನ್ನು ವಿವರವಾಗಿ ವಿಶ್ಲೇಷಿಸಿದ್ದಾರೆ. ಧಾರ್ಮಿಕ ಶೋಷಣೆಯ ಕೇಂದ್ರಗಳಾಗಿದ್ದ ಮಸೀದಿ–ಚರ್ಚುಗಳು ಜನಸಮುದಾಯದ ಸಾಮೂಹಿಕ ಅಭಿವ್ಯಕ್ತಿಯ ರೂಪಕವಾಗಿ ಬೊಳುವಾರರಿಗೆ ಕಾಣಿಸುತ್ತಿವೆ ಎಂಬುದನ್ನು ಅವರ ***ಜೆಹಾದ್*** ಕಾದಂಬರಿಯಿಂದ ಹಿಡಿದು ಇತ್ತೀಚಿನ ***ಓದಿರಿ*** ಮತ್ತು ***ಸ್ವಾತಂತ್ರ್ಯದ ಓಟ*** ಕೃತಿಗಳ ಕೃತಿನಿಷ್ಠ ಓದಿನ ಮೂಲಕ ಕಾಣಿಸುತ್ತಾರೆ.

ಬಂಡಾಯದ ಹಿನ್ನೆಲೆಯ ಬೊಳುವಾರರ ಬಗ್ಗೆ ಬರೆಯುವಾಗ ಬಂಡಾಯವೆಂಬ ಪದವನ್ನು ಒಂದಕ್ಕಿಂತ ಹೆಚ್ಚು ಬಾರಿ ಬಳಸದೆ, ಮುಸ್ಲಿಂಸಾಹಿತ್ಯವೆಂಬ ಸಿದ್ಧಚೌಕಟ್ಟಿನಲ್ಲಿಟ್ಟು ನೋಡದೇ, ಅವರನ್ನು ಕನ್ನಡ ಲೇಖಕರೆಂದು ಗುರುತಿಸಿ ಅವರ ಕಥಾಭಿತ್ತಿಯನ್ನು ಕಾರಂತರ ಜೊತೆ, ಅಲ್ಲಲ್ಲಿ ಕುವೆಂಪು ಕಾದಂಬರಿಗಳ ಜೊತೆಯಿಟ್ಟು ಕಥಾಸಾಧ್ಯತೆಗಳಿಗೆ ಇರಬಹುದಾದ ವಿಸ್ತಾರವಾದ ನೆಲೆಯನ್ನು ಪರೀಕ್ಷಿಸುತ್ತಾರೆ. ಎಷ್ಟೇ ಸಂಕೀರ್ಣವಾಗಿದ್ದರೂ ಕೇವಲ ಸಾಮಾಜಿಕತೆಯೇ ಸಾಹಿತ್ಯಕೃತಿಗಳ ಸಾರ್ವಕಾಲಿಕತೆಗೆ ಮಾನದಂಡವಾಗುವುದೇ ಎಂಬುದು ಚರ್ಚಾರ್ಹವಾಗಿದೆ.

ಪು: ಮೊಕಾಶಿ ಕಥನ ಲೇ: ಟಿ.ಪಿ.ಅಶೋಕ ಪ್ರ: ಅಭಿನವ, ಬೆಂಗಳೂರು(೯೪೪೮೮೦೪೯೦೫) **ಪು: ೧೦೪ ಬೆ: ರೂ.೧೦೦/–**




ಟಿ.ಪಿ ಅಶೋಕರು ಈಚಿನ ವರ್ಷಗಳಲ್ಲಿ ಪ್ರಕಟಿಸುತ್ತಿರುವ ಕನ್ನಡದ ಹಲವು ಮುಖ್ಯ ಲೇಖಕರನ್ನು ಕುರಿತು ಕಿರು ಅಧ್ಯಯನ ಗ್ರಂಥಗಳ ಸರಣಿಯಲ್ಲಿ ಶಂಕರ ಮೊಕಾಶಿ ಪುಣೇಕರರನ್ನು ಕುರಿತ ಈ ಗ್ರಂಥವು ಮೊದಲಿನದಾಗಿರುವುದು ಆಶ್ಚರ್ಯವೇನಲ್ಲ. ಮೇಲಿನ ಬೊಳುವಾರು ಪುಸ್ತಕವನ್ನೂ ಒಳಗೊಂಡಂತೆ ಎಲ್ಲ ಲೇಖಕರನ್ನು ಕುರಿತು ಚರ್ಚಿಸುವಾಗ ನವ್ಯ ವಿಮರ್ಶೆಯ ಪರಿಕರಗಳನ್ನು ಬಳಸಿಕೊಳ್ಳುತ್ತಲೇ ಬಂದಿರುವ ಅಶೋಕರಿಗೆ, ನವ್ಯಸಾಹಿತ್ಯವನ್ನು ಉಗ್ರವಾಗಿ ವಿರೋಧಿಸುತ್ತಿದ್ದ, ನವ್ಯವಿಮರ್ಶೆಯನ್ನು 'ರಂಡಿಸಮ್ಮಿತಿ'ಯೆಂದು ಝಂಕಿಸುವ ಪುಣೇಕರರನ್ನು ಕುರಿತು ಬರೆಯುವಾಗ ಪರವಿರೋಧಗಳಿಗಿಂತ ಮುಖ್ಯವಾಗಿ ವಿವರವಾದ ಕೃತಿವಿಶ್ಲೇಷಣೆಯೇ ಮುಖ್ಯವಾಗಿದೆ. ಅಶೋಕರ ವಿಮರ್ಶೆ ಎಷ್ಟು ಆವೃತವಾಗಿ–ಸಂಚಯಿತವಾಗಿರುತ್ತದೆ ಎಂದರೆ ಪುಣೇಕರರ ಕೃತಿಶ್ರೇಣಿ ಮಾತ್ರವಲ್ಲ ಅವರನ್ನು ಕುರಿತು ಪ್ರಮುಖ ವಿಮರ್ಶಾ ಮಾದರಿಗಳ ವಿಸ್ತೃತ ಪರಿಚಯವೂ ಓದುಗರಿಗೆ ಲಭ್ಯವಾಗುತ್ತದೆ. ಒಂದೆರಡು ಬಿಡಿ ಕೃತಿಗಳನ್ನು ಕುರಿತ ಒಪಿನಿಯನೇಟೆಡ್ ವಿಮರ್ಶೆಗಿಂತ ಇಂಥ ಬರಹಗಳು ಶೈಕ್ಷಣಿಕವಾಗಿ, ಸಾಹಿತ್ಯದ ಅಭಿರುಚಿಯನ್ನು ಪೋಷಿಸುವ ಬಹುಮುಖ್ಯ ಆಕರಗಳಾಗಿ ಬಳಕೆಯಾಗುತ್ತವೆ.

'ಮಾಯಿಯ ಮೂರು ಮುಖಗಳು' ಮೊದಲಾದ ಮಹತ್ವದ ಕವಿತೆಗಳನ್ನು ಹೊರತುಪಡಿಸಿ, ಪುಣೇಕರರ ಇತರ ಕವಿತೆಗಳನ್ನು ವಿಶ್ಲೇಷಿಸುತ್ತಾ ಅವರ ನವ್ಯವಿರೋಧಿ ವಿಡಂಬನಾತ್ಮಕ ನಿಲುವು ಅಡಿಗ, ರಾಮಾನುಜನ್ ಮೊದಲಾದವರ ಅತ್ಯುತ್ತಮ ನವ್ಯಕಾವ್ಯಕ್ಕೆ ಹೇಗೆ ಮುಖಾಮುಖಿಯಾಗುವುದಿಲ್ಲ ಎನ್ನುತ್ತಾರೆ. ಪುಣೇಕರರ ಚರ್ಚಿತವಲ್ಲದ ಕತೆಗಳು ಹಾಗೂ ಈಗಾಗಲೇ ಶ್ರೇಷ್ಠ ಕೃತಿಗಳೆಂದು ಪರಿಗಣಿತವಾಗಿರುವ ಕಾದಂಬರಿಗಳ ಚರ್ಚೆಯ ಮೂಲಕ ನವ್ಯದ ದುರ್ಬಲ–ಉದ್ವಿಗ್ನ ನಾಯಕರಿಗಿಂತ ಭಿನ್ನವಾದ, ಜೀವವಿರೋಧಿಯಲ್ಲದ ಸಾಂಪ್ರದಾಯಿಕತೆಯನ್ನು ಪೋಷಿಸುವ ಪುಣೇಕರ ಕಥನಲೋಕವೊಂದರ ದರ್ಶನವನ್ನು ನೀಡುತ್ತಾರೆ. ***ನಟನಾರಾಯಣಿ*** ಕಾದಂಬರಿಯ ಮೂಲಕ ಸಂಸ್ಕೃತಿಯ ವಿಶಿಷ್ಟರೂಪಗಳಾದ ಕಲೆ–ನಟನೆಗಳು ರಸಿಕ ವ್ಯವಹಾರದ ಸರಕಾಗುವ ದುರಂತವನ್ನು ಬಹಳ ಸಮರ್ಥವಾಗಿ ನಿರೂಪಿಸುತ್ತಾರೆ. ಕೃತಿವಿಮರ್ಶೆಗೆ ಅಶೋಕರು ಒಡ್ಡಿಕೊಳ್ಳುವ ಪರಿ ಎಷ್ಟು ಮುಕ್ತವಾಗಿರುತ್ತದೆಯೆಂದರೆ, ಸಾಮ್ಯ–ವೈಷಮ್ಯಕ್ಕಾಗಿ ನೀಡುವ ಇತರ ಕತೆಕಾದಂಬರಿಗಳ ಉಲ್ಲೇಖಗಳು ಬೇಸಗೆಯ ವಿರಾಮದಲ್ಲಿ ಮೀಯುತ್ತಿರುವ ಅನುಭೂತಿಯನ್ನು ನೀಡುತ್ತವೆ. ವ್ಯಕ್ತಿತ್ವದ ಅಭಿವ್ಯಕ್ತಿಯನ್ನೇ ಮೂಲದ್ರವ್ಯವಾಗಿಸಿಕೊಂಡ ನವ್ಯಸಾಹಿತ್ಯ, ಸ್ವಂತವನ್ನು ಮೀರಿದ ಹಲವು ಗುಣಾವಗುಣಗಳ ವ್ಯಕ್ತಿತ್ವಗಳನ್ನು ಸೃಷ್ಟಿಸುವ ಶೇಕ್‌ಸ್ಪಿಯರ್, ಟಾಲ್‌ಸ್ಟಾಯ್‌ರಂಥ ಲೇಖಕರ ಹೋಲಿಕೆಯಲ್ಲಿ ಹೇಗೆ ಸೋಲುತ್ತದೆ ಎಂದು ಉಲ್ಲೇಖಿಸುತ್ತಲೇ ಪುಟ್ಟಸ್ವಾಮಯ್ಯನವರ ಕಾದಂಬರಿಗಳಿಗೆ ಅಂತರಾಷ್ಟ್ರೀಯ ಮನ್ನಣೆ ದೊರಕಬೇಕು ಎಂಬ ಪುಣೇಕರರ ಅಭಿಪ್ರಾಯ, ಇತರ ಅಭಿಪ್ರಾಯಗಳಂತೆ ಕೃತಿಯ ವಿವರವಾದ ಓದು, ಒಪ್ಪಿತ ಸಿದ್ಧಾಂತಗಳ ಮರುಪರಿಶೀಲನೆಯ ಬೆಳಕಿನಲ್ಲಿ ಹುಟ್ಟುವುದಿಲ್ಲ ಎಂಬುದನ್ನು ವಿವರವಾದ ಕೃತಿಪರಿಶೀಲನೆಯ ಮೂಲಕವೇ ಅಶೋಕರು ತೀರ್ಮಾನಿಸುತ್ತಾರೆ. ಸಾಹಿತ್ಯಿಕ ಆಧುನಿಕತೆ–ನವ್ಯತೆಗಳನ್ನು ಉಗ್ರವಾಗಿ ವಿರೋಧಿಸುತ್ತಿದ್ದ ಪುಣೇಕರರ ಅತಿರೇಕದ ಅಭಿಪ್ರಾಯಗಳನ್ನು 'ವಸಾಹತುಶಾಹಿ ಆಧುನಿಕತೆ'ಯ ವಿರುದ್ಧ ಮಾಡಿದ ಮುನ್ನೋಟದ ಚಿಂತನೆಗಳ ಫಲವೆಂಬಂತೆ ನೋಡಿದಲ್ಲಿ ಇನ್ನಷ್ಟು ಹೊಸನೋಟಗಳು ದೊರಕಬಹುದು.

–ಎಸ್. ಸಿರಾಜ್ ಅಹಮದ್

ಪು: ಶಯ್ಯಾಗೃಹದ ಸುದ್ದಿಗಳು (ಕವನಗಳು) **ಲೇ: ಶೋಭಾ ನಾಯಕ** ಪ್ರ: **ಮನೋರಮಾ ಬುಕ್‌ಹೌಸ್**, ಬೆಳಗಾವಿ (೮೦೮೮೩೮೦೩೨೭) **ಪು: ೧೦೫ ಬೆ: ರೂ. ೧೦೦/–**

ಸ್ಫೋಟಕ ಶಕ್ತಿಯ ತಾಜಾ ಕವನಗಳು



ಇಂದಿನ ಕವಿ–ಕವಿತಾ ಸಂಕಲನಗಳ ಸಂತೆಯಲ್ಲಿ ಶೋಭಾ ನಾಯಕರ ಈ 'ಶಯ್ಯಾಗೃಹದ ಸುದ್ದಿಗಳು' ಎಂಬ ಸಂಕಲನ ತನ್ನ ಶೀರ್ಷಿಕೆಯಿಂದಷ್ಟೇ ಅಲ್ಲದೆ ಕವಿತೆಗಳ ಹಿಂದಿನ ತಾಜಾ ಮನಸ್ಸು ಮತ್ತು ಅಭಿವ್ಯಕ್ತಿ ಕ್ರಮಗಳಿಂದ ಗಮನ ಸೆಳೆಯುವಂತಿದೆ. ಇಲ್ಲಿರುವ ಒಟ್ಟು ಐವತ್ತು ಕವಿತೆಗಳಲ್ಲಿನ ಬಹುತೇಕ ಕವನಗಳ ಕೇಂದ್ರ ನೆಲೆ ಒಂದೇ. ಗಂಡು–ಹೆಣ್ಣಿನ ಸೂಕ್ಷ್ಮ ಸಂಬಂಧದ ಸುತ್ತಮೇ ಇರುವ ಕವಿತೆಗಳು ಆ ಮೂಲಕವೇ ಒಂದು ತಾತ್ವಿಕತೆಯನ್ನು ಕಟ್ಟಿಕೊಡುವ ಪ್ರಯತ್ನ ಮಾಡುತ್ತವೆ. ಲೈಂಗಿಕ ಅನುಭವಗಳು ಪ್ರಧಾನವಾಗಿದ್ದರೂ ಅವು ವೈಯಕ್ತಿಕ ನೆಲೆಗೆ ಸೀಮಿತವಾಗದೆ ಇಡೀ ಚರಿತ್ರೆ, ವರ್ತಮಾನದ ಪುರುಷ ಕೇಂದ್ರಿತ ಪ್ರತಿಷ್ಠೆಯನ್ನೆ ಜಿಜ್ಞಾಸೆಗೆ ಒಳಪಡಿಸುವ ನೆಲೆಗೆ ಬೆಳೆಯುವುದು ಕವನಗಳ ವಿಶೇಷವಾಗಿದೆ. ಈ ಮೂಲಕ ಗಂಡು–ಹೆಣ್ಣಿನ ಸಂಬಂಧವನ್ನು ಸಾಂಪ್ರದಾಯಿಕ ಚೌಕಟ್ಟಿನ ಆಚೆಗಿಟ್ಟು ನೋಡುವ ಸಾಧ್ಯತೆಯ ಕಡೆಗೆ ಕವಿತೆಗಳು ಚಲಿಸುತ್ತವೆ.

ಮನೆಯೊಳಗೆ ಬಿಕ್ಕಳಿಸುವ ಕವಿತೆ ನನ್ನದು / ಜಗಲಿಯಲ್ಲಿ ಮೊಳಗುವ ಚರಿತ್ರೆ ಅವನದು (ಪು.೩೨) ಎನ್ನುವ, ಕವಿತೆಯೊಂದರ ಸಾಲುಗಳು ಸಂಕಲನದ ಮ್ಯಾನಿಫೆಸ್ಟೊ ಆಗಿ ಕಾಣಿಸುತ್ತವೆ. ಇದು ಅನಾದಿಯಿಂದ ಇಲ್ಲಿಯವರೆಗೆ ಪುರುಷ–ಮಹಿಳೆಯ ಅಸ್ತಿತ್ವ ದಾಖಲಾದ ಬಗೆಯನ್ನು ಕವಿ ನೋಡುವ ರೀತಿ. ಅದರಲ್ಲಿಯೂ ಪುರುಷನ ಅಧಿಕಾರ ಸ್ಥಾಪನೆಯ ಕೇಂದ್ರ ಶಯ್ಯಾಗೃಹವೇ ಆಗಿರುವ ಕಾರಣ ಈ ಪದ ಇಡೀ ಸಂಕಲನದ ಮುಖ್ಯ ರೂಪಕವಾಗಿ ಬಂದಿದೆ. ಈ ಹಿನ್ನೆಲೆಯ ಅನೇಕ ಕವನಗಳು ಚರಿತ್ರೆಯುದ್ದಕ್ಕೂ ಸಾಗಿಬಂದ ಗಂಡಿನ ಅಹಂ, ಲಂಪಟತನಕ್ಕೆ ಸವಾಲೆಸೆಯುತ್ತವೆ. **'ಆದರೂ / ರಾತ್ರಿಗಳೆಂದರೆ ಬರೀ ಯುದ್ಧವೇ ನಿನಗೆ / ನಾನು ನರಳುವಾಗ / ನಿನಗೆ ಸಿಗುವ / ಸುಖದ ಹೆಸರು: ಅಹಂ'**(ಪು.೨) ಎಂಬ ಸಾಲುಗಳಲ್ಲಿರುವ ವ್ಯಂಗ್ಯ ಇದಕ್ಕೆ ಉದಾಹರಣೆ. ಯಯಾತಿಗೊಂದು ಪತ್ರ, ರಾಕ್ಷಸನ ಹೆಂಡತಿ ಮಂಡೋದರಿ ಮೊದಲಾದ ಕವನಗಳಲ್ಲಿ ಈ ಭಾವವನ್ನೆ ಕಾಣಬಹುದು.

ಪರಂಪರಾಗತ ನಿಯಮಗಳ ಮುಂದೆ ವಿಸ್ಮೃತಿಗೆ ಸೇರಿದ ಒಂದು ಜಗತ್ತಿದೆ. ಅದು ಸಮಾನತೆಯ ನೆಲೆಗಟ್ಟಿನ ಮೇಲೆ ಪರಸ್ಪರ ಪ್ರೀತಿಯ ಸಾಂಗತ್ಯದಲ್ಲಿ ಅರಳಬೇಕಾದ ಜಗತ್ತು. ಅದರ ಹುಡುಕಾಟವೇ ಕವನಗಳ ಇನ್ನೊಂದು ನೆಲೆಯೂ ಆಗಿದೆ. **'ಮುಟ್ಟದಲೇ ಮಾಗಿಸುವ / ಮನದೊಡೆಯನೇ ಬೇಕು'**(ಪು.೬) ಎಂಬ ಸಾಲುಗಳಾಗಲೀ, **'ಇರಬೇಕಿತ್ತು / ಈಗಲೂ… / ಮುಟ್ಟು ಮುಗಿದನಂತರವೂ / ಮುಟ್ಟುವವನು / ಮುಗಿಲಾಗಬಲ್ಲವನು'**(ಪು.೭೯) ಎಂಬ ಸಾಲುಗಳಾಗಲೀ ಹೆಣ್ಣಿನ ಆಕಾಂಕ್ಷೆಗಳನ್ನು, ಕನಸುಗಳನ್ನು ನಿಸ್ಸಂಕೋಚವಾಗಿ ತೆರೆದಿಡುತ್ತವೆ.

ಇಡೀ ಸಂದರ್ಭಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸುವ, ಮಹಿಳೆಗೆ ಬಿಡುಗಡೆಯ ದಾರಿಗಳನ್ನು ತೋರಿಸುವ ಸ್ಫೋಟಕಶಕ್ತಿಯ ಕವನಗಳೂ ಇಲ್ಲಿವೆ. 'ಕಲ್ಲಾದವರ ನೆತ್ತಿಯಮೇಲೆ', 'ಮೊಲೆಗಳು ಸದಾ ಉರಿವ ಒಲೆಗಳು', 'ಬ್ರಾಂಡೆಡ್ ಮುಕ್ತಿ' ಮೊದಲಾದ ಕವಿತೆಗಳು ಆತ್ಮಪ್ರತ್ಯಯದ ಹಂತವನ್ನು ದಾಟಿ ಸಾಮಾಜಿಕ ನೆಲೆಯ ಕಡೆ ಚಲಿಸಿವೆ. ಇಂಥ ಕವಿತೆಗಳು ಗಂಡಿನ ಅಧಿಕಾರವನ್ನು ಪ್ರಶ್ನಿಸುತ್ತ ಸ್ತ್ರೀಯ ಅಸ್ಮಿತೆಯನ್ನು ಹೆಚ್ಚು ಪ್ರಬಲವಾಗಿ ಪ್ರತಿಪಾದಿಸುತ್ತವೆ.


ಸಂಕಲನದಲ್ಲಿ ಗಮನಸೆಳೆಯುವ ಮುಖ್ಯವಾದ ಅಂಶವೆಂದರೆ ಕವಿಯ ರೂಪಕಶಕ್ತಿ. 'ಸದ್ದಿಲ್ಲದೆ', 'ನಿಲ್ಲದ ಮಳೆ', ಮೊದಲಾದ ಕವಿತೆಗಳು ಆ ಬಗೆಯ ಸಫಲ ರಚನೆಗಳು. ಇಲ್ಲಿ ರೂಪಕಗಳೇ ಅನುಭವವೊಂದನ್ನು ಕಟ್ಟಿಕೊಡುತ್ತವೆ **'ನಿತ್ಯ ಮದಲಿಂಗನ ಕಣಿವೆಯಲಿ / ಮದವೇರಿದ ಸೂರ್ಯ / ಬೆವರುವ ಕುದುರೆ'**(ಪು.೨೧, ೨೨) ಎನ್ನುವಂತಹ ಮನಸೆಳೆಯುವ ಸಾಲುಗಳು ಇಲ್ಲಿವೆ. ಈ ಬಗೆಯ ಕವನಗಳು ಹೆಚ್ಚು ಸೂಕ್ಷ್ಮವಾದದ್ದನ್ನು ಹೇಳುತ್ತವೆ. ಆದರೂ ***ಕವಿಗೆ 'ಸುಖ / ಕೇವಲ ಒಂದು / ಹೊಂಗನಸಲ್ಲ / ನಾವಾಗೆ ಬರೆದು / ಪೂರ್ಣಗೊಳಿಸಬೇಕಾದ ವರ್ಣಚಿತ್ರ'***(ಪು.೬೪) ಎಂಬ ಅರಿವಿರುವ ಕಾರಣ ಅನೇಕ ಕವಿತೆಗಳು ಬದುಕಿನ ಮಿತಿಗಳನ್ನು ಮೀರುವ ಬಗೆಯನ್ನು ನಿರಂತರವಾಗಿ ಶೋಧಿಸುವ ಪ್ರಯತ್ನ ಮಾಡುತ್ತವೆ.

ಅನುಭವವನ್ನು ಲೈಂಗಿಕತೆಯ ಪರಿಧಿಯಿಂದಾಚೆಗೆ ಹೆಚ್ಚು ವಿಸ್ತರಿಸಲು ಸಾಧ್ಯವಾಗದಿರುವುದು ಮತ್ತು ಅಭಿವ್ಯಕ್ತಿ ಕ್ರಮದಲ್ಲಿ ವೈವಿಧ್ಯ ಕಾಣದೆ ಇರುವುದು ಸಂಕಲನದ ಮಿತಿಯಾಗಿದೆ. ಸಮಗ್ರ ಚಿಂತನೆ ಮತ್ತು ಅಭಿವ್ಯಕ್ತಿಯಲ್ಲಿ ಪ್ರಯೋಗಶೀಲತೆ ಸಾಧ್ಯವಾದಾಗಲೇ ಕವಿತೆಗೆ ಹೊಸ ಆಯಾಮ ದಕ್ಕುವುದು. ಅಂಥ ಸಾಧ್ಯತೆಯೊಂದು ಸಂಕಲನದಲ್ಲಿ ಗೋಚರಿಸುತ್ತದೆ.

–ಸಂತೋಷ ಚೊಕ್ಕಾಡಿ

ಪು: ವಿಸರ್ಜನೆ (ಕವನಗಳು) ಲೇ: ಅರವಿಂದ ಪ್ರ: ಅಭಿನವ, ಬೆಂಗಳೂರು (೯೪೪೮೮೦೪೯೦೫) ಪು: ೧೨೮ ಬೆಲೆ: ರೂ, ೧೨೫/-

ಆಧ್ಯಾತ್ಮಿಕ ಶೋಧನೆಯ ಕಾವ್ಯ ಪ್ರಯೋಗಗಳು



ಐ.ಐ.ಟಿ.ಯೊಂದರಲ್ಲಿ ಭೌತಶಾಸ್ತ್ರ ಸಂಶೋಧಕರಾಗಿರುವ ಅರವಿಂದ ಅವರ ಈ ಮೊದಲ ಕವನ ಸಂಕಲನ 'ತನ್ನ ಹಸಿಯಾದ ಆದರೆ ಕುತೂಹಲಕಾರಿಯಾಗಿರುವ ಪ್ರಯೋಗಶೀಲತೆಯ ಗುಣದಿಂದ ನಮ್ಮನ್ನು ಸೆಳೆಯುತ್ತದೆ. ಒಟ್ಟು ೪೯ ಪದ್ಯಗಳಿರುವ ಈ ಸಂಕಲನದ ಬಹುತೇಕ ಕವಿತೆಗಳು ಒಂದು ಬಗೆಯ ಅಸ್ತಿತ್ವವಾದಿ ಆಧ್ಯಾತ್ಮಿಕತೆಯನ್ನು ಶೋಧಿಸುವಂತೆ ಭಾಸವಾಗುತ್ತದೆ. ಒಂದು ಬಗೆಯ ಅಮೂರ್ತತೆಯತ್ತ ತುಡಿಯುವ ಹಲವಾರು ಕವಿತೆಗಳು ಈ ಸಂಕಲನದಲ್ಲಿವೆ.

ಮೊದಲ ಸಂಕಲನದಲ್ಲಿ ಸಾಧಾರಣವಾಗಿ ಕಾಣದೇ ಇರುವ ವಸ್ತು ವೈವಿಧ್ಯತೆಯನ್ನು ಮತ್ತು ಆತ್ಮವಿಶ್ವಾಸವನ್ನು ನಾವು ಇಲ್ಲಿ ಗಮನಿಸಬಹುದು. ಕವಿ ತಾವು ಶೋಧಿಸುತ್ತಿರುವ ವಾಸ್ತವ-ಸತ್ಯದ ಬೇರೆ ಬೇರೆ ಆಯಾಮಗಳನ್ನು ತಮಗೆ ದಕ್ಕಿದ ಅನುಭವಗಳ ಮೂಲಕ ನಿರೂಪಿಸುತ್ತಿದ್ದಾರೆ. ಮೇಲ್ಕಾಣಿಸಿದ ಶೋಧನೆಯನ್ನು ಅನಾವರಣ ಮಾಡಲು ಯತ್ನಿಸುತ್ತಿರುವ ಈ ಸಂಕಲನ ಹಲವಾರು ಬಾರಿ ತೀರಾ ವಾಚ್ಯ ಮತ್ತು ನಾಟಕೀಯವು ಆಗಿದೆ. "ನನಗೆ ರೂಪಕಗಳಾಗುವುದು ಬೇಕಿಲ್ಲ" ಎಂಬ ಘೋಷಣೆ ಒಂದು ಪದ್ಯದಲ್ಲಿ ಬಂದಿದ್ದರೂ ಸಹ ಲೇಖಕರು ತಮ್ಮ ಅನುಭವಗಳನ್ನು ರೂಪಕಗಳ ಮೂಲಕವೇ ನಿರೂಪಿಸುತ್ತಿರುವ ಕ್ರಮವನ್ನು ಸಹ ನಾವು ಗಮನಿಸಬಹುದು.

ಲೇಖಕರು ಜೀವನದ ಸತ್ಯ-ಮಿಥ್ಯಗಳನ್ನು ಶೋಧಿಸುವ ಆಶಯ ಹೊಂದಿದ್ದು ಇದರ ಸಾಕಾರಕ್ಕಾಗಿ ಸತತವಾದ ಪ್ರಯೋಗಕ್ಕೆ ಇಲ್ಲಿನ ಪದ್ಯಗಳನ್ನು ಒಡ್ಡಿದ್ದಾರೆ. ಯಾವುದೇ ಶೀರ್ಷಿಕೆ ಇಲ್ಲದೆ ಮುಕ್ತ ಓದಿಗೆ ಒತ್ತಾಯಿಸುವ ಕವನಗಳಿಂದ ಮೊದಲಾಗಿ ನವ್ಯ ಕಾವ್ಯದ ಮಾದರಿಯಲ್ಲಿ ಧುತ್ತನೇ ಅರ್ಥಕ್ಕೆ ಮುಗಿಯುವಂತೆ ಭಾಸವಾಗುವ ಹಲವಾರು ಕವನಗಳು ಇಲ್ಲಿವೆ. ಆದರೆ ಈ ಪ್ರಯೋಗಗಳೂ ತೀರಾ ಹಸಿಯಾಗಿರುವಂತೆಯೇ ಹಲವಾರು ಬಾರಿ ಕೃತಕವೂ ಆಗಿವೆ. ಈ ಕೆಲ ಸಾಲುಗಳನ್ನು ಗಮನಿಸಿ:

ವೃತ್ತಾಕಾರದ ಚಲನೆ
ಆಸಕ್ತಿ ಅಥವಾ ಧ್ಯೇಯ?
ಕೇಂದ್ರ ತ್ಯಾಗಿ ಹಾಗೂ ಕೇಂದ್ರಾಭಿಗಾಮಿಯ ನಡುವೆ
ಹಗ್ಗ ಜಗ್ಗಾಟ? ಕೊನೆ ಶುಭಂ

ಇಲ್ಲಿನ ಕೆಲವು ಕವನಗಳು ಶುದ್ಧ ಸಾಹಿತ್ಯ ಪ್ರಕಾರಗಳನ್ನು ಒಡೆದು, ಒಂದು ಬಗೆಯ ಮಿಶ್ರಣದ ಗುಣರೂಪವನ್ನು ಹೊಂದಿದೆ. ಸಂಕಲನದ ಮೊದಲ ಪದ್ಯ 'ಮಳೆಯನ್ನು ಹುಟ್ಟು ಎಂದೂ ಕರೆಯಬಹುದು' ಪದ್ಯ- ಗದ್ಯಗಳೆರಡನ್ನು ಮಿಶ್ರಮಾಡಿ ನಿರೂಪಿತವಾಗಿದೆ. ಮತ್ತೊಂದು ರಚನೆಯಲ್ಲಿ ಕವಿ-ಕವಿತೆ- ಮನುಷ್ಯನ ನಡುವಿನ ಸಂಬಂಧವನ್ನು ಅರಸುವ ಲೇಖಕರು "ಕವಿಯಾದ ದುರಂತದ ಪರಿಹಾರಕ್ಕೆ ನಾ ಕವಿತೆ ಬರಿತೀನಿ" ಎಂಬಂತಹ ದೇಶಾವರಿ ಹೇಳಿಕೆಯನ್ನು ನೀಡುತ್ತಾರೆ. ಹಾಗೆಯೇ 'ಒಂದು ಸಾಲಿನ ಕವಿತೆಗಳು' ಎಂಬ ಮತ್ತೊಂದು ಪದ್ಯದಲ್ಲಿ ಸಂಪ್ರದಾಯ ಎಂಬುದನ್ನು ವ್ಯಾಖ್ಯಾನಿಸುತ್ತಾ 'ಬಿಟ್ಟು ಬಂದ ಚಪ್ಪಲಿಗಳು ಪಾದುಕೆಗಳಾಗಿತ್ತು' ಎಂಬಂತಹ ಅರ್ಥಗರ್ಭಿತ ಸಾಲುಗಳನ್ನು ದಾಖಲಿಸಿದ್ದಾರೆ. ಅಂದರೆ ಈ ಮೊದಲ ಸಂಕಲನದಲ್ಲಿ ತೀರಾ ವಾಚ್ಯ ಮತ್ತು ನಾಟಕೀಯವೆನಿಸುವ ಸಾಲುಗಳು ಮತ್ತು ಧುತ್ತನೇ ಅರ್ಥವನ್ನು ಚಿಮ್ಮಿಸುವ ಕಾವ್ಯಾತ್ಮಕ ಸಾಲುಗಳು ಒಟ್ಟೊಟ್ಟಿಗೆ ಇವೆ. 'ವಾಸ್ತವ' ಎಂಬ ಕಿರುಕವಿತೆಯ ಈ ಅರ್ಥಗರ್ಭಿತ ಸಾಲುಗಳನ್ನು ಗಮನಿಸಿ: **ಗಲಭೆಯಲ್ಲಿ/ ಮಕ್ಕಳ ಶೂಗಳು**


ಚಲ್ಲಾಪಿಲ್ಲಿಯಾಗಿದಾಗ/ ಕಸ ಆಯುವ ಹುಡುಗ
ತನ್ನ ಕಾಲಿಗೊಂದುವ
ಶೂ ಹುಡುಕುತ್ತಿದ್ದ.

ಈ ಸಂಕಲನಕ್ಕೆ ಮುನ್ನುಡಿಯನ್ನು ಬರೆದ ಲಕ್ಷ್ಮೀಶ ತೋಳ್ಪಾಡಿಯವರು ಸರಿಯಾಗಿಯೇ ಗುರುತಿಸುವಂತೆ ಈ ಕವನ ಸಂಕಲನ ಇನ್ನೂ ಹೆಚ್ಚಿನ ಪರಿಷ್ಕರಣೆಯನ್ನು ಬೇಡುತ್ತದೆ. ಆದರೆ ಲೇಖಕರಿಗೆ ಕಾವ್ಯದ ಲಯ ಸಿದ್ಧಿಸಿರುವುದರಿಂದ ಇವರ ಮುಂದಿನ ಕಾವ್ಯ ಕೃಷಿಯ ಬಗ್ಗೆ ಕುತೂಹಲ ಮೂಡುತ್ತದೆ.

-ಟಿ. ಅವಿನಾಶ್

ಪು: ಮಾತು ಹಾಡಾಗಲಿ ಹಾಡು ಮಾತಾಗಲಿ ಲೇ: ಗಣೇಶ ಅಮೀನಗಡ ಪ್ರ: ಕವಿತಾ ಪ್ರಕಾಶನ, ಮೈಸೂರು(೯೮೮೦೧೦೫೫೨೬) ಪು: ೨೯೬ ಬೆ: ರೂ, ೩೦೦/-

ರಂಗಭೂಮಿ ಕುರಿತ ಪರಿಚಯಾತ್ಮಕ ಲೇಖನಗಳು



ಪತ್ರಕರ್ತ ಗಣೇಶ್ ಅಮೀನಗಡ ಅವರು ರಂಗಭೂಮಿ ಕುರಿತಾಗಿ 'ಪ್ರಜಾವಾಣಿ' 'ಸುಧಾ' ಪತ್ರಿಕೆಗಳಲ್ಲಿ ಬರೆದ ಲೇಖನಗಳ ಸಂಗ್ರಹವಿದು. 'ರಂಗಭೂಮಿಯೆ ಶಿವಾನುಭವ ಮಂಟಪವಾಗಿ', 'ಬದಲಾದ ರಂಗ ಕೈದಿಗಳು', 'ಪಂಜರದ ಗಿಳಿಗಳ ಹಾಡು ಪಾಡು', 'ದಣಿವರಿಯದ ರಂಗ ಕಾಯಕಗಳು', 'ನಾಟಕ ನೋಟ' ಎಂಬ ಐದು ವಿಭಾಗಗಳಲ್ಲಿ ಇಲ್ಲಿನ ಲೇಖನಗಳು ವಿಂಗಡಣೆಯಾಗಿವೆ. ಹಾನಗಲ್‌ನ ಕುಮಾರ ಶ್ರೀಗಳು ವೃತ್ತಿ ರಂಗಭೂಮಿಯನ್ನು ಪೋಷಿಸಿ ಬೆಳೆಸಿದ ವಿವರಗಳೊಂದಿಗೆ ಆರಂಭವಾಗುವ ಕೃತಿ ನಂತರ ರಂಗ ಸಂಗೀತ, ರಂಗಗೀತೆಗಳತ್ತ ಹೊರಳುತ್ತದೆ. ಬಿ.ವಿ.ಕಾರಂತರು ದೇಸಿ ಮಟ್ಟುಗಳನ್ನು ಬಳಸಿ ವೃತ್ತಿರಂಗಭೂಮಿಯ ಸಂಗೀತ ಪರಂಪರೆಯನ್ನು ಆಧುನಿಕ ರಂಗಭೂಮಿಗೆ ವರ್ಗಾಯಿಸಿದ ಪರಿಯನ್ನು ಇಲ್ಲಿ ಪರಿಚಯಿಸಲಾಗಿದೆ. ಹಾಗೇ, ಪೌರಾಣಿಕ ನಾಟಕಗಳಲ್ಲಿನ ಭಾಷಾ ಸಮೃದ್ಧಿ, ಹೋರಾಟದ ಹಾಡುಗಳು ನಾಟಕಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಳಕೆಯಾಗಿ ರಂಗಭೂಮಿ ಚಳವಳಿಗಳ ಭಾಗವಾದ ಕುರಿತ ಸ್ಥೂಲವಾದ ವಿವರ ಇಲ್ಲಿ ದಾಖಲಾಗಿದೆ. ನಾಡಿನ ಉದ್ದಗಲಕ್ಕೂ ಹರಡಿರುವ ರಂಗಗೀತೆಗಳನ್ನು ಹಾಡುವ ಕಲಾವಿದರ ಹೆಸರುಗಳೂ ಉಲ್ಲೇಖಗೊಂಡಿವೆ.

ವೃತ್ತಿ ರಂಗಭೂಮಿಯಲ್ಲಿ ಭಾರೀ ಯಶಸ್ಸು ಕಂಡ ನಾಟಕಗಳು, ನಾಟಕದ ಜಾತ್ರೆಯಂತಿರುವ ಬನಶಂಕರಿ ಜಾತ್ರೆ, ನಾಟಕಗಳಲ್ಲಿ ಪ್ರವೇಶಗೊಂಡ ಐಟಂ ಸಾಂಗ್, ಬದಲಾದ ರಂಗ ವಿಮರ್ಶೆಯ ಧೋರಣೆ, ಮೈಸೂರಿನ ರಂಗಾಯಣದಲ್ಲಿ 'ಮಲೆಗಳಲ್ಲಿ ಮದುಮಗಳು' ನಾಟಕದ ಟಿಕೆಟ್ ಕಾಳಸಂತೆಯಲ್ಲಿ ಮಾರಾಟವಾಗಿದ್ದು.....ಹೀಗೆ ಹತ್ತು ಹಲವು ವಿವರಗಳನ್ನು ಕಟ್ಟಿಕೊಡಲಾಗಿದೆ. ಕೆಲವು ಕಲಾವಿದರ ಸಂದರ್ಶನವೂ ಅಡಕವಾಗಿದೆ. 'ಬ್ಯೂಟಿ ಪಾರ್ಲರ್‌ನಲ್ಲಿ ನಟಿ, ಜಿಮ್‌ನಲ್ಲಿ ನಟ ಹುಟ್ಟುವುದಿಲ್ಲ' ಎಂದು ಸಂದರ್ಶನದಲ್ಲಿ ನಟ ಮಂಡ್ಯ ರಮೇಶ್ ಹೇಳಿರುವ ಮಾತು ಯುವ ತಲೆಮಾರಿನ ನಟ ನಟಿಯರಿಗೆ ನಾಟುವಂತಿದೆ. ಇದೇ ಭಾಗದಲ್ಲಿ ಮಕ್ಕಳಿಗೆ ರಂಗಭೂಮಿ ಶಿಕ್ಷಣದ ಮೂಲಕ ವಿಶ್ವಾಸ ಮೂಡಿಸುವ ಮಾದರಿ ಕುರಿತು ಇರುವ ಬರಹ ಅರ್ಥಪೂರ್ಣವಾಗಿದೆ.

ಎರಡನೇ ಭಾಗದಲ್ಲಿ ಮೈಸೂರು ರಂಗಾಯಣದ ಹುಲಗಪ್ಪ ಕಟ್ಟೀಮನಿ ರಾಜ್ಯದ ವಿವಿಧ ಜೈಲುಗಳಲ್ಲಿರುವ ಖೈದಿಗಳಿಗೆ ನಾಟಕ ಮಾಡಿಸಿ ಅವರ ಬದುಕಿನಲ್ಲಿ ಬದಲಾವಣೆ ಮೂಡಿಸಿದ ಚಿತ್ರಣವಿದೆ. ಚಿಂದಿ ಆಯುವ ಮಕ್ಕಳಿಂದಲೆ ನಾಟಕ ಮಾಡಿಸಿದ ಜಾನ್ ದೇವರಾಜ್ ಕುರಿತ ಲೇಖನ ಕೂಡ ಗಮನ ಸೆಳೆಯುವಂತಿದೆ. 'ಪಂಜರದ ಗಿಳಿಗಳ ಹಾಡು ಪಾಡು' ವಿಭಾಗದಲ್ಲಿ ರಂಗಭೂಮಿಯಲ್ಲಿ ನಟಿಯರು ಅನುಭವಿಸಿದ ಸಂಕಷ್ಟಗಳ ಚಿತ್ರಣವಿದ್ದು ಅವು ಮನಕಲುಕುವಂತಿವೆ. 'ದಣಿವರಿಯದ ರಂಗ ಕಾಯಗಳು' ವಿಭಾಗದಲ್ಲಿ ಏಣಗಿ ಬಾಳಪ್ಪ ಅವರು ತಮ್ಮ ೯೫ ನೇ ವಯಸ್ಸಿನಲ್ಲೂ, ಅವರ ಪತ್ನಿ ಲಕ್ಷ್ಮೀಬಾಯಿ ೭೯ರ ಪ್ರಾಯದಲ್ಲೂ ಬಣ್ಣ ಹಚ್ಚಿ ರಂಗದ ಮೇಲೆ ಬಂದಿದ್ದರು ಎಂಬ ಲೇಖನ ಓದಿದಾಗ ಆ ತಲೆಮಾರಿನ ಕಲಾವಿದರಿಗಿದ್ದ ಬದ್ಧತೆಯ ದರ್ಶನವಾಗುತ್ತದೆ. ಇದರ ಜೊತೆಗೇ ವೃತ್ತಿ ರಂಗಭೂಮಿ ಜೊತೆಗೆ ಆಧುನಿಕ ರಂಗಭೂಮಿಯಲ್ಲಿ ತೊಡಗಿಸಿಕೊಂಡಿರುವ ರಾಜ್ಯದ ಹಲವು ಕಲಾವಿದರ, ತಂತ್ರಜ್ಞರ ಸಕಲ ವಿವವರಗಳು ಇದೇ ಭಾಗದಲ್ಲಿವೆ.

ಕೃತಿಯ ಕೊನೆಯ ಭಾಗವಾದ 'ನಾಟಕ ನೋಟ' ವಿಭಾಗದಲ್ಲಿ ಲೇಖಕರು ತಾವು ನೋಡಿದ ನಾಟಕಗಳ ಕುರಿತು ಬರೆದಿದ್ದಾರೆ. ಇವುಗಳಲ್ಲಿ ಕೆಲವು ವಿಮರ್ಶೆಯ ಧಾಟಿಯಲ್ಲಿದ್ದರೆ ಒಂದಿಷ್ಟು ಲೇಖನಗಳು ಪರಿಚಯಾತ್ಮಕ ಸ್ವರೂಪದಲ್ಲಿವೆ. ಅಕಾಡೆಮಿಕ್ ಅಂಶಗಳತ್ತ ಲೇಖಕರು ಹೆಚ್ಚು ಗಮನಹರಿಸಿಲ್ಲ.

ಇಲ್ಲಿನ ಎಲ್ಲಾ ಲೇಖನಗಳು ಪತ್ರಿಕಾ ಬರಹಗಳಾಗಿದ್ದು ಪದಗಳ ಮಿತಿ ಇರುವುದರಿಂದ ಅನೇಕ ಲೇಖನಗಳು ಅಪೂರ್ಣ ಅನಿಸುತ್ತವೆ. ವಿವರಗಳ ವಿಷಯಕ್ಕೆ ಬಂದರೆ ಆಧುನಿಕ ರಂಗಭೂಮಿಗಿಂತ ವೃತ್ತಿರಂಗಭೂಮಿಯ ವಿಷಯಗಳೆ ಪ್ರಾಮುಖ್ಯತೆ ಪಡೆದಿವೆ. ರಾಜ್ಯದಲ್ಲಿ ತಮ್ಮದೆ ಆದ ಮಿತಿಯಲ್ಲಿ ರಂಗಚಟುವಟಿಕೆಗಳ ಮೂಲಕ ಈ ಕಲೆಯನ್ನು ಜೀವಂತವಾಗಿಟ್ಟಿರುವ ಹಲವು ಹವ್ಯಾಸಿ ತಂಡಗಳ ಮಾಹಿತಿ ಇಲ್ಲದಿರುವುದು ಕೃತಿಯ ಕೊರತೆಯಾಗಿ ಕಾಣುತ್ತದೆ. ಆದರೂ ನಾಲ್ಕೈದು ದಶಕಗಳ ಕಾಲ ರಂಗಭೂಮಿಯಲ್ಲಿ ನಿರಂತರವಾಗಿ ತೊಡಗಿಸಿಕೊಂಡರೂ ಬೆಳಕಿಗೆ ಬಾರದ ಕಲಾವಿದರು ನಮ್ಮ ನಡುವೆ ಇದ್ದಾರೆ. ಪರಿಚಿತರ ಜೊತೆಗೆ ಅಂತವರೂ ಕೃತಿಯಲ್ಲಿ ಸೇರಿರುವುದು ಸಮಾಧಾನದ ಸಂಗತಿ. ಕರ್ನಾಟಕದ ರಂಗಭೂಮಿಯ ಕುರಿತು ಸಮಗ್ರ ಅಧ್ಯಯನ ನಡೆಸುವವರಿಗೆ ಈ ಕೃತಿ ಆಕರವಾಗಬಹುದು.


-ಎಂ. ರಾಘವೇಂದ್ರ

'ಹೊಸ ಮನುಷ್ಯ: ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



ಎನ್. ಆರ್. ನಾಕಸುಬ್ರಮಣ್ಯ
ಮತ್ತು ಕುಟುಂಬ
ಬೆಂಗಳೂರು

'ಹೊಸ ಮನುಷ್ಯ: ಓದುಗರೆಲ್ಲರಿಗೂ
ಹಾರ್ದಿಕ ಶುಭಾಶಯಗಳು



ಕೆ.ಟಿ. ಮೋಹನ್
ಮತ್ತು ಕುಟುಂಬ
ಬೆಂಗಳೂರು

ತಿಂಗಳ ಕೊನೆಯ ಸಾಲುಗಳು



ನೀನು ನೆಟ್ಟ ಗಿಡದ ಫಲವನ್ನು ಪಶು ಪಕ್ಷಿ ಪ್ರಾಣಿಗಳು ತಿಂದರೆ ಅದು ನೀನು ನೀಡಿದ ದಾನವೆಂದೇ ಪರಿಗಣಿತವಾಗುವುದು.

-ಕುರಾನ್

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

Regd. News Paper RNI No. KARKAN/2012/47568
Rgd No. KA/SK/SMG-1209/2019-21

ಇವರಿಗೆ \ To

If undelivered, please return to D.S. Nagabhushana, Editor,
Hosa Manushya HIG-x, Nudi Kallahalli Extension,
Vinoba Nagara, Shivamogga -577204(Karnataka)